ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 26 ಸಂಚಿಕೆ 17 ಏಪ್ರಿಲ್ 25, 2004 ಬೆಲೆ ರೂ. 3.00





ವಿಧಾನಸಭಾ ಚುನಾವಣೆ
ಸಿಪಿಐ(ಎಂ) ಅಭ್ಯರ್ಥಿ


ಕರ್ನಾಟಕದಲ್ಲಿ ಸಿಪಿಐ(ಎಂ) ಆದ್ಯತೆಗಳು



ಕೋಮುವಾದಿಗಳ ವಿರುದ್ಧ ಸಾಹಿತಿ-ಕಲಾವಿದರು



ಕಟುಕ ಹೃದಯಿ ವಾಜಪೇಯಿ



ನರೇಂದ್ರಮೋದಿ ಈಗಲಾದರೂ ತೊಲಗಬೇಕು



- ಶಿಕ್ಷಣ ವ್ಯವಸ್ಥೆಯ ವಿನಾಶ
- ಬಿಜೆಪಿ ಆಡಳಿತದಲ್ಲಿ ವಿದೇಶ ಸಾಲ

ಪೋಸ್ಟರ್
ಅಮೆರಿಕದ ಅಡಿಯಾಳು



ದೇಶದ್ರೋಹಿಗಳು ದೇಶದ ಉನ್ನತ ಸ್ಥಾನಗಳನ್ನು ಅಲಂಕರಿಸಬಹುದೆ? ಜನತೆ ಈ ಬಗ್ಗೆ ಒಂದು ತೀರ್ಮಾನ ಕೈಗೊಳ್ಳುವ ಒಳಗಾಗಿ ಅಟಲ್ ಬಿಹಾರಿ ವಾಜಪೇಯಿ ಅವರು ಮತ್ತೊಂದು ಬಾರಿ ದೇಶದ ಪ್ರಧಾನಿಯಾಗಲು ಬಯಸಿದ್ದಾರೆ. ದೇಶದ್ರೋಹದ ಕಪ್ಪುಚುಕ್ಕೆಗಳನ್ನು ಮರಮಾಡಲು 1942 ರ ಚಳುವಳಿಯಲ್ಲಿ ಅವರದೊಂದು ಪಾತ್ರವಿತ್ತು ಎಂದು ನಂಬಿಸುವ ಪ್ರಯತ್ನ ವ್ಯವಸ್ಥಿತವಾಗಿ ನಡೆದಿದೆ.

ಸ್ವಾತಂತ್ರ್ಯ ಚಳುವಳಿಯಲ್ಲಿ ವಾಜಪೇಯಿ 'ವೀರ' ಪಾತ್ರ !

ಶರತ್‌ಚಂದ್ರ

ಕನ್ಯಾಕುಮಾರಿಯಲ್ಲಿ 'ಭಾರತ ಉದಯ ಯಾತ್ರೆ' ಆರಂಭಿಸುತ್ತಾ ಎಲ್.ಕೆ.ಅಡ್ವಾಣಿ ಕಮ್ಯುನಿಸ್ಟರು ಸ್ವಾತಂತ್ರ್ಯ ಚಳುವಳಿಗೆ 'ದ್ರೋಹ' ಬಗೆದಿದ್ದರು - ಎಂಬ ಆರೆಸ್ಸೆಸ್ ಬುರುಡೆಯನ್ನು ಪುನರುಚ್ಚರಿಸಿದ್ದರು. ಇದಕ್ಕೆ ಉತ್ತರವಾಗಿ ಕಾಂ. ಪ್ರಕಾಶ್ ಕಾರಟ್ ತಮಿಳುನಾಡಿನಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಜೈಲಿಗೆ ಹೋದ ಕಮ್ಯುನಿಸ್ಟ್ ನಾಯಕರ ಹೆಸರು ಪಟ್ಟಿ ಬಿಡುಗಡೆ ಮಾಡಿದರು. ತಾಕತ್ತಿದ್ದರೆ ಆರೆಸ್ಸೆಸ್ ಇಂತಹ ಪಟ್ಟಿ ಬಿಡುಗಡೆ ಮಾಡಲಿ ಎಂದು ಸವಾಲು ಹಾಕಿದ್ದರು. ಈವರೆಗೆ ಅಡ್ವಾಣಿ ಆಗಲಿ, ಅವರ ಚಮಚಾಗಳಾಗಲಿ ಈ ಸವಾಲು ಸ್ವೀಕರಿಸಿಲ್ಲ.

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಎಡಪಕ್ಷಗಳ ಭಾಗವಹಿಸುವಿಕೆಯ ಚರಿತ್ರೆ ಚೆನ್ನಾಗಿ ದಾಖಲಿತವಾಗಿದೆ. ಆ ಬಗ್ಗೆ ಪುನಃ ವಿವರವಾದ ವಿವರಣೆಯ ಅಗತ್ಯವಿಲ್ಲ. 'ಕ್ವಿಟ್ ಇಂಡಿಯಾ' ಚಳುವಳಿಯ ಸುವರ್ಣಮಹೋತ್ಸವದ ಸಂದರ್ಭದಲ್ಲಿ ಪಾರ್ಲಿಮೆಂಟು ಉದ್ದೇಶಿಸಿ ಮಾತನಾಡುತ್ತಾ, ಆಗಿನ ಅಧ್ಯಕ್ಷ ಡಾ. ಶಂಕರ್ ದಯಾಳ್ ಶರ್ಮಾರ ಹೇಳಿಕೆ ಉದ್ಧರಿಸಿದರೆ ಸಾಕೇನೋ. ಡಾ. ಶರ್ಮಾರವರು ಅವರ ಭಾಷಣದಲ್ಲಿ ಹೀಗೆ ಹೇಳಿದ್ದರು - "ಕಾನ್‌ಪುರ, ಜಮಶೆಡ್‌ಪುರ ಮತ್ತು ಅಹಮದಾಬಾದ್‌ನ ಮಿಲ್ಲುಗಳಲ್ಲಿ ಮುಷ್ಕರ ನಡೆದಿತ್ತು. ಅನಂತರ ದೆಹಲಿಯಿಂದ ಬ್ರಿಟಿಷ್ ಸರ್ಕಾರಕ್ಕೆ ಕಳಿಸಿದ್ದ ವರದಿಯಲ್ಲಿ ಕಮ್ಯುನಿಸ್ಟ್ ಪಕ್ಷದ ಬಗ್ಗೆ ಹೇಳಲಾಗಿತ್ತು". ಈ ಪಕ್ಷದ ಸದಸ್ಯರ ವರ್ತನೆ ನೋಡಿದರೆ, ಅದು ಬ್ರಿಟಿಶ್ ವಿರೋಧಿ ಕ್ರಾಂತಿಕಾರಿಗಳ ಪಕ್ಷ ಎಂಬುದು ಸ್ಪಷ್ಟವಾಗುತ್ತದೆ. ಇದು ಆಗಲೇ ಗೊತ್ತಿರುವ ವಿಷಯ ಕೂಡಾ....".

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಆರೆಸ್ಸೆಸ್ ಪಾತ್ರದ ಗುಟ್ಟು ಎಂದೋ ರಟ್ಟಾಗಿದೆ. 1942 ರಲ್ಲಿ ಬಾಂಬೆ ಪ್ರಾಂತ್ಯದ ಗೃಹ ಇಲಾಖೆ ಹೀಗೆ ವರದಿ ಮಾಡಿತ್ತು "ಸಂಘ ಕಾನೂನು ಪ್ರಕಾರ ನಡೆದುಕೊಂಡಿದೆ. ಆಗಸ್ಟ್ 1942 ರ ನಂತರ ಜರುಗಿದ ಗಲಭೆಗಳಲ್ಲಿ ಭಾಗವಹಿಸುವುದರಿಂದ ದೂರ ಉಳಿದಿದೆ"

ಕಳೆದ ವರ್ಷವಷ್ಟೇ ಅಡ್ವಾಣಿಯವರು ಹಿಂದುತ್ವದ ಅಧ್ವರ್ಯು ವಿ.ಡಿ.ಸಾವರ್ಕರ್ ಹೆಸರನ್ನು ಅಂಡಮಾನ್ ವಿಮಾನ ನಿಲ್ದಾಣಕ್ಕೆ ಇಟ್ಟಿದ್ದರು. ಈ 'ವೀರ' ಸಾವರ್‌ಕರ್ ತನ್ನನ್ನು ಅಂಡಮಾನ್ ಜೈಲಿನಿಂದ ಬಿಡುಗಡೆ ಮಾಡುವಂತೆ ಬ್ರಿಟಿಷರನ್ನು ಬೇಡಿಕೊಂಡಿದ್ದರು. ನವೆಂಬರ್ 14, 1913 ರಂದು ಬರೆದ ಪತ್ರದಲ್ಲಿ ಸಾವರ್‌ಕರ್ ತನ್ನ 'ವೀರ'ತನ ತೋರಿಸಿರಲಿಲ್ಲ. ಬದಲಾಗಿ ಹೇಡಿತನ ತೋರಿಸಿದ್ದರು. "ನಾನು ಬ್ರಿಟಿಷ್ ಸರ್ಕಾರದ ಸೇವೆ ಮಾಡಲು ತಯಾರಿದ್ದೇನೆ. ಸರ್ಕಾರ ಹೇಳಿದಂತೆ ಯಾರ ಸೇವೆಗೂ ನಾನು ತಯಾರು. ನಾನು ನನ್ನ ಮನಸ್ಸಾಕ್ಷಿಯಾಗಿ ಈ ಬದಲಾವಣೆ ಮಾಡಿಕೊಂಡಿದ್ದೇನೆ".

ಬಿಜೆಪಿ ಮತ್ತು ಅದರ ಹಿಂದಿನ ಅವತಾರವಾದ ಜನಸಂಘ-ಅದರ ಬಗ್ಗೆ ಕಹಿಯಾದ ಸತ್ಯ ಸಾರ್ವಜನಿಕಗೊಳಿಸಿದಾಗ ಯಾವಾಗಲೂ ಕೂಗಾಡುತ್ತಾರೆ. 'ಗೌರವಯುತ ಪ್ರಚಾರ' ಆಗ ಅವರಿಗೆ ನೆನಪಾಗುತ್ತದೆ. ಅವರ ಬುರುಡೆಗಳನ್ನು ಯಾರಾದರೂ ಸುಳ್ಳು ಎಂದು ಬಯಲು ಮಾಡುವವರೆಗೆ ಆರಾಮವಾಗಿ ಅದನ್ನು ಹೊಡೆಯುತ್ತಾರೆ. '2004 ಮುನ್ನೋಟ' ದ 48 ಪುಟಗಳಲ್ಲಿ 52 ಫೋಟೋಗಳಿಂದ ಅಲಂಕರಿಸಿರುವ 'ಪರಮ ನಾಯಕ'ನ ಬಗೆಗಿನ ಸತ್ಯ ಸಹ ಅವರಿಗೆ ನೆನಪಿಸದೆ ವಿಧಿಯಿಲ್ಲ.

ವಾಜಪೇಯಿ ದ್ರೋಹಿ:

1942 ರಲ್ಲಿ ಅಟಲ್ ಬಿಹಾರಿ ವಾಜಪೇಯಿಗೆ 16 ವರ್ಷ. ಆಗಲೇ ಆತ ಆರೆಸ್ಸೆಸ್ ಸದಸ್ಯ. ಆರೆಸ್ಸೆಸ್ ಶಾಖೆಯ ನಿರ್ದೇಶನದಂತೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸೇ ಇರಲಿಲ್ಲ. ಆದರೆ ಆತನ ಹಳ್ಳಿಯಲ್ಲಿ ಆಗಸ್ಟ್ 1942 ರ ಜನ ಚಳುವಳಿಯ ಅಲೆ ಜೋರಾಗಿತ್ತು. 1942 ರ ಆಗಸ್ಟ್ 27 ರಂದು ಅಟಲ್‌ರ ಹಳ್ಳಿ, ಬಟೇಶ್ವರ್‌ನಲ್ಲಿ ಸಮರಶೀಲ ಹೋರಾಟ ನಡೆಯಿತು. ಈ ಹೋರಾಟದಲ್ಲಿ ನಮ್ಮ 'ಪರಮ ನಾಯಕ' ಭಾಗವಹಿಸಲಿಲ್ಲ. ಮಾತ್ರವಲ್ಲ, ತಾನು ಅದರಲ್ಲಿ ಭಾಗವಹಿಸಲಿಲ್ಲ ಎಂದು ಮ್ಯಾಜಿಸ್ಟ್ರೇಟರಿಗೆ ಹೇಳಿಕೆ ಬರಕೊಟ್ಟಿದ್ದಾನೆ. ಅದೂ ಸಾಲದು ಎಂಬಂತೆ, ಹೋರಾಟದಲ್ಲಿ ಭಾಗವಹಿಸಿದವರ ಹೆಸರುಗಳನ್ನು ಪೊಲೀಸರಿಗೆ ಕೊಟ್ಟಿದ್ದಾನೆ. ಅದರಿಂದಾಗಿ ಅವರ ಮಿತ್ರರಿಗೆ ಶಿಕ್ಷೆಯೂ ಆಗಿದೆ. ಈ ಪತ್ರ ಈಗ ಸಾರ್ವಜನಿಕ ದಾಖಲೆಯಾಗಿದ್ದು, ಆ ಪತ್ರದಲ್ಲಿ ಇದ್ದ ಸಹಿ ತನ್ನದೇ ಎಂದು ವಾಜಪೇಯಿ ಒಪ್ಪಿದ್ದು ಆಗಿದೆ (ಫ್ರಂಟ್‌ಲೈನ್ ಫೆಬ್ರವರಿ 20, 1998). ಹೀಗಿದೆ 'ಪರಮ ನಾಯಕ'ನ ಸ್ವಾತಂತ್ರ್ಯ ಹೋರಾಟದಲ್ಲಿನ ಪಾತ್ರದ 'ವೀರ' ಕಥೆ!

ಕೆಲವು ಪತ್ರಕರ್ತರು ವಾಜಪೇಯಿಯ 'ವೀರಗಾಥೆ'ಯನ್ನು ಬಯಲುಪಡಿಸುವ ಮೊದಲು, ವಾಜಪೇಯಿ ಮತ್ತು ಅವರ ಚಮಚಾಗಳು ಕ್ವಿಟ್ ಇಂಡಿಯಾದೊಂದಿಗೆ, ತನ್ನ ರಾಜಕೀಯ ಜೀವನ ಆರಂಭಿಸಿದ್ದರು ಎಂಬ ಮಹಾ ಬುರುಡೆ ಬಿಡುತ್ತಿದ್ದರು. 1997 ರಲ್ಲಿ ವಾಜಪೇಯಿ ಜನ್ಮದಿನದಂದು(ಡಿಸೆಂಬರ್ 25) ಪ್ರಕಟಿತವಾದ ಒಂದು ಪ್ರಾಯೋಜಿತ ಲೇಖನದಲ್ಲಿ "........ ಆತನ ರಾಷ್ಟ್ರೀಯ ಭಾವನೆ ಕ್ವಿಟ್ ಇಂಡಿಯಾ ಚಳುವಳಿಯಿಂದ ಸ್ಫೂರ್ತಿ ಪಡೆದಿತ್ತು. ಸ್ವಾತಂತ್ರ್ಯಕ್ಕೆ ಒತ್ತಾಯಿಸಿ ಎದ್ದ ದನಿಗೆ, ತನ್ನ ದನಿ ಕೂಡಿಸಿದ್ದರು..." ಎಂದೆಲ್ಲಾ ಹಾಡಿ ಹೊಗಳಲಾಗಿತ್ತು.

ಬೇರೆಯವರು ಮಾತ್ರವಲ್ಲ ಸ್ವತಃ ವಾಜಪೇಯಿಯವರೇ ಈ ಹೇಳಿಕೆ ಹೊರಡಿಸಿದ್ದರು. ".... ನಾನು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಗ್ವಾಲಿಯರ್‌ನಲ್ಲಿ ಬಂಧಿತನಾದೆ. ಆಗ್ರಾಕ್ಕಿಂತ 60 ಕಿ.ಮಿ. ದೂರದಲ್ಲಿರುವ ನನ್ನ ಹಳ್ಳಿ ಬಟೇಶ್ವರ್‌ಗೆ ನನ್ನನ್ನು ಕಳಿಸಲಾಯಿತು. ಬಟೇಶ್ವರದಲ್ಲೂ ನಾನು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದೆ". ಹಸಿ ಹಸಿ ಸುಳ್ಳು!

ವಾಜಪೇಯಿ ಸ್ವಾತಂತ್ರ್ಯ ಚಳುವಳಿಯಲ್ಲಿ ಎಂದೂ ಭಾಗವಹಿಸಲಿಲ್ಲ. ಮಾತ್ರವಲ್ಲ, ತಾನು ಸ್ವಾತಂತ್ರ್ಯ ಹೋರಾಟಗಾರ ಎಂದು ಪೋಸು ಕೊಡುತ್ತಾ ಬಂದಿದ್ದಾರೆ. ಕೆಲವು ಪತ್ರಕರ್ತರು ನಿಜಕಥೆ ಬಯಲು ಮಾಡಿದ ಮೇಲೆ ಈಗ ಸುಮ್ಮನಾಗಿದ್ದಾರೆ. ಇದು ಆರೆಸ್ಸೆಸ್ ಸದಸ್ಯರಿಗೆ ಮಾಮೂಲಿ.

ಆಗಸ್ಟ್ 27, 1942 ರಂದು ಬಟೇಶ್ವರ್‌ನಲ್ಲಿ ನಡೆದಿದ್ದೇನು?


ಯಮುನಾ ನದಿಯ ದಂಡೆಯಲ್ಲಿರುವ ಬಟೇಶ್ವರ್‌ಕ್ಕೆ ಬ್ರಿಟಿಷ್-ವಿರೋಧಿ ದಂಗೆಗಳ ಪರಂಪರೆಯೇ ಇದೆ. 1857 ರ ಪ್ರಥಮ ಸ್ವಾತಂತ್ರ್ಯ ಯುದ್ಧದಲ್ಲೇ ಬಟೇಶ್ವರದ ಪಾತ್ರ ಇತ್ತು. 1927 ರಿಂದಲೇ ಈ ಹಳ್ಳಿ ಕಾಂಗ್ರೆಸ್‌ನ ಭದ್ರ ಕೋಟೆ ಎಂದು ಬ್ರಿಟಿಷ್ ಸರ್ಕಾರ ಗುರುತಿಸಿತ್ತು. 1942 ಆಗಸ್ಟ್‌ನ 'ಕ್ವಿಟ್ ಇಂಡಿಯಾ'ದ ಕರೆ ಇಲ್ಲಿಗೆ ತಲುಪಲು ತಡವಾಗಲಿಲ್ಲ. ಕೆಲವೇ ದಿನಗಳಲ್ಲಿ ಇಬ್ಬರು ಕಾಂಗ್ರೆಸ್ ಕಾರ್ಯಕರ್ತರುಗಳನ್ನು - ಅಮರನಾಥ್ ದೀಕ್ಷಿತ್ ಮತ್ತು ಬಾಗ್ಲಾ - ಬಂಧಿಸಲಾಯಿತು. ಮತ್ತೊಬ್ಬ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತ ಮತಾದಿನ್ ಭೂಗತರಾಗಿದ್ದರು. ಸ್ಕೂಲು, ಕಾಲೇಜುಗಳಲ್ಲಿ ಓದುತ್ತಿದ್ದ ಹಲವರು ಹಳ್ಳಿಗೆ ವಾಪಸು ಬಂದಿದ್ದು, ಏನಾದರೂ ಜೋರಿನ ಪ್ರತಿಭಟನೆ ಹಳ್ಳಿಯಲ್ಲೇ ನಡೆಸಬೇಕು ಎಂದು ರಹಸ್ಯ ಸಭೆಗಳಲ್ಲಿ ತೀರ್ಮಾನಿಸಲಾಯಿತು. ಅಟಲ್ ಬಿಹಾರಿ ಅಥವಾ ಸೋದರ ಪ್ರೇಮ ಬಿಹಾರಿಯವರು ಇವು ಯಾವುದರಲ್ಲೂ ಭಾಗವಹಿಸಿರಲಿಲ್ಲ.

ಈ ಪ್ರಸಿದ್ಧವಾದ ಘಟನೆ ನಡೆದಿದ್ದು ಆಗಸ್ಟ್ 27, 1942 ರಂದು. ಅದು ರಕ್ಷಾಬಂಧನದ ಮರುದಿನ 'ಭುಜಾರಿಯಾ ಕಾ ಮೇಲಾ' ಎಂಬ ಹಳ್ಳಿಯಲ್ಲಿ ಹಬ್ಬಕ್ಕಾಗಿ 200 ಕ್ಕೂ ಹೆಚ್ಚು ಜನ ಸೇರಿ ಸಂಗೀತ ನೃತ್ಯ ನಡೆಯುತ್ತಿತ್ತು. ಆ ಸಂದರ್ಭ ಬಳಸಿ ಕೆಲವು ಯುವಕರು ಗಾಂಧೀಜಿಯ ಪ್ರತಿಜ್ಞೆ ಓದಿ ಹೇಳಿ, ಬ್ರಿಟಿಷ್-ವಿರೋಧಿ ಘೋಷಣೆಯನ್ನು ಕೂಗಿದರು. ಮಾತ್ರವಲ್ಲ, ಪ್ರತಿಭಟನೆಯಾಗಿ ಬಟೇಶ್ವರ್ ಅರಣ್ಯ ಇಲಾಖೆ ಆಫೀಸಿಗೆ ಮೆರವಣಿಗೆಯಲ್ಲಿ ಹೋಗಿ, ಆ ಆಫೀಸನ್ನು ವಶಪಡಿಸಿಕೊಳ್ಳಬೇಕೆಂದು ಕರೆ ಇತ್ತರು. ಅಲ್ಲಿದ್ದ ಜನ ಆ ಯುವಕರ ಜತೆ ಘೋಷಣೆ ಕೂಗಿ, ಅವರನ್ನು ಅರಣ್ಯ ಆಫೀಸಿಗೆ ಹಿಂಬಾಲಿಸಿದರು. ಅರಣ್ಯ ಆಫೀಸಿಗೆ ತಲುಪಿದಾಗ ಅದರ ಮೇಲೆ ಕಾಂಗ್ರೆಸ್ ಧ್ವಜ ಹಾರಿಸಲಾಯಿತು. ಆಗಿನ ನೂಕುನುಗ್ಗಲಿನಲ್ಲಿ ಅರಣ್ಯ ಆಫೀಸಿನ ಕಾಂಪೌಂಡ್ ಗೋಡೆ ಜರಿದು ಬಿತ್ತು. ಆಮೇಲೆ ಇನ್ನೊಂದು ಪೋಸ್ಟ್‌ಗೆ ಜನ ಮೆರವಣಿಗೆಯಲ್ಲಿ ಘೋಷಣೆ ಕೂಗುತ್ತಾ ಹೋದರು. ನಡೆದಿದ್ದು ಇಷ್ಟೆ.

ಇದು ಸಣ್ಣ ಘಟನೆಯಾದರೂ ಬ್ರಿಟಿಷ್ ಸರ್ಕಾರ ಅದನ್ನು ಗಂಭೀರವಾಗಿ ತೆಗೆದುಕೊಂಡಿತು. ಅರಣ್ಯ ಆಫೀಸು ಪೋಲೀಸರನ್ನು ಕರೆಸಿತು. ಮರುದಿನ ಪೋಲೀಸ್ ಪಡೆ ಹಳ್ಳಿಯ ಮೇಲೆ ಮುಗಿಬಿತ್ತು. ಆದಿನ ಗುಂಪಿನಲ್ಲಿ ಇದ್ದವರನ್ನೆಲ್ಲಾ ಬಂಧಿಸುವುದಾಗಿ ಘೋಷಿಸಿ, 37 ಜನರ ಹೆಸರುಗಳನ್ನು ಸೇರಿಸಿ ಎಫ್‌ಐಆರ್ ಹಾಕಲಾಯಿತು. ಅದರಲ್ಲಿ 11 ಜನರು ಅಂದು ಸಿಕ್ಕಿಬಿದ್ದರು. ಅವರಲ್ಲಿ ಅಟಲ್ ಬಿಹಾರಿ ಮತ್ತು ಸೋದರ ಪ್ರೇಮ ಬಿಹಾರಿ ಇಬ್ಬರು. ಬಂಧಿತರನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರು ಪಡಿಸಲಾಯಿತು. ಅಲ್ಲಿ ಅಟಲ್ ಮತ್ತು ಪ್ರೇಮ್ ಬಿಹಾರಿ ಈಗ ಕುಖ್ಯಾತವಾಗಿರುವ ತಪ್ಪೊಪ್ಪಿಗೆ ಕೊಟ್ಟರು. ಅದರಲ್ಲಿ ತಾವು ಈ ಚಳುವಳಿಯಲ್ಲಿ ಭಾಗವಹಿಸಲಿಲ್ಲ ಎಂದು ಹೇಳಿದ್ದು ಮಾತ್ರವಲ್ಲ, ಈ ಚಳುವಳಿಯ ನಾಯಕರ ಹೆಸರುಗಳನ್ನು ಕೊಟ್ಟರು. ಆದರೂ ಆಗಿದ್ದ ಕರಾಳ ಕಾನೂನು ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ ಚಳುವಳಿ ನಡೆಸಿದ ಗುಂಪಿನಲ್ಲಿದ್ದವರಿಗೆಲ್ಲಾ ಶಿಕ್ಷೆಯಾಯಿತು. ಅಟಲ್ ಮತ್ತು ಪ್ರೇಮ್ ಅವರನ್ನು ಜೈಲಿಗೆ ಹಾಕಲಾಯಿತು. ಆದರೆ 22 ದಿನಗಳಲ್ಲೇ ಅವರ ಬಿಡುಗಡೆಯಾಯಿತು. ಚಳುವಳಿಯ ನಾಯಕರಿಗೆ ಐದು ವರ್ಷಗಳಷ್ಟು ಕಠಿಣ ಕ್ರಮದ ಶಿಕ್ಷೆ ವಿಧಿಸಲಾಯಿತು. ಹಾಗಾದರೆ ಅಟಲ್ ಬಿಹಾರಿ ಮತ್ತು ಪ್ರೇಮ್ ಬಿಹಾರಿ ಅಷ್ಟು ಬೇಗ ಬಿಡುಗಡೆಯಾದದ್ದು ಹೇಗೆ? ಪೋಲೀಸರಿಗೆ ನಾಯಕರ ಹೆಸರು ಕೊಡುವ ಮತ್ತು ಘಟನೆಯ ಯಥಾವತ್ ವಿವರ ನೀಡುವ ಮೂಲಕ 'ಪರಮ ನಾಯಕ' ಬ್ರಿಟಿಷ್ ಸಾಮ್ರಾಜ್ಯಶಾಹಿ ಪೋಲೀಸರಿಗೆ ಸಹಾಯ ಮಾಡಿದ್ದರು. ಮಾತ್ರವಲ್ಲ, ತಪ್ಪೊಪ್ಪಿಗೆ ಬರೆದುಕೊಟ್ಟಿದ್ದರು. ಇದಲ್ಲದೆ ಅಟಲ್ ಮತ್ತು ಪ್ರೇಮ್ ತಂದೆ ಬ್ರಿಟಿಷ್ ಸರ್ಕಾರದಲ್ಲಿ ತಮಗೆ ಪರಿಚಯದವರ ಪ್ರಭಾವ ಬಳಸಿದ್ದರು ಎಂದು ಗೊತ್ತಾಗಿದೆ. ಅವರ ಹೇಳಿಕೆಯ ಆಧಾರದ ಮೇಲೆ ಇಡೀ ಹಳ್ಳಿಗೆ ಹತ್ತು ಸಾವಿರ ರೂ. ದಂಡ ವಿಧಿಸಲಾಯಿತು. ಇದು ವಾಜಪೇಯಿಯ ವೀರಪಾತ್ರ.

ಲೀಲಾಧರ ವಾಜಪೇಯಿ ನಿಜವಾದ ನಾಯಕ

"ಹಳ್ಳಿಗೆ ದಂಡ ವಿಧಿಸಲು ಅಟಲ್ ಬಿಹಾರಿ ಹೇಳಿಕೆ ಕಾರಣ"



ಬಟೇಶ್ವರ್ ಹಳ್ಳಿಯಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ನಾಯಕತ್ವ ವಹಿಸಿದ್ದು ವಾಜಪೇಯಿಯೇ! ಅಟಲ್ ಬಿಹಾರಿ ಅಲ್ಲ. ಇನ್ನೊಬ್ಬ (ಲೀಲಾಧರ) ವಾಜಪೇಯಿ. ಈಗಲೂ ಗ್ವಾಲಿಯಾರ್‌ನಲ್ಲಿ ವಾಸಿಸುತ್ತಿದ್ದಾರೆ. ಗ್ವಾಲಿಯಾರ್ ಮುನಿಸಿಪಲ್ ನೌಕರರಾಗಿ ಕೆಲಸ ಮಾಡಿ, ನಿವೃತ್ತಿ ಹೊಂದಿದವರು. ಅವರು ಕೊಟ್ಟ ಸಂದರ್ಶನದಲ್ಲಿ 'ಪರಮ ನಾಯಕ' ಅಟಲ್ ಬಿಹಾರಿಯ ನಿಜ ಬಣ್ಣ ಬಯಲಿಗೆಳೆದಿದ್ದಾರೆ. ಇದರ ಹಿಂದೆ (1972 ರಲ್ಲೇ) 'ಬ್ಲಿಟ್ಜ್' ಪತ್ರಿಕೆಯಲ್ಲಿ ಪ್ರಕಟವಾಗಿತ್ತು. 1942 ರ ಚಳುವಳಿಯಲ್ಲಿ ತಮ್ಮ ಪಾತ್ರದ ಬಗ್ಗೆ ಲೀಲಾಧರ ವಾಜಪೇಯಿಗೆ ಈಗಲೂ ಭಾರಿ ಹೆಮ್ಮೆ. ಕಠಿಣ ಸಜೆ ಮತ್ತು ತೀವ್ರ ಚಿತ್ರಹಿಂಸೆಗೆ ಗುರಿಯಾದ ಲೀಲಾಧರಗೆ ಆ ಬಗ್ಗೆ ಮರುಕವಿಲ್ಲ. ತಮ್ಮ ಹೆಸರು ಕೊಟ್ಟರು ಎಂದು ಅಟಲ್ ಬಿಹಾರಿ ಮೇಲೆ ಕೋಪವೂ ಇಲ್ಲ. ಆದರೆ ಅವರಿಗೆ ಎರಡೇ ಆತಂಕದ ವಿಷಯ. ಹಳ್ಳಿಯ ಜನ ಹತ್ತು ಸಾವಿರ ರೂ (ಆಗಿನ ಕಾಲದಲ್ಲಿ ಅದು ಭಾರಿ ದೊಡ್ಡ ಮೊತ್ತ) ದಂಡ ತೆತ್ತರೂ, ಆ ಎರಡು ಅರಣ್ಯ ಇಲಾಖೆ ಪೋಸ್ಟ್‌ಗಳನ್ನು ರಾಷ್ಟ್ರೀಯ ಸ್ಮಾರಕ ಮಾಡಲಿಲ್ಲ ಎಂಬುದು ಒಂದು ಆತಂಕ. ಆ ಘಟನೆಗೂ ತನಗೂ ಸಂಬಂಧ ಇಲ್ಲ ಎಂದು ಹೇಳಿಕೆ ಕೊಟ್ಟಿದ್ದ ಅಟಲ್ ಬಿಹಾರಿ ಇಂದೂ 'ಸ್ವಾತಂತ್ರ್ಯ ಹೋರಾಟಗಾರ' ನಂತೆ ಪೋಸು ಕೊಡುವುದು ಇನ್ನೊಂದು.

ದೇಶದ ಉನ್ನತ ಸ್ಥಾನಕ್ಕೆ ಬರುವ ಯಾರನ್ನಾದರೂ ತಡೆಯಲು ಕಾನೂನು ಮಾಡುವ ಅಗತ್ಯವಿದ್ದರೆ ಅದು ಇಂತಹ ದೇಶದ್ರೋಹಿಗಳ ವಿರುದ್ಧ ಆಗಬೇಕಾಗಿದೆ.

ಸಿಪಿಐ(ಎಂ) ಅಭ್ಯರ್ಥಿಗಳನ್ನು ಏಕೆ ಗೆಲ್ಲಿಸಬೇಕು ?

13ನೇ ಲೋಕಸಭೆಯಲ್ಲಿ ಎಡಪಕ್ಷಗಳ ಒಟ್ಟು 44 ಸದಸ್ಯರ ಪೈಕಿ 35 ಸದಸ್ಯರನ್ನು ಹೊಂದಿದ ಸಿಪಿಐ(ಎಂ) 3ನೇ ಅತಿದೊಡ್ಡ ಪಕ್ಷವಾಗಿತ್ತು. 14ನೇ ಲೋಕಸಭಾ ಚುನಾವಣೆಯಲ್ಲಿ ಜಮ್ಮು ಕಾಶ್ಮೀರ ರಾಜ್ಯವೂ ಸೇರಿದಂತೆ ಒಟ್ಟು 19 ರಾಜ್ಯಗಳಲ್ಲಿ ಸಿಪಿಐ(ಎಂ) 70 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಇವರ ಪೈಕಿ 8 ಮಹಿಳೆಯರು, 9 ಪರಿಶಿಷ್ಟ ಜಾತಿಗೆ ಹಾಗೂ 9 ಪರಿಶಿಷ್ಟ ಪಂಗಡಗಳಿಗೆ ಸೇರಿದವರಾಗಿದ್ದಾರೆ. ಈ ಸಲ ಪಾರ್ಲಿಮೆಂಟಿನಲ್ಲಿ ಸಿಪಿಐ(ಎಂ) ತನ್ನ ಸಂಖ್ಯಾಬಲವನ್ನು ಹೆಚ್ಚಿಸಿಕೊಳ್ಳುವ ಎಲ್ಲಾ ಸಾಧ್ಯತೆಗಳಿವೆ. ಕೇಂದ್ರದಲ್ಲಿ ಒಂದು ಪರ್ಯಾಯ ಜಾತ್ಯತೀತ ಸರ್ಕಾರ ಅಧಿಕಾರಕ್ಕೆ ಬರುವುದು ಸಾಧ್ಯವಾಗಬೇಕಾದರೆ ಸಿಪಿಐ(ಎಂ) ಬಲಗೊಳ್ಳುವುದು ಮತ್ತು ಸಂಸತ್ತಿನಲ್ಲಿ ಎಡಪಕ್ಷಗಳ ಪ್ರತಿನಿಧಿಗಳ ಸಂಖ್ಯೆ ಹೆಚ್ಚಾಗುವುದು ಅಗತ್ಯವಿದೆ.

ಪಶ್ಚಿಮ ಬಂಗಾಳ, ತ್ರಿಪುರ ಮತ್ತು ಈ ಹಿಂದಿನ ಕೇರಳದ ಎಡ ನೇತೃತ್ವದ ಸರ್ಕಾರಗಳು ಇಡೀ ದೇಶಕ್ಕೇ ಒಂದು ಪರ್ಯಾಯ ದಾರಿಯನ್ನು ತೋರಿಸಿವೆ. ಆ ರಾಜ್ಯಗಳ ಜನತೆಗೆ ಸೀಮಿತ ಚೌಕಟ್ಟಿನೊಳಗೂ ಗರಿಷ್ಠ ಮಟ್ಟದ ಪರಿಹಾರವನ್ನು ನೀಡಲು ಸಾಧ್ಯವಾಗಿದೆ. ಇಲ್ಲಿ ಭೂಸುಧಾರಣೆಗಳನ್ನು ಜಾರಿಗೆ ತರಲಾಗಿದೆ. ಮೂರು ಹಂತಗಳ ಪಂಚಾಯಿತಿ ಪದ್ಧತಿಯನ್ನು ಜಾರಿಗೆ ತರುವ ಮೂಲಕ ಅಧಿಕಾರದ ವಿಕೇಂದ್ರೀಕರಣ ಹಾಗೂ ಜನತೆಯ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಲಾಗಿದೆ. ದುಡಿಯುವ ವರ್ಗದ ಜನಗಳ ಹಕ್ಕುಗಳನ್ನು ಪುರಸ್ಕರಿಸಲಾಗಿದೆ. ದಲಿತರಿಗೆ, ಆದಿವಾಸಿಗಳಿಗೆ ಮತ್ತು ಮಹಿಳೆಯರಿಗೆ ಸಂರಕ್ಷಣೆ ಒದಗಿಸಲು ವಿಶೇಷ ಆದ್ಯತೆ ನೀಡಲಾಗಿದೆ. ಎಲ್ಲಾ ವಿಧದ ಮತೀಯವಾದವನ್ನು ತಡೆಗಟ್ಟಲು ಎಚ್ಚರವಹಿಸಲಾಗಿದ್ದು ಕೋಮುಸಾಮರಸ್ಯವನ್ನು ಯಶಸ್ವಿಯಾಗಿ ಕಾಪಾಡಿಕೊಂಡು ಬರಲಾಗಿದೆ. ಎಡಶಕ್ತಿಗಳು ಬಲಿಷ್ಠವಾದರೆ ಬಿಜೆಪಿ ಮತ್ತು ಕಾಂಗ್ರೆಸ್ ನೀತಿಗಳಿಂದ ಭಿನ್ನವಾದ ಜನಪರ ನೀತಿಗಳನ್ನು ಜಾರಿಗೆ ತರಲು ಸಾಧ್ಯವಿದೆ ಎಂಬುದು ಇದರಿಂದ ಸಾಬೀತಾಗಿದೆ. ಎಡಪಕ್ಷಗಳ ಈ ಪರ್ಯಾಯವನ್ನು ದೇಶದ ಜನತೆಯ ಮುಂದೆ ಪರಿಣಾಮಕಾರಿಯಾಗಿ ಬಿಂಬಿಸಲು ಸಾಧ್ಯವಾಗಬೇಕಾದರೆ ಸಂಸತ್ತಿನಲ್ಲಿ ಎಡಪಕ್ಷಗಳ ಸಂಖ್ಯಾಬಲ ಹೆಚ್ಚುವುದು ತುಂಬ ಅಗತ್ಯವಿದೆ. ದೇಶಕ್ಕೆ ಅಪ್ಪಳಿಸಿರುವ ಸಾಮ್ರಾಜ್ಯಶಾಹಿ ಪ್ರೇರಿತ ಜಾಗತೀಕರಣ ಮತ್ತು ಫಾಸಿಸ್ಟ್ ಮತೀಯವಾದದ ವಿರುದ್ಧದ ಹೋರಾಟವು ಒಂದು ದೀರ್ಘ ಪ್ರಕ್ರಿಯೆಯಾಗಿದ್ದು ಅದನ್ನು ನಿರಂತರವಾಗಿ ಮುನ್ನಡೆಸಲು ಎಡಶಕ್ತಿಗಳ ಬಲವರ್ಧನೆ ಅತ್ಯಾವಶ್ಯಕವಾಗಿದೆ ಏಕೆಂದರೆ ಎಡಪಕ್ಷಗಳು ಮಾತ್ರ ಜಾಗತೀಕರಣ ಮತ್ತು ಮತೀಯವಾದವನ್ನು ಯಾವುದೇ ರಾಜಿ ಇಲ್ಲದೆ ದೃಢವಾಗಿ ವಿರೋಧಿಸುತ್ತಾ ಬಂದಿವೆ.

ಸಿಪಿಐ(ಎಂ) ಪರ್ಯಾಯ ನೀತಿಗಳು : ಸ್ವಾತಂತ್ರ್ಯ ಬಂದು 50 ವರ್ಷಗಳ ಮೇಲಾಗಿದ್ದರೂ, ಭಾರತದ ಜನತೆ ಈಗಲೂ ಬಡತನ, ಹಸಿವು, ಅನಕ್ಷರತೆ ಮತ್ತು ಅನಾರೋಗ್ಯಗಳಂತಹ ಮೂಲಭೂತ ಸಮಸ್ಯೆಗಳಿಂದ ಮುಕ್ತವಾಗಿಲ್ಲ. ಕೋಟ್ಯಾಂತರ ಭಾರತೀಯರ ಸಾಮಾಜಿಕ ಮತ್ತು ಆರ್ಥಿಕ ವಿಮೋಚನೆ ಇನ್ನು ಪೂರ್ಣಗೊಳ್ಳದ ಕಾರ್ಯಸೂಚಿಯಾಗಿಯೇ ಉಳಿದಿದೆ. ಸ್ವಾತಂತ್ರ್ಯ ನಂತರ ಕೇಂದ್ರದಲ್ಲಿ ಒಂದರ ನಂತರ ಒಂದರಂತೆ ಅಧಿಕಾರಕ್ಕೆ ಬಂದ ಪ್ರತಿಯೊಂದು ಸರ್ಕಾರವೂ ಭಾರತದ ದೊಡ್ಡ ಬಂಡವಾಳಗಾರರ, ಭೂಮಾಲೀಕರ ಹಾಗೂ ಶ್ರೀಮಂತರ ಪರವಾದ ನೀತಿಗಳನ್ನೇ ಅನುಸರಿಸಿ ಕೊಂಡು ಬಂದಿದ್ದು ಅಂತಹ ನೀತಿಗಳಿಂದ ಬಿಡುಗಡೆ ಹೊಂದದೆ ಎಲ್ಲಾ ನಾಗರಿಕರಿಗೆ ಆರ್ಥಿಕ ಮತ್ತು ಸಾಮಾಜಿಕ ನ್ಯಾಯವನ್ನು ಒದಗಿಸುವುದು ಸಾಧ್ಯವಾಗದು. ಸಿಪಿಐ(ಎಂ) ದೇಶದ ಮೂಲಭೂತ ಸಾಮಾಜಿಕ ಪರಿವರ್ತನೆಗಾಗಿ ಹೋರಾಡುತ್ತಾ ಪರ್ಯಾಯ ನೀತಿಗಳನ್ನು ಜನರ ಮುಂದಿಡುತ್ತದೆ.

ಜಾತ್ಯತೀತ ಮೌಲ್ಯಗಳ ರಕ್ಷಣೆ : ಒಂದು ಉತ್ತಮವಾದ ಪ್ರಜಾಸತ್ತಾತ್ಮಕ ವ್ಯವಸ್ಥೆಯತ್ತ ನಿಜವಾದ ಮುನ್ನಡೆ ಸಾಧ್ಯವಾಗಬೇಕಾದರೆ ದೇಶದ ದುಡಿಯುವ ಜನರ ಐಕ್ಯತೆ ಮತ್ತು ದೇಶದ ಸಮಗ್ರತೆಯನ್ನು ರಕ್ಷಿಸುವುದು ಅತ್ಯಗತ್ಯವಾಗಿದೆ ಎಂದು ಸಿಪಿಐ(ಎಂ) ಪ್ರತಿಪಾದಿಸುತ್ತದೆ. ಮತ ಧರ್ಮ ಮತ್ತು ರಾಜಕಾರಣವನ್ನು ಒಂದು ಶಾಸನಾತ್ಮಕ ಕ್ರಮದ ಮೂಲಕ ಬೇರ್ಪಡಿಸುವುದಕ್ಕೆ ಸಿಪಿಐ(ಎಂ) ಬದ್ಧವಾಗಿದೆ. ಧಾರ್ಮಿಕ ಸ್ಥಳಗಳ ಬಗ್ಗೆ ವಿವಾದ ಎಬ್ಬಿಸುವುದನ್ನು ತಡೆಯಲು 'ಪೂಜಾಸ್ಥಳಗಳ ಕಾಯ್ದೆ'ಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಅಯೋಧ್ಯಾ ವಿವಾದವನ್ನು ನ್ಯಾಯಾಂಗ ಪ್ರಕ್ರಿಯೆಯ ಮೂಲಕವೇ ಇತ್ಯರ್ಥಪಡಿಸಬೇಕು ಮತ್ತು ನ್ಯಾಯಾಂಗದ ಅಂತಿಮ ತೀರ್ಪನ್ನು ಎಲ್ಲರೂ ಒಪ್ಪಬೇಕು. ವಿವಾದವನ್ನು ಮಾತುಕತೆಯ ಮೂಲಕ ಬಗೆಹರಿಸಲು ಪ್ರಯತ್ನಪಡುವ ಹೆಸರಿನಲ್ಲಿ ವಿವಾದದ ಒಂದು ಬದಿಯಲ್ಲಿ ಇರುವವರ ಮೇಲೆ ಇನ್ನೊಂದು ಬದಿ ಇರುವವರು ಒತ್ತಡ ಹೇರುವುದನ್ನು ಸಿಪಿಐ(ಎಂ) ಬಲವಾಗಿ ವಿರೋಧಿಸುತ್ತದೆ.

ಒಕ್ಕೂಟ ವ್ಯವಸ್ಥೆ : ಎಲ್ಲಾ ರಾಷ್ಟ್ರೀಯತೆಗಳಿಗೆ ನೈಜಸಮಾನತೆ ಮತ್ತು ಸ್ವಾಯತ್ತತೆ ನೀಡುವ ಒಕ್ಕೂಟ ವ್ಯವಸ್ಥೆಗಾಗಿ ಸಿಪಿಐ(ಎಂ) ಹೋರಾಡುತ್ತದೆ. ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ, ಕೇಂದ್ರ ಸರ್ಕಾರದ ಆರ್ಥಿಕ ನೀತಿಗಳನ್ನು ರಾಜ್ಯಗಳ ಮೇಲೆ ಹೇರುವುದಕ್ಕೆ ತಡೆ, ರಾಜ್ಯ ಸರ್ಕಾರಗಳನ್ನು ವಜಾ ಮಾಡುವ ಕೇಂದ್ರ ಸರ್ಕಾರದ ಅಧಿಕಾರಕ್ಕೆ ಕಡಿವಾಣ, ಸಂವಿಧಾನದ 370ನೇ ವಿಧಿ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಗರಿಷ್ಠ ಸ್ವಾಯತ್ತತೆ ನೀಡಿಕೆಯನ್ನು ಸಿಪಿಐ(ಎಂ) ಪ್ರತಿಪಾದಿಸುತ್ತದೆ.

ವಿದೇಶಾಂಗ ನೀತಿ : ಸಾಮ್ರಾಜ್ಯಶಾಹಿಗಳ ಪರವಾಗಿ ಹೆಚ್ಚೆಚ್ಚು ವಾಲುತ್ತಿರುವ ವಾಜಪೇಯಿ ಸರ್ಕಾರದ ವಿದೇಶಾಂಗ ನೀತಿಯನ್ನು ಸಿಪಿಐ(ಎಂ) ವಿರೋಧಿಸುತ್ತದೆ. ಅಭಿವೃದ್ಧಿಶೀಲ ರಾಷ್ಟ್ರಗಳ ನಡುವಿನ ಸಹಕಾರಕ್ಕಾಗಿ ಹಾಗೂ ಒಂದು ಹೊಸ ತಳಹದಿಯ ಮೇಲೆ ಅಲಿಪ್ತ ಚಳುವಳಿಯನ್ನು ಪುನರುಜ್ಜೀವನಗೊಳಿಸಲು ಸಿಪಿಐ(ಎಂ) ಒತ್ತಾಯಿಸುತ್ತದೆ. ಅಮೇರಿಕ ಮತ್ತು ಅದರ ಮಿತ್ರ ದೇಶಗಳ ಪಡೆಗಳು ಇರಾಕಿನಿಂದ ಕಾಲ್ತೆಗೆಯಬೇಕು ಎಂದು ಆಗ್ರಹಿಸುವ ಸಿಪಿಐ(ಎಂ) ಪಾಲೆಸ್ತೀನ್ ಜನತೆ ತಮ್ಮ ತಾಯ್ನಾಡಿಗಾಗಿ ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ನೀಡುತ್ತದೆ. ಪಾಕಿಸ್ತಾನದೊಂದಿಗೆ ಅಮೇರಿಕದ ಮಧ್ಯಸ್ತಿಕೆಯಲ್ಲದೆ ಮಾತುಕತೆಯನ್ನು ಗಂಭಿರವಾಗಿ ಮುಂದುವರೆಸಬೇಕು, ಚೀನಾದೊಂದಿಗೆ ಸಂಬಂಧವನ್ನು ಉತ್ತಮಗೊಳಿಸಲು ವಿಶೇಷ ಗಮನ ನೀಡಬೇಕು ಎಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ಪರ್ಯಾಯ ಕೃಷಿ ನೀತಿ : ಬಿಜೆಪಿ ನೇತೃತ್ವದ ಸರ್ಕಾರ ಅನುಸರಿಸುತ್ತಾ ಬಂದಿರುವ ಆರ್ಥಿಕ ನೀತಿಗಳು ಕೇವಲ ಶೇಕಡಾ 10ರಷ್ಟಿರುವ ಶ್ರೀಮಂತ ವರ್ಗಕ್ಕೆ ಮಾತ್ರ ಅನುಕೂಲ ಮಾಡುವ ನೀತಿಗಳಾಗಿದ್ದು ಈ ನೀತಿಗಳ ಬದಲಾಗಿ ಪರ್ಯಾಯ ನೀತಿಗಳ ಸಮಗ್ರ ಪ್ರಸ್ತಾವವೊಂದನ್ನು ಸಿಪಿಐ(ಎಂ) ಜನತೆಯ ಮುಂದಿಡುತ್ತದೆ.

ಗ್ರಾಮೀಣ ಪರಿವರ್ತನೆಗಾಗಿ ಭೂಸುಧಾರಣೆಯೊಂದೇ ಮಾರ್ಗವೆಂದು ಬಲವಾಗಿ ನಂಬಿರುವ ಸಿಪಿಐ(ಎಂ) ಪ್ರಸಕ್ತ ಭೂಸುಧಾರಣಾ ಕಾನೂನುಗಳನ್ನು ದುರ್ಬಲಗೊಳಿಸುವ ಪ್ರಯತ್ನಗಳನ್ನು ಕೈಬಿಡಬೇಕೆಂದು, ಈಗಿರುವ ಕಾನೂನುಗಳಲ್ಲಿನ ಲೋಪದೋಶಗಳನ್ನು ಸರಿಪಡಿಸಬೇಕೆಂದು ಒತ್ತಾಯಿಸುತ್ತದೆ. ಹೆಚ್ಚುವರಿ ಭೂಮಿಯನ್ನು ಹಾಗೂ ಕೃಷಿ ಯೋಗ್ಯ ಸರ್ಕಾರಿ ಹಾಳು ಭೂಮಿಯನ್ನು ಕೃಷಿಕೂಲಿಕಾರರಿಗೆ ಮತ್ತು ಬಡರೈತರಿಗೆ ವಿತರಣೆಮಾಡಬೇಕು, ಮಹಿಳೆಯರಿಗೆ ಜಂಟಿ ಪಟ್ಟಾ ನೀಡಬೇಕು, ಬಹುರಾಷ್ಟ್ರೀಯ ಕಂಪೆನಿಗಳಿಗೆ ಕೃಷಿ ಭೂಮಿ ಮಾರಾಟ ಮಾಡುವುದನ್ನು ನಿಷೇಧಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ನೀರಾವರಿಯೂ ಸೇರಿದಂತೆ ಕೃಷಿ ಕ್ಷೇತ್ರದಲ್ಲಿ ಸಾರ್ವಜನಿಕ ಹಣ ಹೂಡಿಕೆಯನ್ನು ಹೆಚ್ಚಿಸುವುದು, ಬೀಜ, ಗೊಬ್ಬರ, ಕ್ರಿಮೀನಾಶಕ, ವಿದ್ಯುತ್ ಮೊದಲಾದವುಗಳಿಗೆ ಸಬ್ಸಿಡಿ, ರೈತರ ಬೆಳೆಗಳಿಗೆ ಲಾಭದಾಯಕ ಬೆಲೆ ಸಿಗುವಂತಾಗಲು ಕ್ರಮ, ರೈತರಿಗೆ ರಿಯಾಯ್ತಿ ದರಗಳಲ್ಲಿ ಸಾಲ ಸೌಲಭ್ಯ, ಸಮಗ್ರ ಬೆಳೆ ವಿಮಾ ಯೋಜನೆ ಇತ್ಯಾದಿ ಅಂಶಗಳನ್ನು ಒಳಗೊಂಡ ಒಂದು ಪರ್ಯಾಯ ಕೃಷಿ ನೀತಿಗೆ ಸಿಪಿಐ(ಎಂ) ಬದ್ಧವಾಗಿದೆ.

ಕೈಗಾರಿಕೆಗಳು : ಸಾರ್ವಜನಿಕ ರಂಗವನ್ನು ಬಲಪಡಿಸುವುದು, ಸ್ಪಷ್ಟ ಆದ್ಯತೆಗಳನ್ನು ನಿಗದಿಪಡಿಸಲಾದ ವಲಯಗಳಿಗೆ ಮಾತ್ರ ವಿದೇಶಿ ಬಂಡವಾಳ ಪ್ರವೇಶಕ್ಕೆ ಅವಕಾಶ ನೀಡುವುದು, ವಿದೇಶಿ ಕಂಪೆನಿಗಳು ದೇಶಿಯ ಕಂಪೆನಿಗಳನ್ನು ವಶಪಡಿಸಿಕೊಳ್ಳುವುದನ್ನು ತಡೆಯುವುದು, ಪ್ರವಾಸೋದ್ಯಮದಂತಹ ಸೇವಾ ಕ್ಷೇತ್ರಗಳಲ್ಲಿ ಬಂಡವಾಳ ಹೂಡಲು ಖಾಸಗಿ ಕ್ಷೇತ್ರಕ್ಕೆ ಉತ್ತೇಜನ ನೀಡುವುದು, ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ, ಕೈಮಗ್ಗ, ತೆಂಗಿನ ನಾರು ಮೊದಲಾದ ಪಾರಂಪರಿಕ ಉದ್ಯಮಗಳ ರಕ್ಷಣೆ ಮೊದಲಾದ ಅಂಶಗಳು ಸಿಪಿಐ(ಎಂ) ಪ್ರತಿಪಾದಿಸುವ ಕೈಗಾರಿಕಾ ನೀತಿಯ ಭಾಗವಾಗಿವೆ.

ವಿಮಾ ಕ್ಷೇತ್ರಕ್ಕೆ ವಿದೇಶಿ ಕಂಪೆನಿಗಳು ಪ್ರವೇಶಿಸುವುದನ್ನು ತಡೆಯುವುದು, ಬ್ಯಾಂಕಿಂಗ್ ಕ್ಷೇತ್ರದ ಖಾಸಗೀಕರಣವನ್ನು ನಿಲ್ಲಿಸುವುದು, ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳ ಮೇಲೆ ನಿಯಂತ್ರಣ ಹೇರುವುದು ಹಣಕಾಸು ರಂಗದ ಆದ್ಯತೆಗಳು.

ಸಂಪನ್ಮೂಲ ಕ್ರೋಢೀಕರಣ : ಶ್ರೀಮಂತರ ಮೇಲೆ ಹಾಕುವ ಕಾರ್ಪೊರೇಷನ್ ತೆರಿಗೆ, ಸಂಪತ್ತು ತೆರಿಗೆ, ಆದಾಯ ತೆರಿಗೆಗಳನ್ನು ಹೆಚ್ಚಿಸಿ, ಅವುಗಳ ವಸೂಲಿಗೆ ಕಟ್ಟುನಿಟ್ಟಾದ ಕ್ರಮಗಳನ್ನು ತೆಗೆದುಕೊಳ್ಳುವುದು, ಕಪ್ಪು ಹಣವನ್ನು ಹೊರತೆಗೆದು ಉತ್ಪಾದನಾ ಉದ್ದೇಶಗಳಿಗಾಗಿ ಬಳಸುವುದು, ಸಾರ್ವಜನಿಕ ಹಣದ ದುರ್ಬಳಕೆಯನ್ನು ತಡೆಯಲು ಬಿಗಿಯಾದ ಕ್ರಮಗಳನ್ನು ಅನುಸರಿಸುವ ಮೂಲಕ ಸಂಪನ್ಮೂಲ ಕ್ರೋಢೀಕರಣಕ್ಕೆ ಕೊರತೆಯಾಗದಂತೆ ನೋಡಿಕೊಳ್ಳುವುದು.

ದುಡಿಯುವ ಜನರ ಹಕ್ಕುಗಳು : ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ ಮತ್ತು ಸಾಮಾಜಿಕ ಸಂರಕ್ಷಣೆಯ ಎಲ್ಲಾ ಸವಲತ್ತುಗಳನ್ನು ಒಳಗೊಳ್ಳುವ ಸಮಗ್ರ ಕಾನೂನು ಜಾರಿಗೆ ತರಬೇಕು ಮತ್ತು ಹಿತ್ತಲು ಸಹಿತ ವಾಸದ ಮನೆಗಳು ಹಾಗೂ ಮಹಿಳಾ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತ ಒದಗಿಸಬೇಕು. ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಜನಗಳಿಗೆ ರಕ್ಷಣೆ ಹಾಗೂ ನಾಗರಿಕ ಸೌಲಭ್ಯಗಳ ಪೂರೈಕೆ ಮಾಡಬೇಕು.

ಕಾರ್ಮಿಕರಿಗೆ ಅಗತ್ಯತೆ ಆಧಾರಿತ ಕನಿಷ್ಠ ವೇತನ ನೀಡುವುದು, ಬೆಲೆ ಸೂಚ್ಯಾಂಕಕ್ಕೆ ಜೋಡಿಸಲ್ಪಟ್ಟ ವೇತನ ಮತ್ತು ಭವಿಷ್ಯ ನಿಧಿ ಬಡ್ಡಿ ದರಗಳನ್ನು ಮೊದಲಿದ್ದ ಮಟ್ಟಕ್ಕೆ ಏರಿಸಬೇಕು. ಕಾರ್ಮಿಕರನ್ನು ಮನಬಂದಂತೆ ಕೆಲಸದಿಂದ ಕಿತ್ತುಹಾಕುವ ಕ್ರಮವನ್ನು ನಿಲ್ಲಿಸುವುದು, ಖಾಯಂ ಹುದ್ದೆಗಳನ್ನು ತೊಡೆದುಹಾಕುವುದನ್ನು ತಡೆಯುವುದು, ಕಾರ್ಮಿಕ ಕಾನೂನುಗಳನ್ನು ಮಾಲೀಕರ ಪರವಾಗಿ ತಿದ್ದುಪಡಿ ಮಾಡುವುದನ್ನು ನಿಲ್ಲಿಸಿ ಅವುಗಳ ಕಟ್ಟುನಿಟ್ಟಾದ ಜಾರಿಗೆ ಕ್ರಮ, ರೋಗಗ್ರಸ್ತ ಕಾರ್ಖಾನೆಗಳ ಪುನಶ್ಚೇತನ, ಲಾಭದಾಯಕ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣಕ್ಕೆ ತಡೆ, ಅಸಂಘಟಿತ ವಲಯದ ಮತ್ತು ಗೃಹ ಆಧಾರಿತ ಕೈಗಾರಿಕೆಗಳಗೆ ರಕ್ಷಣೆ ಮೊದಲಾದ ಕಾರ್ಮಿಕರ ಹಕ್ಕುಗಳಿಗಾಗಿ ಸಿಪಿಐ(ಎಂ) ಹೋರಾಡುತ್ತದೆ. ಕಾರ್ಮಿಕ ಸಂಘಗಳ ಹಕ್ಕುಗಳ ರಕ್ಷಣೆ, ಗುಪ್ತ ಮಾನದಾನದ ಮೂಲಕ ಅವುಗಳಿಗೆ ಮಾನ್ಯತೆ, ಕಾರ್ಖಾನೆಗಳ ಆಡಳಿತದಲ್ಲಿ ಕಾರ್ಮಿಕರಿಗೆ ಪಾಲ್ಗೊಳ್ಳುವ ಅವಕಾಶ, ಸರ್ಕಾರಿ ನೌಕರರು ಸೇರಿದಂತೆ ಎಲ್ಲಾ ಕಾರ್ಮಿಕರ ಮುಷ್ಕರದ ಹಕ್ಕಿನ ರಕ್ಷಣೆ, ಎಲ್ಲಾ ಕಾರ್ಮಿಕರಿಗೂ ಸಂಘಟನಾ ಹಾಗೂ ಸಾಮೂಹಿಕ ಚೌಕಾಸಿಯ ಹಕ್ಕು ಮೊದಲಾದವುಗಳು ಸಹ ಸಿಪಿಐ(ಎಂ) ಆದ್ಯತೆ ನೀಡುವ ಪ್ರಶ್ನೆಗಳಾಗಿವೆ.


ಪುಟ 8 ಕ್ಕೆ


ನಿತ್ಯಾನಂದಸ್ವಾಮಿ

ಕಣದಲ್ಲಿರುವ ಸಿಪಿಐ(ಎಂ) ಅಭ್ಯರ್ಥಿಗಳು


ಜಿ.ವಿ.ಶ್ರೀರಾಮರೆಡ್ಡಿ


ಮಾರುತಿ ಮಾನ್ಪಡೆ


ರಾಮಚಂದ್ರ ಉಚ್ಚಿಲ್


ಕೆ.ಶಂಕರ್


ವ್ಹಿ.ಪಿ.ಕುಲಕರ್ಣಿ

ಹೆಸರು	ಕ್ಷೇತ್ರ	ಜಿಲ್ಲೆ	ಮತದಾನ
ಜಿ.ವಿ.ಶ್ರೀರಾಮರೆಡ್ಡಿ	ಬಾಗೇಪಲ್ಲಿ	ಕೋಲಾರ	20-04-2004
ಮಾರುತಿ ಮಾನಪಡೆ	ಕಮಲಾಪುರ	ಗುಲ್ಬರ್ಗಾ	20-04-2004
ರಾಮಚಂದ್ರ ಉಚ್ಚಿಲ್	ಉಳ್ಳಾಲ	ದಕ್ಷಿಣ ಕನ್ನಡ	26-04-2004
ಕೆ.ಶಂಕರ್	ಕುಂದಾಪುರ	ಉಡುಪಿ	26-04-2004
ವ್ಹಿ.ಪಿ.ಕುಲಕರ್ಣಿ	ರಾಮದುರ್ಗ	ಬೆಳಗಾಂವ್	26-04-2004

ಸಿಪಿಐ(ಎಂ) ಮತ್ತು ಜನತಾದಳ(ಜಾತ್ಯತೀತ) ಪಕ್ಷಗಳನ್ನು ಬೆಂಬಲಿಸಿ

ಕರ್ನಾಟಕ ವಿಧಾನಸಭಾ ಚುನಾವಣೆ - 2004

ರಾಮದುರ್ಗ : ವ್ಹಿ.ಪಿ.ಕುಲಕರ್ಣಿ ಸ್ಪರ್ಧೆ



ಬೆಳಗಾವಿ ಜಿಲ್ಲೆಯ ರಾಮದುರ್ಗ ವಿಧಾನಸಭಾ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಕಾಂ. ವ್ಹಿ.ಪಿ.ಕುಲಕರ್ಣಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರು, ಕರ್ನಾಟಕ ಪ್ರಾಂತ ರೈತ ಸಂಘದ ಒಬ್ಬ ಪ್ರಮುಖ ಮುಖಂಡರು ಹಾಗೂ ಕಾರ್ಮಿಕ ಸಂಘಟನೆ ಸಿಐಟಿಯುನಲ್ಲಿಯೂ ದುಡಿಯುತ್ತಿರುವವರು. ಕರ್ನಾಟಕ ರಾಜ್ಯದಲ್ಲಿ ಪಂಚಾಯತ್ ನೌಕರರನ್ನು ಸಂಘಟಿಸಲು ರಾಜ್ಯಾದ್ಯಂತ ಸಂಚರಿಸಿರುವ ಇವರು ಕರ್ನಾಟಕ ರಾಜ್ಯ ಪಂಚಾಯತ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.

ರಾಮದುರ್ಗದ ಮಧ್ಯಮ ರೈತ ಕುಟುಂಬದಲ್ಲಿ ಜನಿಸಿದ ಕುಲಕರ್ಣಿ ಧಾರವಾಡದಲ್ಲಿ ಕಾರ್ಮಿಕರಾಗಿ ಜೀವನ ಆರಂಭಿಸಿದರು. ಬೆಂಗಳೂರಿಗೆ ಆಗಮಿಸಿದ ನಂತರ ಅವರು ಕಾರ್ಮಿಕ ಆಂದೋಲನದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡ ಇವರು ಮಾರ್ಕ್ಸ್‌ವಾದ-ಲೆನಿನ್‌ವಾದದಿಂದ ಆಕರ್ಷಿತರಾಗಿ 1978 ರಲ್ಲಿ ಸಿಪಿಐ(ಎಂ) ಸೇರಿದರು. ಅಂದಿನಿಂದ ತಮ್ಮ ಪೂರ್ಣ ಸಮಯವನ್ನು ಕಾರ್ಮಿಕರು, ರೈತರು ಹಾಗೂ ಉಳಿದ ಬಡ ಜನವಿಭಾಗಗಳ ಏಳ್ಗೆಗಾಗಿ ಅರ್ಪಿಸಿಕೊಂಡಿದ್ದಾರೆ. 1980 ರ ದಶಕದಲ್ಲಿ ಬೆಂಗಳೂರಿನ ಯಶವಂತಪುರ ವಲಯದಲ್ಲಿ ಸಣ್ಣ ಪ್ರಮಾಣದ ಉದ್ದಿಮೆಗಳ ಅಸಂಘಟಿತ ಕಾರ್ಮಿಕರನ್ನು ಮಾಲಕರ ದಮನಚಕ್ರ, ಪೋಲೀಸರ ಲಾಠಿಯೇಟುಗಳನ್ನು ಲೆಕ್ಕಿಸದೆ ಸಂಘಟಿಸಿದ ಅನುಭವ ಇವರದ್ದು. ಈ ನಡುವೆ ಅವರು ಕೆಲಕಾಲ ಸಿಪಿಐ(ಎಂ) ನ ರಾಜ್ಯ ಸಮಿತಿಯ ವಾರಪತ್ರಿಕೆ 'ಐಕ್ಯರಂಗ' ನಿರ್ವಾಹಕರಾಗಿಯೂ, ರಾಜ್ಯದ ದುಡಿಯುವ ಜನತೆಯ ಆಕಾಂಕ್ಷೆಗಳಿಗೆ ಧ್ವನಿ ನೀಡಿದವರು.

ನಂತರ ತನ್ನ ಹುಟ್ಟೂರು ರಾಮದುರ್ಗದಲ್ಲಿ ನೆಲೆ ನಿಂತು ಅಲ್ಲಿಯ ಬೀಡಿ ಕಾರ್ಮಿಕರ, ರೈತರ, ಇತರ ಬಡ ಜನವಿಭಾಗಗಳ ನೋವುಗಳಿಗೆ, ಸಮಸ್ಯೆಗಳಿಗೆ ಸ್ಪಂದಿಸಿ ಹಲವಾರು ಹೋರಾಟಗಳನ್ನು ನಡೆಸಿ ಜನಪ್ರಿಯರಾಗಿದ್ದಾರೆ.

ರಾಮದುರ್ಗದ ಪುರಸಭೆಯ ಅಧೀನಕ್ಕೆ ಒಳಪಟ್ಟ 8 ಎಕರೆ ಕಸ ಎಸೆಯುವ ಜಾಗದಲ್ಲಿ ವಾಸಿಸುತ್ತಿದ್ದ ಬಡಜನರ ಗುಡಿಸಲುಗಳನ್ನು ಪುರಸಭೆಯ ಸದಸ್ಯರು ಮತ್ತು ಅಧಿಕಾರಿಗಳು ಕೆಡವಲು ಬಂದಾಗ ತೀವ್ರ ಪ್ರತಿಭಟನೆ ನಡೆಸಿದ ಕುಲಕರ್ಣಿಯವರು ವಸತಿ ರಹಿತರ ಸಂಘ ರಚಿಸಿ ಹಕ್ಕು ಪತ್ರಕ್ಕಾಗಿ ಆಮರಣ ಉಪವಾಸ ನಡೆಸಿ ಹೋರಾಟದಲ್ಲಿ ಯಶಸ್ವಿಯಾದರು. ನಂತರ ಅದೇ ಪ್ರದೇಶದಿಂದ ಪುರಸಭೆಗೆ ಆಯ್ಕೆಯಾದ ಕುಲಕರ್ಣಿಯವರು 1991 ರಲ್ಲಿ ಆ ಪ್ರದೇಶಕ್ಕೆ ನೀರಿನ ವ್ಯವಸ್ಥೆ, ವಿದ್ಯುತ್ ವ್ಯವಸ್ಥೆ ದೊರಕಿಸಿ ಕೊಡುವುದರಲ್ಲಿ ಯಶಸ್ವಿಯಾದರು. ಸಿಪಿಐ(ಎಂ) ಪಕ್ಷ ಹಾಗೂ ಕುಲಕರ್ಣಿಯವರ ಜನಪ್ರಿಯತೆಯನ್ನು ಸಹಿಸದ ವಿರೋಧಿಗಳು, ಅವರು ಆರಿಸಿ ಬರುತ್ತಿದ್ದ ಭಾಗ್ಯನಗರವನ್ನು ವಿಭಜಿಸಿ, ಅರ್ಧಭಾಗವನ್ನು ತಂಗೂರು ಗ್ರಾಮ ಪಂಚಾಯ್ತಿಗೆ ಹಾಗೂ ಅರ್ಧಭಾಗವನ್ನು ಪುರಸಭೆಯ ವ್ಯಾಪ್ತಿಗೆ ಒಳಪಡಿಸಿದರು.

ಆದರೂ ಜನಪರ ಹೋರಾಟಗಳನ್ನು ನಿರಂತರ ನಡೆಸಿದುದರ ಫಲವಾಗಿ ತುರಗೂರು ಗ್ರಾಮ ಪಂಚಾಯಿತಿಯಲ್ಲಿ ಪಕ್ಷವು ಬಹುಮತ ಗಳಿಸುವಂತಾಯಿತು. ಆ ಗ್ರಾಮ ಪಂಚಾಯ್ತಿ ಜಿಲ್ಲೆಗೇ ಮಾದರಿ ಗ್ರಾಮ ಪಂಚಾಯತಿ ಆಗಿ ಕಾರ್ಯನಿರ್ವಹಿಸಿತು. ಇದಕ್ಕೆ ಬೆಳಗಾವಿ ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿ ಕುಲಕರ್ಣಿಯವರ ಸತತ ಮಾರ್ಗದರ್ಶನ ನೆರವಾಯಿತು.

ಪಡಿತರ ಚೀಟಿಗಾಗಿ ಹೋರಾಟ ನಡೆಸಿ, ಸಾವಿರಾರು ಬಡಜನರಿಗೆ ರೇಶನ ವ್ಯವಸ್ಥೆ ಸಿಗುವಂತೆ ಮಾಡಿದ್ದಲ್ಲದೆ, ಇತ್ತೀಚೆಗೆ ಹಳದಿ ಕಾರ್ಡ್‌ಗಾಗಿ ಬಡತನ ರೇಖೆಗಿಂತ ಕೆಳಗಿರುವವರ ಬಗ್ಗೆ ಸರ್ವೆ ನಡೆಸಿ ನಿಜವಾದ ದುರ್ಬಲರಿಗೆ ಕಾರ್ಡ್ ಕೊಡಿಸುವಲ್ಲಿ ಯಶಸ್ವಿಯಾದರು.

ಪಂಪ್‌ಸೆಟ್ ರೈತರ ಬಾಕಿ ಮನ್ನಾ ಒತ್ತಾಯಿಸಿ ಕುಲಕರ್ಣಿಯವರು ರಾಮದುರ್ಗ ತಾಲೂಕಿನಲ್ಲಿ ಆರಂಭಿಸಿದ ಹೋರಾಟ ಇಡೀ ಜಿಲ್ಲೆಯನ್ನೇ ವ್ಯಾಪಿಸಿತು. ಹೆಸ್ಕಾಂ ಅಧಿಕಾರಿಗಳನ್ನು ಬೆನ್ನುಹತ್ತಿ ಪಂಪ್‌ಸೆಟ್ ರೈತರ ವೈಯಕ್ತಿಕ ಸಮಸ್ಯೆಗಳನ್ನು ಇತ್ಯರ್ಥಪಡಿಸುವ ಅವರು ತೋರಿದ ಆಸಕ್ತಿ ರೈತರ ನಡುವೆ ಅವರಿಗೆ ಅಪಾರ ಗೌರವವನ್ನು ತಂದಿದೆ. ಪಂಪ್‌ಸೆಟ್ ರೈತರ ಹಳೆಬಾಕಿ ಮನ್ನಾ ಆಗುವುದರೊಂದಿಗೆ ಅವರ ಜನಪ್ರಿಯತೆ ಗಣನೀಯವಾಗಿ ಹೆಚ್ಚಾಗಿವೆ. ಭಾಗ್ಯಜ್ಯೋತಿ ಸಂಪರ್ಕಗಳ ಹಳೆಯ ಬಾಕಿಯನ್ನು ಮನ್ನಾ ಮಾಡುವ ಹೋರಾಟವನ್ನು ಅವರು ಯಶಸ್ವಿಯಾಗಿ ಸಂಘಟಿಸಿದ್ದಾರೆ. ಜಿಲ್ಲೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರನ್ನು ಸಂಘಟಿಸುವಲ್ಲಿ ಸಾಕಷ್ಟು ಮುತುವರ್ಜಿವಹಿಸಿದ್ದಾರೆ. ಇತ್ತೀಚೆಗೆ ಬಿಸಿಯೂಟದ ನೌಕರರನ್ನು ಜಿಲ್ಲೆಯಾದ್ಯಂತ ಸಂಘಟಿಸಿದ್ದಾರೆ. ರಾಮದುರ್ಗ ಪಟ್ಟಣದ ವಾಹನ ಚಾಲಕರು ಇವರ ನೇತೃತ್ವದಲ್ಲಿ ಸಂಘಟಿತರಾಗಿದ್ದಾರೆ. ಸವದತ್ತಿಯ ನೂಲಿನ ಗಿರಣಿ ಕಾರ್ಮಿಕರನ್ನು ಸಂಘಟಿಸಿ ಅವರ ಹೋರಾಟಗಳಿಗೆ ನೇತೃತ್ವ ನೀಡಿದ್ದಾರೆ. ಅಕ್ರಮ ಸಾಗುವಳಿ ಪ್ರಕರಣಗಳನ್ನು ಸಕ್ರಮಗೊಳಿಸಿ ಪಟ್ಟಾ ಕೊಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಸಿಇಟಿ ಮುಂದುವರಿಕೆಗೆ ವಿದ್ಯಾರ್ಥಿ-ಪೋಷಕರ ಆಗ್ರಹ

ಇತ್ತೀಚೆಗೆ ಮೈಸೂರಿನಲ್ಲಿ ಉನ್ನತ ಶಿಕ್ಷಣ ಉಳಿಸಿ, ಸಿಇಟಿ ಮುಂದುವರೆಸಿ ಎನ್ನುವ ಘೋಷಣೆಯೊಂದಿಗೆ SFI ಸಹಯೋಗದಲ್ಲಿ ವಿಮಾ ನೌಕರರ ಸಂಘ, ವಿಕ್ರಾಂತ್ ಟೈರ್ಸ್ ನೌಕರರ ಸಂಘ, ಬ್ಯಾಂಕ್ ನೌಕರರ ಒಕ್ಕೂಟದ ಪ್ರಾಯೋಜಕತ್ವದಲ್ಲಿ ಪುರಭವನದಲ್ಲಿ ವಿದ್ಯಾರ್ಥಿ ಮತ್ತು ಪೋಷಕರ ಸಮಾವೇಶ ಜರುಗಿತು.

ಪ್ರಸ್ತಾವನೆ ಮಾಡಿದ ವಿಮಾ ನೌಕರರ ಸಂಘದ ಅಧ್ಯಕ್ಷರಾದ ಎನ್.ವಿಜಯಕುಮಾರ್, ಶೈಕ್ಷಣಿಕ ರಂಗದ ವ್ಯಾಪಾರೀಕರಣದಿಂದ ಪ್ರತಿಭಾವಂತ ವಿದ್ಯಾರ್ಥಿಗಳು ಉನ್ನತ ಹಾಗೂ ವೃತ್ತಿಪರ ಶಿಕ್ಷಣದಿಂದ ವಂಚಿತರಾಗುತ್ತಿದ್ದು, ಅವರ ಪೋಷಕರು ಖಾಸಗೀ ಶಿಕ್ಷಣ ಸಂಸ್ಥೆಗಳು ವಿಧಿಸುತ್ತಿರುವ ಶುಲ್ಕವನ್ನು ಭರಿಸಲಾಗದೇ ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸದಿರುವಂಥ ದುರಂತ ಪರಿಸ್ಥಿತಿಯನ್ನು ವಿವರಿಸಿದರು. ಜಾಗತೀಕರಣದ ಭಾಗವಾಗಿ ಸರ್ಕಾರಗಳು ಮುಕ್ತ ಮಾರುಕಟ್ಟೆ ನೀತಿಯನ್ನು ಅನುಸರಿಸುತ್ತಿದ್ದು, ಆ ಮಾರುಕಟ್ಟೆಯ ಬೇಡಿಕೆಗಳ ಅವಶ್ಯಕತೆಗೆ ಅನುಗುಣವಾಗಿ ವಿದ್ಯಾರ್ಥಿಗಳನ್ನು ತಯಾರಿಸುವ ಕಾರ್ಖಾನೆಗಳಾಗಿ ಪರಿವರ್ತಿತವಾಗುತ್ತಿದ್ದು ಶಿಕ್ಷಣವು ಸಮಾಜದಿಂದ ವಿಮುಖವಾಗುತ್ತಿದೆ. ಎಂದರು. IMF, ವಿಶ್ವ ಬ್ಯಾಂಕ್‌ಗಳಿಂದ ಪಡೆದ ಸಾಲಕ್ಕೆ ಪ್ರತಿಯಾಗಿ ತಮ್ಮ ಮುಂಗಡ ಪತ್ರದ ಕೊರತೆಯನ್ನು ನೀಗಿಸಿಕೊಳ್ಳಲು ಶಿಕ್ಷಣ, ಆರೋಗ್ಯ, ಸಮಾಜ ಕಲ್ಯಾಣದಂಥ ಕ್ಷೇತ್ರಗಳಿಗೆ ಕಡಿತ ಮಾಡುತ್ತಿದೆ ಎಂದು ಆಪಾದಿಸಿದರು. ಸಮಾಜದ ವರ್ಗಸ್ವರೂಪದ ತಿಳುವಳಿಕೆಯನ್ನು ನೀಡಬೇಕಿದ್ದ ಶಿಕ್ಷಣ, ವರ್ಗ ಪರಂಪರೆಯನ್ನು ಮುಂದುವರೆಸುವ ವಿಧಾನವಾಗಿ ಶ್ರೀಮಂತ ಮಕ್ಕಳಿಗೆ ಮಾತ್ರ ಶಿಕ್ಷಣ, ಬಡ ರೈತ ಕಾರ್ಮಿಕರ ಮಕ್ಕಳು ಹೊಲ-ಗದ್ದೆಗಳಲ್ಲಿ ಕಾರ್ಖಾನೆಗಳಲ್ಲಿ ಮಾತ್ರ ಎನ್ನುವ ಶಿಕ್ಷಣ ಇಂದು ಜಾರಿಯಾಗುತ್ತಿರುವುದರಿಂದ ಅದನ್ನು ವಿರೋಧಿಸಿ ಸರ್ವರಿಗೂ ಅವಕಾಶ ನೀಡುವ ಶಿಕ್ಷಣ ಜಾರಿಯಾಗಬೇಕು ಎಂದು ಹೇಳಿದರು.

SFI ರಾಜ್ಯ ಉಪಾಧ್ಯಕ್ಷರಾದ ಕೃಷ್ಣೇಗೌಡ ನ್ಯಾಯಾಂಗದ ತೀರ್ಪಿನಿಂದ ಖಾಸಗೀ ಶಿಕ್ಷಣ ಸಂಸ್ಥೆಗಳು ಉನ್ನತ ಶಿಕ್ಷಣಕ್ಕೆ ಶುಲ್ಕವನ್ನು ಕೊಡುವುದರ ಬದಲಾಗಿ ದರವನ್ನು ನಿಗದಿ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿರುವ ಬಗ್ಗೆ ವಿವರಿಸಿದರು. ವೃತ್ತಿಪರ ಶಿಕ್ಷಣವಲ್ಲದೇ ಸಾಮಾನ್ಯ ಪದವಿ, ಸ್ನಾತಕೋತ್ತರ ಪದವಿಗಳಿಗೂ ಈಗ ಅನಿರ್ಬಂಧಿತ ಶುಲ್ಕ ವಿಧಿಸುವ ಸ್ವಾತಂತ್ರ್ಯವನ್ನು ಖಾಸಗೀ ಶಿಕ್ಷಣ ರಂಗಕ್ಕೆ ನೀಡಲು ಸರ್ಕಾರ ಮುಂದಾಗುತ್ತಿದೆ. ಸರ್ಕಾರದ ವಿಶ್ವವಿದ್ಯಾನಿಲಯಗಳಲ್ಲೂ "ಪೇಮೆಂಟ್ ಸೀಟ್" ಪ್ರಾರಂಭವಾಗಿದ್ದು, ಶಿಕ್ಷಣದ ಗುಣಮಟ್ಟಕ್ಕೆ ಅಪಾಯಕಾರಿ ಎಂದರು. CET ಬಗೆಗಿನ ಗೊಂದಲ ವಿದ್ಯಾರ್ಥಿಗಳಲ್ಲಿ ಆತಂಕ ಮೂಡಿಸಿದ್ದು ಅದನ್ನು ಉಳಿಸಿಕೊಳ್ಳಲು ಹೋರಾಟವೊಂದೆ ಮಾರ್ಗ ಎಂದರು.

ಸಭೆಯಲ್ಲಿ ಪೋಷಕರು, ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯ ಮಂಡಿಸಿದರು. ಅಧ್ಯಕ್ಷತೆಯನ್ನು ವಿಕ್ರಾಂತ್ ಎಂಪ್ಲಾಯೀಸ್ ಯೂನಿಯನ್ ಅಧ್ಯಕ್ಷ ಜಯರಾಮ ವಹಿಸಿದ್ದರು. ಬ್ಯಾಂಕ್ ನೌಕರರ ಒಕ್ಕೂಟದ ಮುಖಂಡ ದೇವರಾಜ್ ವಂದನೆ ಸಲ್ಲಿಸಿದರು.

ಕುಣಿಗಲ್ ನ್ಯಾಯಬೆಲೆ ಅಂಗಡಿಗಳ ಮೋಸ-ವಂಚನೆಗಳ ವಿರುದ್ಧ ಸಿಐಟಿಯು ಧರಣಿ

ಕುಣಿಗಲ್ ಪಟ್ಟಣದ ಮಲ್ಲಾಘಟ್ಟ, ಬಿದನಗೆರೆ ವ್ಯಾಪ್ತಿಯಲ್ಲಿರುವ ಬಡ ಕೂಲಿ ಕಾರ್ಮಿಕ ಕಾಲೋನಿಗಳಿಗೆ ಸೇರಿದ ನ್ಯಾಯಬೆಲೆ ಅಂಗಡಿಯಲ್ಲಿ ತಿಂಗಳಿಗೆ 8 ಕೆ.ಜೆ. ಅಕ್ಕಿ, 2 ಲೀ. ಸೀಮೆಎಣ್ಣೆ ಕೊಟ್ಟು ಬಡವರು ಮತ್ತು ಸಾರ್ವಜನಿಕರಿಗೆ ಮೋಸ ಮಾಡಲಾಗುತ್ತಿತ್ತು. ಹಳದಿ ಪಡಿತರ ಚೀಟಿ ಪಡೆದವರಿಗೆ ತಿಂಗಳಿಗೊಮ್ಮೆ 28 ಕೆ.ಜಿ.ಅಕ್ಕಿ, 10 ಲೀಟರ್ ಸೀಮೆಎಣ್ಣೆ, ಗೋಧಿ ಮತ್ತು ಸಕ್ಕರೆ ವಿತರಿಸಬೇಕಾಗಿತ್ತು. ಆದರೆ ಸುಮಾರು ತಿಂಗಳುಗಳಿಂದ ಬಡವರಿಗೆ ಮೋಸ ಮಾಡಿ ಅವರ ಪಾಲಿನ ಆಹಾರ ಧಾನ್ಯವನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲಾಗುತ್ತಿತ್ತು. ಆಹಾರ ಇಲಾಖೆಯವರಾಗಲೀ ಇದರ ಬಗ್ಗೆ ಗಮನ ಹರಿಸಲಿಲ್ಲ. ಇದರ ವಿರುದ್ಧ ಮಾರ್ಚ್ 24 ರಂದು ಸಿಐಟಿಯುನ ಬೀಡಿ ಕಾರ್ಮಿಕರು ಮತ್ತು ಬಡ ಕೂಲಿ ಕಾರ್ಮಿಕರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ತಹಶೀಲ್ದಾರರವರ ಕಛೇರಿ ಮುಂಭಾಗ ಧರಣಿ ನಡೆಸಿದರು. ಧರಣಿಯಲ್ಲಿ ಸಾರ್ವಜನಿಕರು ನೂರಾರು ಸಂಖ್ಯೆಯಲ್ಲಿ ಸೇರಿದ್ದರು. ಸಭೆಯನ್ನುದ್ದೇಶಿಸಿ ಕಾರ್ಮಿಕ ಮುಖಂಡ ಮತ್ತು ತಾಲ್ಲೂಕು ಸಿಐಟಿಯುನ ಕಾರ್ಯದರ್ಶಿ ಕಾಮ್ರೇಡ್ ಅಬ್ದುಲ್ ಮುನಾಫ್ ಮಾತನಾಡಿದರು. ಕೇಂದ್ರ ಸರ್ಕಾರದ ಉದಾರೀಕರಣ, ನೀತಿಯಿಂದ ಕಾರ್ಖಾನೆಗಳು ಮುಚ್ಚಿ ಹೋಗಿವೆ, ಕಾರ್ಮಿಕರು ಬೀದಿ ಪಾಲಾಗಿದ್ದಾರೆ. ಅದರಲ್ಲೂ ಬೀಡಿ ಕಾರ್ಮಿಕರ ಸ್ಥಿತಿ ಹದಗೆಟ್ಟು ಹೋಗಿದೆ, ವಾರದಲ್ಲಿ 2 ದಿನ ಕೆಲಸ ಸಿಗುತ್ತಿಲ್ಲ. ರಾಜ್ಯ ಸರ್ಕಾರ ತುಟ್ಟಿಭತ್ಯೆ ಹೆಚ್ಚಿಸಿ 1 ವರ್ಷವಾದರೂ ಬೀಡಿ ಮಾಲೀಕರು ಇದುವರೆವಿಗೂ ಕೊಟ್ಟಿಲ್ಲ. ಆದರೆ ರಾಜ್ಯ ಕಾರ್ಮಿಕ ಮಂತ್ರಿ ಖಮ್ರುಲ್ ಇಸ್ಲಾಂ ರವರು ಮೌನ ತಾಳಿರುವುದನ್ನು ನೋಡಿದಲ್ಲಿ ಮಾಲೀಕರಿಗೆ ತೃಪ್ತಿಪಡಿಸುತ್ತಿದ್ದಾರೆಂದು ಕಾರ್ಮಿಕ ಮುಖಂಡರು ಆಪಾದಿಸಿದರು. ತಹಶೀಲ್ದಾರರವರಿಗೆ ಪಡಿತರ ಅವ್ಯವಹಾರ ಸರಿಪಡಿಸಲು ಒತ್ತಾಯಿಸಿ ಮನವಿ ಪತ್ರ ನೀಡಲಾಯಿತು, ತಹಶಿಲ್ದಾರರು ಮನವಿ ಪತ್ರ ಸ್ವೀಕರಿಸಿ, ಅತಿ ಶೀಘ್ರದಲ್ಲಿ ಸಮಸ್ಯೆ ಬಗೆಹರಿಸಿ ಬಡವರಿಗೆ ಆಹಾರ ಧಾನ್ಯವನ್ನು ಸರಿಯಾದ ರೀತಿಯಲ್ಲಿ ಸಿಗುವಂತೆ ವ್ಯವಸ್ಥೆ ಮಾಡುವ ಆಶ್ವಾಸನೆ ಕೊಟ್ಟರು.

ಬಿಜೆಪಿ ಮೈತ್ರಿ ಕೂಟವನ್ನು ಸೋಲಿಸಲು ಯುವ ಮತದಾರರಿಗೆ ಕರೆ


ಪ್ರಸ್ತುತ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ರಾಜ್ಯದ ಯುವ ಮತದಾರರು ಬಿಜೆಪಿ ಮತ್ತು ಅದರ ಮಿತ್ರಕೂಟದ ವಿರುದ್ಧ ಮತ ಚಲಾಯಿಸಿ, ಕೋಮುವಾದಿ ರಾಜಕೀಯವನ್ನು ಸಂಪೂರ್ಣವಾಗಿ ತಿರಸ್ಕರಿಸಲು ಹಾಗೂ ಶಿಕ್ಷಣ ಮತ್ತು ಉದ್ಯೋಗದ ಹಕ್ಕುಗಳಿಗಾಗಿ ಶ್ರಮಿಸುತ್ತಿರುವ ಎಡ ಪ್ರಗತಿಪರ ಹಾಗೂ ಜಾತ್ಯಾತೀತ ಪಕ್ಷಗಳ ಅಭ್ಯರ್ಥಿಗಳಿಗೆ ತಮ್ಮ ಮತ ನೀಡಲು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ಹಾಗೂ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ರಾಜ್ಯ ಸಮಿತಿಗಳು ಜಂಟಿಯಾಗಿ ರಾಜ್ಯದ ಯುವ ಮತದಾರರಿಗೆ ಕರೆ ನೀಡಿವೆ. ಏಪ್ರಿಲ್ 14 ರಂದು ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ ಜಂಟಿ ಪತ್ರಿಕಾ ಗೋಷ್ಠಿಯಲ್ಲಿ ಈ ಕರೆಯನ್ನು ನೀಡಲಾಗಿದ್ದು ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ಉಪಾಧ್ಯಕ್ಷರಾದ ಎಸ್.ಲಕ್ಷ್ಮೀಕುಮಾರ್, ಬೆಂಗಳೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಧನರಾಜ್ ಅಲ್ಲದೇ. ಎಸ್‌ಎಫ್‌ಐ ನ ರಾಜ್ಯ ಅಧ್ಯಕ್ಷೆ ಕೆ.ಎಸ್.ಲಕ್ಷ್ಮಿ ಮತ್ತು ಉಪಾಧ್ಯಕ್ಷ ಎಲ್.ಕೃಷ್ಣೇಗೌಡ ಜಂಟಿ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು.



ಬೆಸ್ಟ್ ಬೇಕರಿ ಮೊಕದ್ದಮೆಯಲ್ಲಿ ಸುಪ್ರೀಂಕೋರ್ಟ್ ತೀರ್ಪು

ನರಹಂತಕ ನರೇಂದ್ರ ಮೋದಿ ತಪ್ಪಿಸಿಕೊಳ್ಳಲು ಪ್ರಯತ್ನ ಪಟ್ಟಷ್ಟು ಹೆಚ್ಚು ಸಿಕ್ಕಿಹಾಕಿಕೊಳ್ಳುತ್ತಿದ್ದಾನೆ. ಬೆಸ್ಟ್ ಬೇಕರಿ ಪ್ರಕರಣದಲ್ಲಿ 14 ಜನ ಅಲ್ಪಸಂಖ್ಯಾತ ಮಹಿಳೆಯರನ್ನು ಮಕ್ಕಳನ್ನು ಜೀವಂತ ಸುಟ್ಟುಹಾಕಿದವರ ರಕ್ಷಣೆಗೆ ನಿಂತಿರುವ ಈ ಕಟುಕನನ್ನು ಸರ್ವೋಚ್ಚ ನ್ಯಾಯಾಲಯ ಮತ್ತೆ ಮಹಾರಾಷ್ಟ್ರದ ಕಟಕಟೆಗೆ ಅಟ್ಟಿರುವ ವೃತ್ತಾಂತ ಇಲ್ಲಿದೆ

ನರೇಂದ್ರ ಮೋದಿ ಈಗಲಾದರೂ ತೊಲಗಬೇಕು



ಗುಜರಾತಿನ ಬೆಸ್ಟ್ ಬೇಕರಿ ಮೊಕದ್ದಮೆಯಲ್ಲಿ ದೇಶದ ಸರ್ವೋಚ್ಚ ನ್ಯಾಯಲಯ ಒಂದು ಐತಿಹಾಸಿಕ ತೀರ್ಪು ನೀಡಿದೆ. 2002 ರಲ್ಲಿ ಅಲ್ಪಸಂಖ್ಯಾತರ ವಿರುದ್ಧ ನಡೆದ ಹತ್ಯಾಕಾಂಡದಲ್ಲಿ ಈ ಬೇಕರಿಯೊಳಗ ಹದಿನಾಲ್ಕು ಜನರನ್ನು ಜೀವಂತ ಸುಟ್ಟು ಹಾಕಲಾಗಿತ್ತು. ಕೆಳಗಿನ ನ್ಯಾಯಾಲಯವೊಂದು ಎಲ್ಲಾ 21 ಆಪಾದಿತರನ್ನು ಖುಲಾಸೆ ಮಾಡಿತ್ತು. ರಾಜ್ಯದ ಹೈಕೋರ್ಟ್ ಈ ತೀರ್ಪನ್ನು ಎತ್ತಿ ಹಿಡಿದಿತ್ತು.

ಗುಜರಾತಿನಲ್ಲಿ ಮುಸ್ಲಿಂ ಕೋಮಿನ ವಿರುದ್ಧ ನಡೆದ ಸರಕಾರೀ ಪ್ರಾಯೋಜಿತ ಹಿಂಸಾಚಾರದಲ್ಲಿ ಏನು ನಡೆಯಿತು, ಈ ಹೀನ ಕೃತ್ಯಗಳಿಗೆ ಜವಾಬ್ದಾರರಾದವರನ್ನೆಲ್ಲ ರಕ್ಷಿಸುವ ಕೆಲಸ ಪ್ರಭುತ್ವದ ಶಾಮೀಲಿನಿಂದಲೇ ನಡೆದು ಹೇಗೆ ನ್ಯಾಯ ಪ್ರಕ್ರಿಯೆಯನ್ನೇ ತಿರುಚಲಾಗುತ್ತಿದೆ ಎಂಬುದಕ್ಕೆ ಬೆಸ್ಟ್ ಬೇಕರಿ ಮೊಕದ್ದಮೆ ಒಂದು ಸಂಕೇತವೇ ಆಗಿಬಿಟ್ಟಿದೆ.


ನ್ಯಾಯಮೂರ್ತಿ ಅರಿಜಿತ್ ಪಸಾಯತ್ ಹಾಗೂ ನ್ಯಾಯಮೂರ್ತಿ ದೊರೆಸ್ವಾಮಿ ರಾಜುರವರು ನೀಡಿರುವ ತೀರ್ಪು ಗುಜರಾತಿನಲ್ಲಿ ನ್ಯಾಯಾಲಯಗಳು ನಡೆಸಿದ ನ್ಯಾಯ ಪ್ರಕ್ರಿಯೆಯ ವಿಧಾನ ಹಾಗೂ ಪ್ರಭುತ್ವದ ಪಾತ್ರವನ್ನು ಕುರಿತಂತೆ ಒಂದು ತೀವ್ರವಾದ ಟೀಕೆ. ಈ ತೀರ್ಪು ನರೇಂದ್ರ ಮೋದಿ ಸರ್ಕಾರವನ್ನು ಖಂಡಿಸಿರುವ ರೀತಿ ಹೀಗಿದೆ - 'ಬೆಸ್ಟ್ ಬೇಕರಿ ಮುಗ್ಧ ಮಕ್ಕಳು ಮತ್ತು ಅಸಾಹಯಕ ಮಹಿಳೆಯರು ಬೆಂಕಿಯಲ್ಲಿ ಉರಿಯುತ್ತಿದ್ದಾಗ ಆಧುನಿಕ ನೀರೋಗಳು ಬೇರೆಡೆ ಮುಖ ತಿರುವಿದ್ದರು. ಬಹುಶಃ ಈ ಕೃತ್ಯ ಎಸಗಿದವರನ್ನು ಉಳಿಸುವುದು ಅಥವಾ ರಕ್ಷಿಸುವುದು ಹೇಗೆ ಎಂದು ಚರ್ಚಿಸುತ್ತಿದ್ದಿರಬೇಕು".

ವಿಚಾರಣೆ ನಡೆದ ರೀತಿ ಬಗ್ಗೆ ಹೇಳುತ್ತಾ ಈ ತೀರ್ಪು "ನ್ಯಾಯನೀಡಿಕೆ ವ್ಯವಸ್ಥೆಯನ್ನು ದಾರಿ ತಪ್ಪಿಸಲು, ದುರುಪಯೋಗಪಡಿಸಿಕೊಳ್ಳಲು, ತಪ್ಪು ರೀತಿಯಲ್ಲಿ ಬಳಸಿಕೊಳ್ಳಲು ಮತ್ತು ಕಪಟೋಪಾಯಗಳಿಂದ ನಿರುಪಯುಕ್ತಗೊಳಿಸಲು ಬಿಡಲಾಯಿತು. ತನಿಖೆಯನ್ನು ಕಾಟಾಚಾರಕ್ಕೆ ಮಾಡಿದಂತಿದೆ ಮತ್ತು ನಿಷ್ಪಕ್ಷಪಾತವಂತೂ ಅದರಲ್ಲಿ ಇರಲಿಲ್ಲ, ಸತ್ಯವನ್ನು ಕಂಡುಹಿಡಿಯುವ ಹಾಗೂ ಅಪರಾಧಕ್ಕೆ ಹೊಣೆಗಾರರಾದವರನ್ನು ಶಿಕ್ಷಿಸುವ ಯಾವುದೇ ನಿರ್ದಿಷ್ಟ ಗುರಿ ಅದರಲ್ಲಿ ಇರಲಿಲ್ಲ" ಎಂಬ ತೀರ್ಮಾನಕ್ಕೆ ಬಂದಿದೆ.

ರಾಜ್ಯ ಸರ್ಕಾರ ನೇಮಿಸಿದ ಪಬ್ಲಿಕ್ ಪ್ರಾಸಿಕ್ಯೂಟರ್ ಆರೋಪಿಯ ಪರ ವಕೀಲನಂತೆ ವರ್ತಿಸಿದರು, ವಾಸ್ತವವಾಗಿ ನ್ಯಾಯಾಲಯದ ಎದುರು ಸತ್ಯವನ್ನು ಇಡುವುದು ಅವರ ಕರ್ತವ್ಯವವಾಗಿತ್ತು ಎನ್ನುತ್ತಾ ಆತನ ಪಾತ್ರವನ್ನೂ ಖಂಡಿಸಿದೆ.

ಗುಜರಾತ್ ಹೈಕೋರ್ಟ್ ಈ ಮೊಕದ್ದಮೆಯಲ್ಲಿ ಪ್ರಮುಖ ಸಾಕ್ಷಿಯಾದ ಝಹಿರಾ ಶೇಖ್‌ರವರನ್ನು "ದುರಪಯೋಗಪಡಿಸಿಕೊಂಡು ಇತರರನ್ನು ದೂಷಿಸುವ ಒಂದು ನಿರ್ದಿಷ್ಟ ಪಿತೂರಿಯಿದೆ" ಎಂದು ಹೇಳಿ ಆಕೆಗೆ ನೆರವಾದ ಶ್ರೀಮತಿ ತೀಸ್ತಾ ಸೆಟಲ್‌ವಾಡ್‌ರನ್ನು ಅನಗತ್ಯವಾಗಿ ಟೀಕಿಸಿತ್ತು. ಸುಪ್ರೀಂಕೋರ್ಟ್ ತೀರ್ಪು ಆ ಮಾತುಗಳನ್ನು ಕಡತದಿಂದ ತೆಗೆದು ಹಾಕಿ, ಈ ಭ್ರಮಣೆಯನ್ನು ಸರಿಪಡಿಸಿದೆ.

ಈ ತೀರ್ಪು ಹಲವು ರೀತಿಗಳಲ್ಲಿ ವಿಶಿಷ್ಟವಾದದ್ದು. ಅದು ಮರುವಿಚಾರಣೆಗೆ ಆದೇಶ ನೀಡಿದ್ದು, ಅದನ್ನು ಮಹಾರಾಷ್ಟ್ರದಲ್ಲಿ ನಡೆಸಬೇಕು ಎಂದಿದೆ; ಪಬ್ಲಿಕ್ ಪ್ರಾಸಿಕ್ಯೂಟರನ್ನು ಬದಲಿಸಬೇಕು, ಆ ಸ್ಥಾನಕ್ಕೆ ಹೊಸಬರನ್ನು ನೇಮಿಸುವಾಗ ಈ ಮೊಕದ್ದಮೆ 'ತಟ್ಟುವ ವ್ಯಕ್ತಿಗಳ' ಜತೆಗೆ ಸಮಾಲೋಚಿಸಬೇಕು ಎಂದೂ ನ್ಯಾಯಪೀಠ ಹೇಳಿದೆ.



ಇನ್ನೊಂದು ಸಾಮೂಹಿಕ ಹತ್ಯೆ ಮತ್ತು ಅತ್ಯಾಚಾರದ ಮೊಕದ್ದಮೆಯಾದ ಬಿಲ್ಕಿಸ್ ಮೊಕದ್ದಮೆಯ ತನಿಖೆಯನ್ನು ಸುಪ್ರೀಂಕೋರ್ಟ್ ಈಗಾಗಲೇ ಸಿಬಿಐಗೆ ಒಪ್ಪಿಸಿದೆ. ರಾಷ್ಟ್ರೀಯ ಮಾನವ ಹಕ್ಕು ಆಯೋಗ ಪಟ್ಟಿ ಮಾಡಿದ ಎಲ್ಲಾ ಪ್ರಮುಖ ಮೊಕದ್ದಮೆಗಳನ್ನು ಗುಜರಾತಿನ ಹೊರಗೆ ವರ್ಗಾಯಿಸುವುದು ನ್ಯಾಯನೀಡಿಕೆಯ ದೃಷ್ಟಿಯಿಂದ ಅಗತ್ಯ.

ಈ ತೀರ್ಪು ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರಕ್ಕೆ ಹಾಗೂ ಮುಖ್ಯಮಂತ್ರಿ ನರೇಂದ್ರ ಮೋದಿಗೆ ತೀವ್ರ ಹೊಡೆತ ನೀಡಿದೆ. ಇವರು ವಿಧಾನಸಭಾ ಚುನಾವಣೆಗಳಲ್ಲಿ ತಮಗೆ ಸಿಕ್ಕ ಗೆಲುವು ನ್ಯಾಯದ ದಾರಿಯನ್ನು ತಿರುಚಲು ಸಿಕ್ಕ ಜನಾದೇಶ ಎಂಬಂತೆ ಭಂಡತನದಿಂದ ವ್ಯಾಖ್ಯಾನಿಸುತ್ತಿದ್ದರು. ಗುಜರಾತಿನಲ್ಲಿ ನ್ಯಾಯಾಂಗದ ಕೆಲವು ವಿಭಾಗಗಳನ್ನು ಕೂಡಾ ಅಲ್ಲಿ ವ್ಯಾಪಿಸಿರುವ 'ಹಿಂದುತ್ವ' ತಟ್ಟುತ್ತಿರುವ ಸಂದರ್ಭದಲ್ಲಿ ಸುಪ್ರೀಂಕೋರ್ಟ್‌ನ ಈ ತೀರ್ಪು ಮಧ್ಯ ಪ್ರವೇಶಿಸಿರುವುದು ಬಹಳ ಮಹತ್ವದ ಸಂಗತಿ. ಈ ಮೊಕದ್ದಮೆಯ ಇಪ್ಪತ್ತೊಂದು ಆಪಾದಿತರನ್ನು ಆರಂಭದಲ್ಲಿ ಖುಲಾಸೆ ಮಾಡಿದ ಸೆಶ್ಯನ್ಸ್ ನ್ಯಾಯಾಧೀಶ ಭಾರತದಲ್ಲಿ ಕೋಮು ಹಿಂಸಾಚಾರ ಏಕೆ ನಡೆಯುತ್ತಿದೆ ಎಂಬುದಕ್ಕೆ ಒಂದು ವಿಲಕ್ಷಣವಾದ ವಿವರಣೆ ನೀಡಿದ್ದರು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬಹುದು.

> **ಕೆಳವರ್ಗಕ್ಕೆ**
>
> ಬಡಮುಗ್ಧ ಕೆಳವರ್ಗ ಮಂದಿಗಳೆ ಕೇಳಿ
> ನಿಮ್ಮವರ ಮೇಲೆಯೇ ನಡೆದಿಹುದು ದಾಳಿ
> ಮೇಲ್ವರ್ಗ ಹಿತಕಾಗಿ ಮಾತ್ರವೇ ನೋಡಿ
> ಮತ ಕೇಳ ಬರುತಿಹರು ಕಪಟಿಗಳು ಕೂಡಿ
>
> \- ವಿಡಂಬಾರಿ

ದೇಶದ ಸರ್ವೋಚ್ಚ ನ್ಯಾಯಾಲಯ ಈ ರೀತಿ ಕಟು ಮಾತುಗಳಲ್ಲಿ ಟೀಕಿಸಿರುವಾಗ ನರೇಂದ್ರ ಮೋದಿಯವರದ್ದು ಮುಖ್ಯ ಮಂತ್ರಿ ಸ್ಥಾನದಿಂದ ತೆಗೆದು ಹಾಕುವುದು ಬಿಜೆಪಿ ಮುಖಂಡತ್ವದ ಕರ್ತವ್ಯವಾಗುತ್ತದೆ. ಆದರೆ ಹಾಗ ಮಾಡುವ ಬದಲು ಬಿಜೆಪಿ ಮುಖಂಡತ್ವ ಇದು ಕೇವಲ ಒಂದು ಮೊಕದ್ದಮೆಯಲ್ಲಿ ನಡೆದಿರುವ ಕಾನೂನಿನ ಮಧ್ಯಪ್ರವೇಶ ಮಾತ್ರ, ಎಂದು ತಳ್ಳಿಹಾಕಿ ಇದು ಮುಖ್ಯಮಂತ್ರಿ ಬಗ್ಗೆ ಏನೂ ಹೇಳುವುದಿಲ್ಲ ಎಂದು ನಿಲುವು ತಳೆದಿದೆ. ಈ ನಿಲುವು ಅದು ಇತ್ತೀಚೆಗೆ ಅಲ್ಪಸಂಖ್ಯಾತರ ಬಗ್ಗೆ ಹೇಳಿರುವ ಸಲುನುಡಿಗಳ



ಹಿಂದಿರುವ ಗೋಸುಂಬೆತನವನ್ನು ಬಯಲಿಗೆಳೆದಿದೆ. ಬಿಜೆಪಿಯ ಚುನಾವಣಾ ಪ್ರಣಾಳಿಕೆ ತಾನು ಅಲ್ಪಸಂಖ್ಯಾತರ ಹಿತೈಷಿ, ಅವರ ಸಾಮಾಜಿಕ ಮತ್ತು ಆರ್ಥಿಕ ಮುನ್ನಡೆಗೆ ಕೆಲಸ ಮಾಡುವುದಾಗಿ ಪ್ರತಿಜ್ಞೆ ಮಾಡಿದೆ. ಪ್ರಧಾನ ಮಂತ್ರಿ ವಾಜಪೇಯಿಯವರು ಮುಸ್ಲಿಮರಿಗೆ ಬಿಜೆಪಿ ವಿರೋಧಿಗಳು ಹೇಳುವ ಮಾತುಗಳಿಗೆ ಮರುಳಾಗದಿರಿ ಎನ್ನುತ್ತಾ ಬಿಜೆಪಿ ಸರ್ಕಾರದಡಿ ಅವರ ವಿರುದ್ಧ ಪಕ್ಷಪಾತ ನಡೆಯುವುದಿಲ್ಲ ಎಂದು ಭರವಸೆಗಳನ್ನು ನೀಡಿದ್ದರು.

ಈ ಎಲ್ಲಾ ಭರವಸೆಗಳು, ಮಾತುಗಳು ಈಗ ಪರೀಕ್ಷೆಗೆ ಒಳಗಾಗಿವೆ. ವಾಜಪೇಯಿ ಮತ್ತು ಅಡ್ವಾಣಿಯಂತಹ ಮುಖಂಡರು ಗುಜರಾತ್ ಸನ್ನಿವೇಶದ ಬಗ್ಗೆ ಹೇಗೆ ವರ್ತಿಸುತ್ತಾರೆ ಎಂದು ನೋಡಬೇಕಾಗಿದೆ. ಮಾಧ್ಯಮಗಳವರು ಕೇಳಿದಾಗ ಗುಜರಾತಿನ ಘಟನೆಗಳ ಬಗ್ಗೆ ಖೇದ ವ್ಯಕ್ತಪಡಿದರಷ್ಟೇ ಸಾಲದು. ಈ ಹಿಂಸಾಚಾರ ಒಂದು ಚುಕ್ಕೆ ಎಂದು ಹೇಳಿದ·ನಂತರ ಅಡ್ವಾಣಿಯವರು ತನ್ನ ರಥಯಾತ್ರೆಯಲ್ಲಿ ಅದೇ ಮೋದಿಯೊಂದಿಗೆ ಒಂದೇ ವೇದಿಕೆಯಲ್ಲಿ ನಿಂತು ಆತನ ಬೈಗುಳಗಳ ಪ್ರವಾಹಕ್ಕೆ ಮೌನ ಅನುಮೋದನೆ ನೀಡಿದ್ದಾರೆ.

ಕೇಂದ್ರ ಸರ್ಕಾರ, ಯಾವುದೇ ರಾಜ್ಯದಲ್ಲಿ ಸಂವಿಧಾನದ ಅಂಶಗಳ ಉಲ್ಲಂಘನೆಯಾದಾಗ, ಅವುಗಳಿಗೆ ಸವಾಲು ಬಂದಾಗ ಮಧ್ಯ ಪ್ರವೇಶಿಸಲು ಕರ್ತವ್ಯ ಬದ್ಧವಾಗಿದೆ. ಗುಜರಾತಿನಲ್ಲಿ ನರೇಂದ್ರಮೋದಿಯವರ ರಾಜ್ಯಭಾರದಲ್ಲಿ ಕಾನೂನಿನ ಆಳ್ವಿಕೆ ಮತ್ತು ಸಂವಿಧಾನ ಕೆಲಸ ಮಾಡುತ್ತಿಲ್ಲ ಎಂಬುದೀಗ ಸುಸ್ಪಷ್ಟ. ಸುಪ್ರೀಂಕೋರ್ಟ್ ಬೆಸ್ಟ್ ಬೇಕರಿ ಮೊಕದ್ದಮೆಯಲ್ಲಿನ ಅಂತಿಮ ತೀರ್ಪು ನೀಡುವವರೆಗೆ ಹಲವು ಬಾರಿ ಮಾಡಿರುವ ಟಿಪ್ಪಣಿಗಳು ಅಲ್ಲಿನ ಗಂಭೀರ ಸ್ಥಿತಿಯನ್ನು ದೃಢಪಡಿಸಿವೆ.

ಹಿಂದುತ್ವ ತತ್ವವನ್ನು ಜಾರಿಗೆ ತಂದಾಗ ಅದು ಸಂವಿಧಾನದ ಮೂಲತತ್ವಗಳಾದ ಪ್ರಜಾಪ್ರಭುತ್ವಕ್ಕೆ ಮತ್ತು ಜಾತ್ಯತೀತತೆಗೆ ವಿರುದ್ಧವಾಗಿರುತ್ತದೆ ಎಂಬುದಕ್ಕೆ ಇದಕ್ಕಿಂತ ಹೆಚ್ಚಿನ ಸಾಕ್ಷ್ಯ ಬೇಕಿಲ್ಲ. ಈ ಕಟು ಸತ್ಯವನ್ನು ಮರೆಮಾಚಲು ಪ್ರಯತ್ನಿಸುವ ಬಿಜೆಪಿ ಮತ್ತೆ-ಮತ್ತೆ ಗುಜರಾತ್ ಬಯಲಿಗೆಳೆದ ವಾಸ್ತವತೆಯನ್ನು ಎದುರಿಸಬೇಕಾಗುತ್ತದೆ.

> **ಮೋದಿಗಳು**
>
> ನಮ್ಮಲ್ಲಿ ನಾಮಾಂಕಿತ ಮೋದಿಗಳು ಮತ್ತೆ
> ಇಬ್ಬರೇ ಈ ವಿಷಯ ನಿಮಗಿಂದು ಗೊತ್ತೆ?
> ರಕ್ಷಿಸಲು ಒಬ್ಬನಿದ ಬೇಕನ್ನು ಇತ್ತು
> ಇನ್ನೊಬ್ಬ ಎಸೆಯುವನು ಕಲ್ಲನ್ನು ಕಿತ್ತು.
>
> \- ವಿಡಂಬಾರಿ

ಕರ್ನಾಟಕದಲ್ಲಿ ಸಿಪಿ


ಕರ್ನಾಟಕದ ಸುಮಾರು 100 ತಾಲೂಕುಗಳಲ್ಲಿ ಸಿಪಿಐ(ಎಂ)ನ ಸಂಘಟನೆ, ಚಳುವಳಿ ಇದೆ. ರಾಜ್ಯ ವಿಧಾನಸಭೆಯಲ್ಲಿಯೂ ಹಲವು ಬಾರಿ ಪಕ್ಷವು ಪ್ರತಿನಿಧಿಸಲ್ಪಟ್ಟಿದೆ. ಈ ಬಾರಿ ಸ್ಪರ್ಧೆಗೆ ವಿಶೇಷ ಮಹತ್ವವಿದೆ. ಸಿಪಿಐ(ಎಂ) ತನ್ನ ಆದ್ಯತೆಗಳನ್ನು ಸ್ಪಷ್ಟವಾಗಿ ರಾಜ್ಯದ ಮತದಾರರ ಮುಂದಿಟ್ಟಿದೆ.

ಕರ್ನಾಟಕವನ್ನು ಇನ್ನೊಂದು ಗುಜರಾತ್ ಮಾಡಲು ಹೊರಟಿರುವ ಶಕ್ತಿಗಳನ್ನು ಹಿಮ್ಮೆಟ್ಟಿಸುವುದು ಕರ್ನಾಟಕದಲ್ಲಿ ಸಿಪಿಐ(ಎಂ)ನ ಪ್ರಥಮ ಆಧ್ಯತೆಯಾಗಿದೆ. ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ಮತೀಯವಾದ ಅತ್ಯಂತ ದೊಡ್ಡ ವೈರಿಯಾಗಿದೆ. ನಾಡಿನ ಜಾನಪದರು, ವಚನಕಾರರು, ದಾಸರು, ಸೂಫಿಸಂತರು ಕೋಮುಸಾಮರಸ್ಯಕ್ಕೆ ಹಾಕಿರುವ ಭದ್ರ ಬುನಾದಿಯನ್ನು ಕೆಡವಿ ಹಾಕುವುದು ಅಷ್ಟು ಸುಲಭವಲ್ಲ. ಆದ್ದರಿಂದಲೇ ಇಲ್ಲಿ ಬಿಜೆಪಿಗೆ ನೆಲೆ ದೊರೆಯುತ್ತಿಲ್ಲ. ಸಂಘಪರಿವಾರದ ಚಟುವಟಿಕೆಗಳಿಗೆ ಬೆಂಬಲ ವ್ಯಕ್ತವಾಗುತ್ತಿಲ್ಲ. ಆದರೂ ಬಿಜೆಪಿ ಮತ್ತು ಆರ್‌ಎಸ್‌ಎಸ್ ಅಪಾಯವನ್ನು ಕಡೆಗಣಿಸಲಾಗದು. ಈ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಸಿಪಿಐ(ಎಂ) ತನ್ನ ಸೈದ್ಧಾಂತಿಕ ಹೋರಾಟವನ್ನು ರಾಜಿ ಇಲ್ಲದೆ ಮುನ್ನಡೆಸಲು ಬದ್ಧವಾಗಿದೆ. ಹಿಂದುತ್ವದ ಶಕ್ತಿಗಳು ಬಡಿದೆಬ್ಬಿಸುವ ಮತೀಯ ಉನ್ಮಾದವು ಮುಸ್ಲಿಂ ಮೊದಲಾದ ಅಲ್ಪಸಂಖ್ಯಾತರ ಉದ್ವೇಗಕ್ಕೂ ಕಾರಣವಾಗುತ್ತಿದ್ದು ಅಲ್ಪಸಂಖ್ಯಾತರ ಕೋಮುವಾದವನ್ನೂ ಅಷ್ಟೇ ಪ್ರಬಲವಾಗಿ ಸಿಪಿಐ(ಎಂ) ವಿರೋಧಿಸುತ್ತದೆ. ಪ್ರಸಕ್ತ ಚುನಾವಣೆಯಲ್ಲಿ ಬಿಜೆಪಿ ಮತ್ತು ಅದರ ಮಿತ್ರಕೂಟವನ್ನು ಯಾವುದೇ ಮುಲಾಜಿಲ್ಲದೆ ಸೋಲಿಸಬೇಕೆಂದು ಸಿಪಿಐ(ಎಂ) ರಾಜ್ಯದ ಮತದಾರರಲ್ಲಿ ಮನವಿ ಮಾಡುತ್ತದೆ. ಈ ಗುರಿಸಾಧನೆಗಾಗಿ ಸಿಪಿಐ(ಎಂ) ಎಲ್ಲ ಸಮಾನ ಮನಸ್ಕ ಶಕ್ತಿ, ಸಂಘಟನೆಗಳೊಂದಿಗೆ ಸಹಕರಿಸಲು ಸಿದ್ಧವಿದೆ.


ನಾಡಿನ ಎಲ್ಲಾ ಶಾಂತಿಪ್ರಿಯ, ಪ್ರಗತಿಪರ ಶಕ್ತಿಗಳಿಗೆ ಆತಂಕವನ್ನು ಉಂಟುಮಾಡುತ್ತಿರುವ ಬಿಜೆಪಿಯ ಈ ಆರ್ಭಟಕ್ಕೆ ಕಾಂಗ್ರೆಸ್ ಪಕ್ಷದ ದುರಾಡಳಿತ, ದಿವಾಳಿಕೋರತನವೇ ಕಾರಣವಾಗಿದೆ. ಶಹಬಾನು ಪ್ರಕರಣ ಮತ್ತು ಅಯೋಧ್ಯೆಯ ವಿಷಯದಲ್ಲಿ ಕಾಂಗ್ರೆಸ್ ಇಟ್ಟ ತಪ್ಪು ಹೆಜ್ಜೆಗಳು ಈಗ ದೇಶವನ್ನು ದುರಂತದತ್ತ ತಳ್ಳುತ್ತಿವೆ. ಚರಿತ್ರೆಯಿಂದ ಪಾಠ ಕಲಿಯುವುದನ್ನು ಬಿಟ್ಟು ಕಾಂಗ್ರೆಸ್ ಸಹ ಬಹುಸಂಖ್ಯಾತ ಹಿಂದುಗಳ ಓಟುಗಳ ಮೇಲೆ ಕಣ್ಣಿಟ್ಟುಕೊಂಡು ಮೃದು ಹಿಂದುತ್ವದ ದಾರಿ ಅನುಸರಿಸುತ್ತಿದೆ.

ಅಷ್ಟು ಮಾತ್ರವಲ್ಲ, ಕಾಂಗ್ರೆಸು ಹಿಂದುತ್ವದ ವಿಷಯದಲ್ಲಿ ಬಿಜೆಪಿಯನ್ನು ಹಿಂಬಾಲಿಸುತ್ತಿದೆ, ಮಾತ್ರವಲ್ಲ ಆರ್ಥಿಕ ಧೋರಣೆಗಳ ವಿಷಯದಲ್ಲೂ ಬಿಜೆಪಿಯೊಂದಿಗೆ ಅದು ಸ್ಪರ್ಧೆ ಮಾಡುತ್ತಿದೆ. ದೇಶದ ಕೃಷಿ, ಕೈಗಾರಿಕಾ ರಂಗಗಳಲ್ಲಿ ಇಷ್ಟೊಂದು ಅನಾಹುತ ಮಾಡಿರುವ ಉದಾರೀಕರಣದ ನೀತಿಗಳನ್ನು ಮೊದಲು ಜಾರಿಗೆ ತಂದ ತಪ್ಪಿನ ಬಗ್ಗೆ ಕಾಂಗ್ರೆಸ್ಸಿಗೆ ಇನ್ನೂ ಪಶ್ಚಾತ್ತಾಪವಾಗಿಲ್ಲ. ಇದೇ ನೀತಿಗಳಿಗಾಗಿ ಜನ ಕಾಂಗ್ರೆಸನ್ನು ತಿರಸ್ಕರಿಸಿ ಮೂಲೆಗೆ ತಳ್ಳಿದ ನಂತರವೂ ಕಾಂಗ್ರೆಸ್ ಕಣ್ಣು ತೆರೆಯಲಿಲ್ಲ. ಆನಂತರ ಕೆಲವು ಸಂದರ್ಭಸಾಧಕರ ಕೂಟ ಕಟ್ಟಿಕೊಂಡು ಅಧಿಕಾರಕ್ಕೆ ಬಂದ ಬಿಜೆಪಿ ಅದೇ ವಿನಾಶಕಾರಿ ನೀತಿಗಳನ್ನು ಇನ್ನಷ್ಟು ರಭಸದಿಂದ ಜಾರಿಗೊಳಿಸುತ್ತಿರುವಾಗ ಕರ್ನಾಟಕವೂ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಅಧಿಕಾರ ನಡೆಸುತ್ತಿದ್ದ ಕಾಂಗ್ರೆಸ್ ಅದೇ ಆರ್ಥಿಕ ನೀತಿಗಳನ್ನು ಜನರ ಮೇಲೆ ಹೇರುವ ಕೆಲಸವನ್ನು ಮಾಡಿತು. ಅದರ ಪರಿಣಾಮವಾಗಿಯೇ ರಾಜಸ್ತಾನ, ಮಧ್ಯಪ್ರದೇಶ, ಛತ್ತಿಸ್‌ಘಡ ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರಗಳನ್ನು ಜನ ಹೀನಾಯವಾಗಿ ಸೋಲಿಸಿದರು.

ಕರ್ನಾಟಕದಲ್ಲಿಯೂ 26 ಸಾವಿರ ಕೋಟಿ ರೂಪಾಯಿ ವಿದೇಶಿ ಸಾಲವನ್ನು ತಂದು ಆ ಸಾಲದ ಷರತ್ತುಗಳಿಗೆ ರಾಜ್ಯದ ಜನತೆಯ ನೈಜ ಹಿತವನ್ನು ಬಲಿಕೊಟ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಜನರ ಅತೃಪ್ತಿ ಬುಗಿಲೆದ್ದಿದೆ. ರೈತರ ಆತ್ಮಹತ್ಯೆಗಳು, ಬಡವರ ಹಸಿವಿನ ಸಾವು, ಬರ ಎದುರಿಸುವಲ್ಲಿ ವಿಫಲತೆ, ಬಡವರ ಕೂಳು ಕಿತ್ತುಕೊಳ್ಳುವ ರೇಷನ್ ಕಾರ್ಡು ಕಡಿತ ನೀತಿ, ರಾಜ್ಯವನ್ನು ಕತ್ತಲೆಗೆ ತಳ್ಳುವ ವಿದ್ಯುತ್ ರಂಗದ ಖಾಸಗೀಕರಣ ಮತ್ತು ಬೆಲೆ ಏರಿಕೆ, ನೀರಾವರಿ ಯೋಜನೆಗಳಿಗಾಗಿ ಹಣ ಹೂಡಿಕೆಗೆ ಹಿಂದೇಟು, ಹಿಂದುಳಿದ ಪ್ರದೇಶಗಳ ನೈಜ ಅಭಿವೃದ್ಧಿಗೆ ಉದಾಸೀನತೆ, ಕಾರ್ಖಾನೆಗಳ ಮುಚ್ಚುವಿಕೆಯನ್ನು ತಡೆಯದಿರುವುದು ಮುಂತಾದ ಪಾಪಗಳಿಗೆ ಕೃಷ್ಣ ಸರ್ಕಾರವನ್ನು ಶಿಕ್ಷಿಸಲು ರಾಜ್ಯದ ಜನತೆ ಸಿದ್ಧರಾಗುತ್ತಿದ್ದಾರೆ. ಜನರಲ್ಲಿ ಭ್ರಮೆಗಳನ್ನು ಹುಟ್ಟಿಸುತ್ತಾ ತಮ್ಮ ಬೇಜವಾಬ್ದಾರಿತನವನ್ನು, ಭ್ರಷ್ಟಾಚಾರವನ್ನು ಮುಚ್ಚಿಹಾಕಿ ಮತ್ತೆ ಅಧಿಕಾರಕ್ಕೆ ಬರಲು ಹವಣಿಸುತ್ತಿರುವ ಕಾಂಗ್ರೆಸನ್ನು ಪ್ರಸಕ್ತ ವಿಧಾನಸಭೆ ಚುನಾವಣೆಯಲ್ಲಿ ಸೋಲಿಸುವುದು ಸಿಪಿಐ(ಎಂ)ನ ಇನ್ನೊಂದು ಪ್ರಮುಖ ಆದ್ಯತೆಯಾಗಿದೆ.


ಪಿ.ರಾಮಚಂದ್ರರಾವ್


ಎಸ್.ಸೂರ್ಯನಾರಾಯಣ ರಾವ್


ಅಪ್ಪಸ್ವಾಮಿ ರೆಡ್ಡಿ

ಉತ್ತರದ 3 ರಾಜ್ಯಗಳಲ್ಲಿ ಆದಂತೆ ಕಾಂಗ್ರೆಸ್ ದುರಾಡಳಿತದ ವಿರುದ್ಧದ ಜನರ ಅತೃಪ್ತಿಯ ಲಾಭವನ್ನು ಮತೀಯವಾದಿ ಬಿಜೆಪಿ ಗಿಟ್ಟಿಸಿಕೊಳ್ಳದಂತೆ ನೋಡಿಕೊಳ್ಳುವುದು ಸಹ ಪಕ್ಷದ ಪ್ರಮುಖ ಕಾಳಜಿಯಾಗಿದೆ. ಕರ್ನಾಟಕದಲ್ಲಿ ಅಂತಹ ಅನಾಹುತ ನಡೆಯಬೇಕಾಗಿಲ್ಲ. ಅಲ್ಲಿ ಕಾಂಗ್ರೆಸ್ ವಿರುದ್ಧ ಬೇರೆ ಆಯ್ಕೆ ಜನರ ಮುಂದೆ ಇರಲಿಲ್ಲ. ಆದರೆ ಕರ್ನಾಟಕದಲ್ಲಿ ಕಾಂಗ್ರೆಸನ್ನು ತಿರಸ್ಕರಿಸುವಾಗ ಬಿಜೆಪಿಯನ್ನು ತಿರಸ್ಕರಿಸಲು ಮೂರನೇ ಆಯ್ಕೆ ಲಭ್ಯವಿದೆ. ಜನತಾದಳ (ಜಾತ್ಯಾತೀತ)ವನ್ನು ಜನತೆ ಆಯ್ಕೆ ಮಾಡುವ ಮೂಲಕ ಆ ದುರಂತವನ್ನು ತಪ್ಪಿಸಬಹುದು. ಜಾತ್ಯಾತೀತ ಜನತಾದಳವು ಕಾಂಗ್ರೆಸ್ಸಿನ ಜನವಿರೋಧಿ ನೀತಿಗಳನ್ನು ಮತ್ತು ಬಿಜೆಪಿಯ ಮತೀಯವಾದವನ್ನು ವಿರೋಧಿಸಲು ಬದ್ಧವಾಗಿರುವುದರಿಂದ ಸಿಪಿಐ(ಎಂ) ಕರ್ನಾಟಕದಲ್ಲಿ ಜಾತ್ಯಾತೀತ ಜನತಾದಳದೊಂದಿಗೆ ಸ್ಥಾನ ಹೊಂದಾಣಿಕೆ ಮಾಡಿಕೊಂಡಿದೆ. ಸಿಪಿಐ(ಎಂ) ತಾನು ಸ್ಪರ್ಧಿಸಿದ 5 ಸ್ಥಾನಗಳಲ್ಲಿ ಮತದಾರರ ಬೆಂಬಲವನ್ನು ಪಡೆಯಲು ಪ್ರಯತ್ನಿಸುತ್ತಿರುವಾಗಲೇ ಇತರ ಕ್ಷೇತ್ರಗಳಲ್ಲಿ ಜನತಾದಳ(ಎಸ್) ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುತ್ತದೆ.

ತೃತೀಯ ಶಕ್ತಿಯ ಸಾಧ್ಯತೆಗಳು

ಅಖಿಲ ಭಾರತ ಮಟ್ಟದಲ್ಲಿ ಹಿಂದೆ ಜನತೆಯ ಗಮನ ಸೆಳೆದ, ಅವರಲ್ಲಿ ಆಶಾಭಾವನೆಯನ್ನು ಚಿಗುರಿಸಿದ್ದ ತೃತೀಯ ಶಕ್ತಿಯು ಇಂದು ದುರ್ಬಲವಾಗಿದೆ. ಅದು ಹಾಗೆ ದುರ್ಬಲವಾಗಲು ಅದರ ಕೆಲವು ಜಾತ್ಯಾತೀತ ಒಲವಿನ ಘಟಕಪಕ್ಷಗಳ ಸಮಯಸಾಧಕತನ ಕಾರಣವಾಯಿತು. ಪ್ರಸಕ್ತ ಚುನಾವಣೆಯಲ್ಲಿ ಬಿಜೆಪಿ ಮತ್ತು ಅದರ ದುಷ್ಟ ಕೂಟದ ವಿರುದ್ಧದ ಮತಗಳು ಛಿದ್ರಗೊಳ್ಳದಂತೆ ನೋಡಿಕೊಂಡು ಕೇಂದ್ರದಲ್ಲಿ ಒಂದು ಜಾತ್ಯಾತೀತ ಸರ್ಕಾರ ಅಧಿಕಾರಕ್ಕೆ ಬರುವಂತೆ ಶ್ರಮಿಸುವುದೇ ತೃತೀಯ ಶಕ್ತಿಯ ಘಟಕ ಪಕ್ಷಗಳ ಪ್ರಧಾನ ಗುರಿ ಆಗಿರುತ್ತದೆ.


ಆದರೆ ಕರ್ನಾಟಕದಲ್ಲಿ ಜಾತ್ಯಾತೀತ ಜನತಾದಳದ ನೇತೃತ್ವದಲ್ಲಿ ರಾಜ್ಯದಲ್ಲಿ ಕಾಂಗ್ರೆಸೇತರ ಮತ್ತು ಬಿಜೆಪಿಯೇತರ ಸರ್ಕಾರವನ್ನು ಅಧಿಕಾರಕ್ಕೆ ತರುವ ಸಾಧ್ಯತೆ ಇದ್ದೇ ಇದೆ. ಜಾತ್ಯಾತೀತ ಜನತಾದಳವು ರಾಜ್ಯದ ಜನತೆಯ ಪ್ರಮುಖ ಪ್ರಶ್ನೆಗಳ ಬಗ್ಗೆ ಮತ್ತು ಮುಖ್ಯವಾಗಿ ಕೋಮುವಾದದ ವಿರುದ್ಧ ತೆಗೆದುಕೊಂಡಿರುವ ದೃಢವಾದ ನಿಲುಮೆ ರಾಜ್ಯದ ಜನತೆಯಲ್ಲಿ ಆಶಾವಾದವನ್ನು ಹುಟ್ಟಿಸಿದೆ. ಹಿಂದಿನ ಒಡಕುಗಳೆಲ್ಲಾ ಮಾಯವಾಗಿ ಜನತಾದಳ (ಜಾತ್ಯಾತೀತ) ಹೆಚ್ಚೆಚ್ಚು ಒಗ್ಗಟ್ಟಿನಿಂದ ಮುನ್ನಡೆಯುತ್ತಿರುವುದು ಜನತೆಯಲ್ಲಿ ಹೊಸ ಭರವಸೆಯನ್ನು ಮೂಡಿಸಿದೆ. ಸಿಪಿಐ(ಎಂ) ಜೊತೆಯಲ್ಲಿ ಜೆ.ಡಿ(ಎಸ್) ಸ್ಥಾನ ಹೊಂದಾಣಿಕೆ ಮಾಡಿಕೊಂಡದ್ದು ಅದಕ್ಕೆ ಹೆಚ್ಚಿನ ಬಲವನ್ನು ತಂದುಕೊಟ್ಟಿದೆ.

5 ಕ್ಷೇತ್ರಗಳಲ್ಲಿ ಸಿಪಿಐ(ಎಂ) ಸ್ಪರ್ಧೆ:

ಏಪ್ರಿಲ್ 20 ರಂದು ಮತದಾನ ನಡೆಯುವ ಕೋಲಾರದ ಬಾಗೇಪಲ್ಲಿಯಲ್ಲಿ ಕಾಮ್ರೇಡ್ ಜಿ.ವಿ.ಶ್ರೀರಾಮರೆಡ್ಡಿ ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ. ಅದರಂತೆಯೇ ಗುಲ್ಬರ್ಗಾ ಜಿಲ್ಲೆಯ ಕಮಲಾಪುರ ಮೀಸಲು ಕ್ಷೇತ್ರದಲ್ಲಿ ಪಕ್ಷವನ್ನು ಪ್ರತಿನಿಧಿಸಿ ಕಾಮ್ರೇಡ್ ಮಾರುತಿ ಮಾನ್ಪಡೆ ಸ್ಪರ್ಧಿಸುತ್ತಿದ್ದಾರೆ. (ಈ ಇಬ್ಬರು ಅಭ್ಯರ್ಥಿಗಳ ಪರಿಚಯವನ್ನು ಏಪ್ರಿಲ್ 11ರ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ) ಏಪ್ರಿಲ್ 26 ರಂದು ಮತದಾನ ನಡೆಯಲಿರುವ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಕ್ಷೇತ್ರದಲ್ಲಿ ಕಾಮ್ರೇಡ್ ರಾಮಚಂದ್ರ ಉಚ್ಚಿಲ್, ಉಡುಪಿ ಜಿಲ್ಲೆಯ ಕುಂದಾಪುರ ಕ್ಷೇತ್ರದಲ್ಲಿ ಕಾಮ್ರೇಡ್ ಕೆ.ಶಂಕರ್ (ವಿವರಗಳನ್ನು ಹಿಂದಿನ ಸಂಚಿಕೆಯಲ್ಲಿ ನೀಡಲಾಗಿದೆ) ಮತ್ತು ಬೆಳಗಾಂವಿ ಜಿಲ್ಲೆಯ ರಾಮದುರ್ಗ ಕ್ಷೇತ್ರದಲ್ಲಿ ಕಾಮ್ರೇಡ್ ವಿ.ಪಿ.ಕುಲಕರ್ಣಿ ಸ್ಪರ್ಧಿಸಿದ್ದಾರೆ.

ಕೇವಲ 5 ಜನ ಅಭ್ಯರ್ಥಿಗಳನ್ನು ಮಾತ್ರ ಸ್ಪರ್ಧೆಗಿಳಿಸಿರುವ ಸಿಪಿಐ(ಎಂ) ಏನನ್ನು ಸಾಧಿಸಲು ಹೊರಟಿದೆ ಎಂಬ ಪ್ರಶ್ನೆ ಮತದಾರರ ಮನಸ್ಸಿನಲ್ಲಿ ಮೂಡುವುದು ಸಹಜ. ಸಿಪಿಐ(ಎಂ) ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುತ್ತಿರುವುದು ರಾಜ್ಯದಲ್ಲಿ ಹೊಸದೇನಲ್ಲ. ಕಳೆದ ವಿಧಾನಸಭೆಯಲ್ಲಿ ಎಡಪಕ್ಷಗಳ ಒಬ್ಬ ಅಭ್ಯರ್ಥಿಯೂ ಇಲ್ಲದೆ ಹೋದದ್ದನ್ನು ರಾಜ್ಯದ ಪ್ರಜ್ಞಾವಂತರು ಗುರುತಿಸಿ ಮರುಗಿದ್ದಾರೆ. 1983 ರಲ್ಲಿ ಉಳ್ಳಾಲ ಕ್ಷೇತ್ರದಿಂದ ಆಯ್ಕೆಯಾದ ಕಾಂ.ಪಿ.ರಾಮಚಂದ್ರರಾವ್, ವರ್ತೂರ್ ಕ್ಷೇತ್ರದಿಂದ ಆಯ್ಕೆಯಾದ ಕಾಂ.ಎಸ್.ಸೂರ್ಯನಾರಾಯಣರಾವ್, ಕೆ.ಜಿ.ಎಫ್‌ನಿಂದ ಆಯ್ಕೆಯಾದ ಕಾಂ.ಟಿ.ಎಸ್.ಮಣಿ, ಬಾಗೇಪಲ್ಲಿ ಕ್ಷೇತ್ರದಿಂದ ಆಯ್ಕೆಯಾದ ಕಾಂ.ಎ.ವಿ.ಅಪ್ಪಾಸ್ವಾಮಿ ರೆಡ್ಡಿ, 1985 ರಲ್ಲಿ ಮುಳುಬಾಗಿಲು ಕ್ಷೇತ್ರದಿಂದ ಆಯ್ಕೆಯಾದ ಕಾಮ್ರೇಡ್ ಆರ್.ವೆಂಕಟರಾಮಯ್ಯ ಮತ್ತು ಕೆ.ಜಿ.ಎಫ್‌ನಿಂದ ಮರು ಆಯ್ಕೆಯಾದ ಕಾಂ.ಟಿ.ಎಸ್.ಮಣಿ ಅಲ್ಲದೆ 1994 ರಲ್ಲಿ ಬಾಗೇಪಲ್ಲಿ ಕ್ಷೇತ್ರದಿಂದ ಆಯ್ಕೆಯಾದ ಕಾಮ್ರೇಡ್ ಜಿ.ವಿ.ಶ್ರೀರಾಮರೆಡ್ಡಿ ಅವರ ಕೆಲಸ ರಾಜ್ಯ ವಿಧಾನಸಭಾದ ಚರಿತ್ರೆಯಲ್ಲೇ ಒಂದು ವಿಶಿಷ್ಟ ದಾಖಲೆ. ಕಮ್ಯೂನಿಸ್ಟರು ವಿಧಾನಸಭೆಗೆ ಆಯ್ಕೆಯಾದರೆ ರಾಜ್ಯದ ಜನತೆ, ಮುಖ್ಯವಾಗಿ ದುಡಿಯುವ ಜನತೆ ಅನುಭವಿಸುವ ಸಮಸ್ಯೆಗಳಿಗೆ ಅಲ್ಲಿ ನಡೆಯುವ ಚರ್ಚೆಗಳಲ್ಲಿ ಹೇಗೆ ಆದ್ಯತೆ ದೊರೆಯುತ್ತದೆ ಎಂಬುದನ್ನು ಇವರು ಶಾಸಕರಾಗಿದ್ದಾಗ ಕಾಣಲು ಸಾಧ್ಯವಾಗಿತ್ತು. ಆದರೆ ಕಳೆದ 12ನೇ ವಿಧಾನಸಭೆಯಲ್ಲಿ ಎಡಪಕ್ಷಗಳ ಒಬ್ಬ ಅಭ್ಯರ್ಥಿಯೂ ವಿಧಾನಸಭೆಗೆ ಹೋಗದಿದ್ದುದರಿಂದ ರೈತರು ಸಾಲದ ಬಾಧೆಗೆ ತುತ್ತಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಾಗ, ಬರಗಾಲಕ್ಕೆ ತುತ್ತಾಗಿ ಬಡ ಕೂಲಿಕಾರರು ಉಪವಾಸ ಸಾಯುತ್ತಿರುವಾಗ,

ನಿತ್ಯ


ಬಾಗೇಪಲ್ಲಿಯ ವಂಡಮಾನ ಅಣೆಕಟ್ಟು

ಸಿಪಿಐ(ಎಂ) ಮತ್ತು ಜನತಾದಳ(ಜಾ



(ಎಂ) ಆದ್ಯತೆಗಳು

ಬಡವರ ರೇಷನ್ ಕಾರ್ಡುಗಳನ್ನು ಕಿತ್ತುಕೊಳ್ಳುವ ಪ್ರಯತ್ನ ನಡೆದಾಗ ವಿದ್ಯುತ್ ರಂಗವನ್ನು ಖಾಸಗೀಕರಣಗೊಳಿಸಿ ದರಗಳನ್ನು ಸಿಕ್ಕಾಪಟ್ಟೆ ಏರಿಸುತ್ತಿರುವಾಗಲೂ, ದಲಿತರ ಮೇಲೆ, ಮಹಿಳೆಯರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಿದ್ದಾಗ, ಕಾವೇರಿ ನೀರಿನ ವಿವಾದ ಭಾಷಾಂಧತೆಯನ್ನು ಹಬ್ಬಿಸತೊಡಗಿದಾಗ ಕೋಮುವಾದಿಗಳು ಬಾಬಾಬುಡನ್‌ಗಿರಿ ಮತ್ತು ರಾಜ್ಯದ ಹಲವಾರು ಕಡೆ ಪ್ರಕ್ಷುಬ್ಧತೆ ಉಂಟುಮಾಡುತ್ತಿರುವಾಗ ರಾಜ್ಯದ ಜನತೆಯ ಹಿತವನ್ನು ಯಾವುದೇ ರಾಜಿ ಇಲ್ಲದೇ ಪ್ರತಿಪಾದಿಸುವ ಶಾಸಕರ ಕೊರತೆ ಎದ್ದುಕಾಣುತ್ತಿತ್ತು. ರಾಜ್ಯದ ಜನತೆ ತಮ್ಮ ಸಮಸ್ಯೆಗಳ ಇತ್ಯರ್ಥಕ್ಕಾಗಿ ಚಳುವಳಿಗಳನ್ನು ನಡೆಸುತ್ತಿರುವಾಗ ಆ ಚಳುವಳಿಗಳು ವಿಧಾನಸೌಧದ ಕಲ್ಲು ಕಟ್ಟಡದೊಳಗೆ ಪ್ರತಿಧ್ವನಿಸುವಂತಾಗಲು ಹೋರಾಟಗಾರರು ಚುನಾಯಿತರಾಗಿ ಒಳಗೆ ಹೋಗುವುದು ಅಗತ್ಯವಿದೆ. ಆ ದೃಷ್ಟಿಯಿಂದ ಈ ಸಲ ಕಣದಲ್ಲಿರುವ ಸಿಪಿಐ(ಎಂ) ಅಭ್ಯರ್ಥಿಗಳು ರೈತ ಕಾರ್ಮಿಕ ಚಳುವಳಿಗಳ ಮುಖಂಡರಾಗಿದ್ದು ಅವರ ಆಯ್ಕೆ 13ನೇ ವಿಧಾನಸಭೆಯ ಸ್ವರೂಪವನ್ನೇ ಬದಲಾಯಿಸುವುದು ಖಚಿತ.

ಸಿಪಿಐ(ಎಂ) ಭರವಸೆ

ಸಿಪಿಐ(ಎಂ) ಅಭ್ಯರ್ಥಿಗಳು ಆಯ್ಕೆಯಾದರೆ ಈ ಕೆಳಗಿನ ಪ್ರಮುಖ ಪ್ರಶ್ನೆಗಳಿಗಾಗಿ ಜನತೆಯ ಹೋರಾಟವನ್ನು ಮುನ್ನಡೆಸಿ ಯಶಸ್ವಿಗೊಳಿಸುವ ಭರವಸೆಯನ್ನು ನೀಡುತ್ತದೆ.

1. ಪ್ರಾದೇಶಿಕ ಅಸಮಾನತೆಯನ್ನು ತೊಡೆದುಹಾಕುವ ನೈಜ ಜನಾಭಿವೃದ್ಧಿ ಆಧಾರಿತ ಕ್ರಮಗಳು
2. ತೀವ್ರ ಭೂಸುಧಾರಣೆ, ಭೂಹೀನರಿಗೆ ಹೆಚ್ಚುವರಿ ಮತ್ತು ಸರ್ಕಾರಿ ಬಂಜರುಭೂಮಿ ವಿತರಣೆ.
3. ನನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದು ಬರಗಾಲ ಪೀಡಿತ ಜಿಲ್ಲೆಗಳಿಗೆ ಆದ್ಯತೆ.
4. ಕೃಷಿ ಕೂಲಿಕಾರರಿಗೆ ಸಾಮಾಜಿಕ ಸಂರಕ್ಷಣೆ ಒದಗಿಸುವ ಸಮಗ್ರವಾದ ರಾಜ್ಯಮಟ್ಟದ ಶಾಸನ, ಕೂಲಿಗಾಗಿ ಕಾಳು ಯೋಜನೆಯನ್ನು ಖಾಯಂ ಜಾರಿಗೊಳಿಸುವುದು.
5. ಬಡರೈತರ ಸಾಲ ಮನ್ನಾ, ಕೃಷಿ ಕ್ಷೇತ್ರಕ್ಕೆ ರಿಯಾಯ್ತಿ ಬಡ್ಡಿದರಗಳಲ್ಲಿ ಬ್ಯಾಂಕ್ ಸಾಲ, ಸಮಗ್ರ ಬೆಳೆ ವಿಮಾ ಯೋಜನೆ, ಎಲ್ಲಾ ಬೆಳೆಗಳಿಗೆ ಬೆಂಬಲ ಬೆಲೆ
6. ವಿದ್ಯುತ್ ರಂಗದ ಖಾಸಗೀಕರಣಕ್ಕೆ ತಡೆ ಮತ್ತು ಕೃಷಿ, ಸಣ್ಣ ಕೈಗಾರಿಕೆ ಹಾಗೂ ಗೃಹಬಳಕೆಗೆ ರಿಯಾಯ್ತಿ ದರಗಳಲ್ಲಿ ವಿದ್ಯುತ್ ಪೂರೈಕೆ.
7. ಎಲ್ಲರಿಗೂ ಪಡಿತರ ಕಾರ್ಡು ವಿತರಣೆ, ಎಲ್ಲ ಬಡವರಿಗೆ ಅಂತ್ಯೋದಯ ದರಗಳಲ್ಲಿ ಅಗತ್ಯ ವಸ್ತುಗಳ ಪೂರೈಕೆ.
8. ಮನೆ ಇಲ್ಲದ ಎಲ್ಲ ಕುಟುಂಬಗಳಿಗೆ ಹಿತ್ತಲು ಸಹಿತದ ಮನೆಗಳು, ಕೊಳಚೆ ನಿವಾಸಿಗಳ ಹಕ್ಕುಗಳಿಗೆ ರಕ್ಷಣೆ.
9. ಅರಣ್ಯಭೂಮಿ ಅತಿಕ್ರಮಣದಾರರ ಹಕ್ಕುಗಳಿಗೆ ರಕ್ಷಣೆ
10. ಶುದ್ಧ ಕುಡಿಯುವ ನೀರಿನ ಪೂರೈಕೆಗೆ ಆಧ್ಯತೆ-ಮುಖ್ಯವಾಗಿ ಫ್ಲೋರೈಡ್‌ಯುಕ್ತ ನೀರನ್ನು ಅವಲಂಭಿಸಿರುವ ಪ್ರದೇಶಗಳಿಗೆ ನಗರ ನೀರು ಪೂರೈಕೆ ಖಾಸಗೀಕರಣಕ್ಕೆ ತಡೆ.
11. ರಾಜ್ಯದ ಸಾರ್ವಜನಿಕ ಉದ್ದಿಮೆಗಳಿಗೆ ರಕ್ಷಣೆ, ಬೆಳವಣಿಗೆಗೆ ಪ್ರೋತ್ಸಾಹ
12. ಕಾರ್ಮಿಕರಿಗೆ ಉದ್ಯೋಗ ರಕ್ಷಣೆ - ಮನಸ್ಸಿಗೆ ಬಂದಂತೆ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡುವುದನ್ನು ವಿರೋಧಿಸುವುದು.
13. ಕಾರ್ಮಿಕರ ನ್ಯಾಯಬದ್ಧ ಹೋರಾಟಗಳಲ್ಲಿ ಪೊಲೀಸರ ಪ್ರವೇಶಕ್ಕೆ ತಡೆ. ಮುಷ್ಕರದ ಹಕ್ಕಿಗಾಗಿ ಹೋರಾಟ
14. ಮುಚ್ಚಿದ ಕಾರ್ಖಾನೆಗಳ ಕಾರ್ಮಿಕರ ಸಮಸ್ಯೆಗಳನ್ನು ಇತ್ಯರ್ಥಪಡಿಸುವುದು. ಖಾಸಗಿ ಹಾಗೂ ಸಾರ್ವಜನಿಕ ರಂಗದ ಉದ್ದಿಮೆಗಳ ಪುನಶ್ಚೇತನಕ್ಕೆ ನೆರವು, ಸಣ್ಣ ಉದ್ದಿಮೆಗಳಿಗೆ ಸಾಲ ಮತ್ತು ಮಾರುಕಟ್ಟೆಯ ನೆರವು
15. ಬೀಡಿ, ಹಂಚು, ಗೇರುಬೀಜ, ಕೈಮಗ್ಗ, ರೇಷ್ಮೆ ಹಮಾಲಿ, ಆಟೋಚಾಲಕರು ಮೊದಲಾದ ಸಂಘಟಿತ ವಲಯದ ಕಾರ್ಮಿಕರಿಗೆ ಸರಿಯಾಗಿ ಕೆಲಸ ಹಾಗೂ ಸಾಮಾಜಿಕ ಸಂರಕ್ಷಣೆಯ ಕಾನೂನು ಜಾರಿ
16. ಅನುದಾನರಹಿತ ಶಿಕ್ಷಣ ಸಂಸ್ಥೆಗಳ ನೌಕರರು, ಗ್ರಾಮಪಂಚಾಯತ್ ನೌಕರರು, ಅಂಗನವಾಡಿ ಕಾರ್ಯಕರ್ತೆಯರು, ಬಿಸಿಯೂಟದ ನೌಕರರು, ಸಾಕ್ಷರತಾ ಪ್ರೇರಕರು, ಅರಣ್ಯ ಇಲಾಖೆಯ ನೌಕರರು ಮೊದಲಾದವರ ಬಹುದಿನಗಳ ಸಮಸ್ಯೆಗಳನ್ನು ಇತ್ಯರ್ಥಪಡಿಸುವುದು.
17. ಕೃಪಾಂಕ ನೌಕರರ ಸಮಸ್ಯೆಗೆ ಶಾಶ್ವತ ಪರಿಹಾರ ಹಾಗೂ ಕೃಪಾಂಕ ಪದ್ಧತಿಯನ್ನು ಮುಂದುವರೆಸುವುದು
18. ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬುವುದು ನಿರುದ್ಯೋಗಿಗಳಿಗೆ ಮತ್ತು ಅಂಗವಿಕಲರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ನೆರವು.
19. ಗ್ರಾಮೀಣ ಯುವಕರಿಗೆ ಕ್ರೀಡೆ ಹಾಗೂ ಸಾಂಸ್ಕೃತಿಕ ಬೆಳವಣಿಗೆಗೆ ಪ್ರೋತ್ಸಾಹ
20. ರಾಜ್ಯ ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ ಶೇ.20 ರಷ್ಟು ಹಣ ಮೀಸಲಿಡುವುದು ಶಿಕ್ಷಣ ಶುಲ್ಕ ಕಡಿತ, ವಿದ್ಯಾರ್ಥಿ ನಿಲಯಗಳ ವಿಸ್ತರಣೆ, ಗ್ರಾಮೀಣ ಪ್ರದೇಶಗಳಲ್ಲಿ ವೃತ್ತಿಶಿಕ್ಷಣಕ್ಕೆ ಆಧ್ಯತೆ.
21. ಅಸ್ಪೃಶ್ಯತೆಯ ವಿರುದ್ಧ ಹಾಗೂ ದಲಿತರ ಮೇಲಿನ ದೌರ್ಜನ್ಯಗಳ ವಿರುದ್ಧ ದೃಢವಾದ ಹೋರಾಟ, ಮೀಸಲಾತಿ, ಕೋಟಾ ಭರ್ತಿ ಮಾಡುವುದು.
23. ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ಮಾಡುವವರಿಗೆ ಕಠಿಣ ಶಿಕ್ಷೆಗೆ ಒತ್ತಾಯ, ಅವರ ಆರ್ಥಿಕ ಸಾಮಾಜಿಕ ಹಿಂದುಳಿಯುವಿಕೆ ನಿವಾರಿಸಲು ಕ್ರಮ.
24. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಜಾಲವನ್ನು ವಿಸ್ತರಿಸಿ ಎಲ್ಲಾ ಮೂಲಭೂತ ಸೇವೆಗಳನ್ನು ಪೂರೈಸುವುದು. ಸಾರ್ವಜನಿಕ ಆರೋಗ್ಯ ಸೇವೆ ಖಾಸಗೀಕರಣವನ್ನು ತಡೆಯುವುದು, ಏಡ್ಸ್ ರೋಗಿಗಳಿಗೆ ಗೌರವಯುತ ಚಿಕಿತ್ಸೆ, ವೃದ್ಧರ, ಅಂಗವಿಕಲರ ಹಕ್ಕುಗಳಿಗೆ ರಕ್ಷಣೆ.
25. ಮತೀಯ ಭಾವನೆಗಳನ್ನು ಕೆರಳಿಸುವ ಶಕ್ತಿಗಳನ್ನು, ಸಂಘಟನೆಗಳನ್ನು ದೃಢವಾಗಿ ಹಿಮ್ಮೆಟ್ಟಿಸುವುದು.

ರಾಜ್ಯದ ವಿವಿಧ ಜನ ವಿಭಾಗಗಳ ಪ್ರಜಾಸತ್ತಾತ್ಮಕ ಹಕ್ಕುಗಳ ರಕ್ಷಣೆಗಾಗಿ, ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಹಾಗೂ ರಾಜ್ಯದಲ್ಲಿ ಕೋಮು ಸಾಮರಸ್ಯವನ್ನು ಕಾಪಾಡಿಕೊಂಡು ಹೋಗುವ ಹೋರಾಟವನ್ನು ಪರಿಣಾಮಕಾರಿಯಾಗಿ ಮುನ್ನಡೆಸಲು ಈ ಸಲ ಸಿಪಿಐ(ಎಂ) ಅಭ್ಯರ್ಥಿಗಳನ್ನು ಗೆಲ್ಲಿಸುವುದು ಅಗತ್ಯವಾಗಿದೆ. ○

ಸಿಪಿಐ(ಎಂ) ಅಖಿಲಭಾರತ ಮುಖಂಡರ ಚುನಾವಣಾ ಪ್ರಸಾರ ಭಾಷಣ

ಆಕಾಶವಾಣಿಯಲ್ಲಿ (ರೇಡಿಯೋ) ಚುನಾವಣಾ ಭಾಷಣ ಮಾಡಲಿರುವ ಸಿಪಿಐ(ಎಂ) ಮುಖಂಡರ ಹೆಸರು, ದಿನಾಂಕ ಮತ್ತು ವೇಳೆ ಈ ಕೆಳಗಿನಂತಿದೆ.

1. **ಕಾಂ.ಹರಕಿಶನ್‌ಸಿಂಗ್ ಸುರ್ಜಿತ್**
15-04-04 ರಾತ್ರಿ 9.40 ರಿಂದ 9.45
2. **ಕಾಂ.ಸೀತಾರಾಮ ಯೇಚೂರಿ**
16-04-04 ರಾತ್ರಿ 9.30 ರಿಂದ 9.40(ಹಿಂದಿ ಮತ್ತು ಇಂಗ್ಲಿಷ್)
3. **ಕಾಂ.ಮಾಣಿಕ್ ಸರ್ಕಾರ್**
17-04-04 ರಾತ್ರಿ 9.55 ರಿಂದ 10-00 (ಇಂಗ್ಲಿಷ್)
4. **ಕಾಂ.ಜೋಗೇಂದ್ರ ಶರ್ಮಾ**
23-04-04 ರಾತ್ರಿ 10.10 ರಿಂದ 10.15 (ಹಿಂದಿ)
5. **ಕಾಂ.ಬೃಂದಾಕಾರಟ್**
29-04-04 ರಾತ್ರಿ 9.40 ರಿಂದ 9.45(ಹಿಂದಿ)
6. **ಕಾಂ.ಜ್ಯೋತಿಬಸು**
30-04-04 ರಾತ್ರಿ10 ರಿಂದ 10.10(ಇಂಗ್ಲಿಷ್)
7. **ಕಾಂ.ಎಂ.ಕೆ.ಪಂಧೆ** 01.05.04
9.55 ರಿಂದ 10.00 (ಹಿಂದಿ)
8. **ಕಾಂ.ಬುದ್ಧದೇವ್ ಭಟ್ಟಾಚಾರ್ಯ**
06-05-04 9.55 ರಿಂದ 10-00 (ಇಂಗ್ಲಿಷ್)
9. **ಕಾಂ.ಪ್ರಕಾಶ್ ಕಾರಟ್** 07-05-04
ರಾತ್ರಿ 9.45 ರಿಂದ 9-55 (ಹಿಂದಿ ಮತ್ತು ಇಂಗ್ಲಿಷ್)

ಸಿಪಿಐ ಅಪಸ್ವರ

ಪ್ರಸಕ್ತ ಚುನಾವಣೆಯಲ್ಲಿ ಕಾಂಗ್ರೆಸು ಮತ್ತು ಬಿಜೆಪಿಯನ್ನು ವಿರೋಧಿಸುವ ಎಲ್ಲಾ ಪಕ್ಷಗಳು ಒಂದಾಗಿ ಮತದಾರರ ಮುಂದೆ ಹೋಗುವಂತಾಗಬೇಕೆಂದು ಸಿಪಿಐ(ಎಂ) ರಾಜ್ಯ ಮುಖಂಡತ್ವ ಆರಂಭದಿಂದಲೇ ತುಂಬಾ ಕಾಳಜಿ ವಹಿಸಿತ್ತು. ಉಭಯ ಕಮ್ಯೂನಿಸ್ಟ್ ಪಕ್ಷಗಳೊಂದಿಗೆ, ರೈತ ಸಂಘದ ಎರಡೂ ಗುಂಪುಗಳೊಂದಿಗೆ ಹಾಗೂ ದಲಿತ ಸಂಘರ್ಷ ಸಮಿತಿಯೊಂದಿಗೆ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲೇಬೇಕೆಂದು ಸಿಪಿಐ(ಎಂ) ಜನತಾದಳ(ಎಸ್) ಮುಖಂಡರನ್ನು ಒತ್ತಾಯಿಸುತ್ತಾ ಬಂದಿತ್ತು.

ಸಿಪಿಐ(ಎಂ) ರಾಜ್ಯದಲ್ಲಿ ಕೇವಲ 12 ಸ್ಥಾನಗಳನ್ನು ಬಿಟ್ಟುಕೊಡಬೇಕೆಂದು ಜನತಾದಳ(ಎಸ್)ವನ್ನು ಕೇಳಿಕೊಂಡಿತ್ತು. ರಾಜ್ಯದಲ್ಲಿ ಜನವಿರೋಧಿ ಕಾಂಗ್ರೆಸ್ ಮತ್ತು ಕೋಮುವಾದಿ ಬಿಜೆಪಿಯನ್ನು ಸೋಲಿಸುವುದೇ ಪ್ರಧಾನ ಕಾಳಜಿಯಾಗಿದ್ದುದರಿಂದ ಸಿಪಿಐ(ಎಂ) 8 ಸ್ಥಾನಗಳನ್ನು ತ್ಯಾಗ ಮಾಡಿ ಕೇವಲ 4 ಸ್ಥಾನಗಳಲ್ಲಿ ಮಾತ್ರ ಹೊಂದಾಣಿಕೆಗೆ ಒಪ್ಪಿಗೆ ನೀಡಿತ್ತು. ಎರಡು ಪಕ್ಷಗಳ ನಡುವೆ ಸ್ಥಾನ ಹೊಂದಾಣಿಕೆಯಾದ ನಂತರವೂ ಜೆ.ಡಿ(ಎಸ್) ತನ್ನ ತೀರ್ಮಾನಕ್ಕೆ ಬದ್ಧವಾಗಿ ಉಳಿಯಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಕ್ಷೇತ್ರವನ್ನು ಸಿಪಿಐ(ಎಂ)ಗೆ ಬಿಟ್ಟುಕೊಟ್ಟ ನಂತರವೂ ಜೆ.ಡಿ(ಎಸ್) ಅಲ್ಲಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿತು. ಆಗ ಸಿಪಿಐ(ಎಂ) ಅನಿವಾರ್ಯವಾಗಿ ಬೆಳಗಾಂವ ಜಿಲ್ಲೆಯ ರಾಮದುರ್ಗ ಕ್ಷೇತ್ರದಲ್ಲಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿದೆ. ಈಗ ಈ ಎರಡು ಕ್ಷೇತ್ರಗಳಲ್ಲಿ 'ಸ್ನೇಹದ ಸ್ಪರ್ಧೆ' ನಡೆಯುತ್ತಿದ್ದರೂ ರಾಜ್ಯದ ಬೇರೆ ಎಲ್ಲಾ ಕ್ಷೇತ್ರಗಳಲ್ಲಿ ಸಿಪಿಐ(ಎಂ) ಜನತಾದಳ(ಎಸ್)ನ್ನು ಬೆಂಬಲಿಸಿ ಕೆಲಸ ಮಾಡುತ್ತಿದೆ. ಜನತಾದಳ(ಎಸ್) ಸಹ ಈ ಎರಡು ಕ್ಷೇತ್ರಗಳನ್ನು ಹೊರತುಪಡಿಸಿ ಉಳಿದ 3 ಕ್ಷೇತ್ರಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡುತ್ತಿದೆ.

ಇದೇ ರೀತಿ ಸಿಪಿಐ ಜೊತೆಯಲ್ಲಿ ಜೆ.ಡಿ(ಎಸ್) ಸ್ಥಾನ ಹೊಂದಾಣಿಕೆ ಮಾಡಲು ವಿಫಲವಾಗಿರುವುದು ವಿಷಾದದ ಸಂಗತಿ. ಆದರೆ ಹೊಂದಾಣಿಕೆ ವಿಫಲಗೊಳ್ಳಲು ಸಿಪಿಐ(ಎಂ) ಪಕ್ಷದ ಸಮಯ ಸಾಧಕತನ ಕಾರಣ ಎಂದು ಸಿಪಿಐ ಆರೋಪ ಮಾಡಿದೆ, ಮಾತ್ರವಲ್ಲ ಕಾಂಗ್ರೆಸನ್ನು ಬೆಂಬಲಿಸುವ ನಿರ್ಧಾರ ಮಾಡಿದೆ. ಸಿಪಿಐ(ಎಂ) ಜನತಾದಳದೊಂದಿಗೆ ಹೊಂದಾಣಿಕೆ ಮಾಡಿಕೊಂಡು ಸಿಪಿಐಗೆ ಮೋಸ ಮಾಡಿದೆ ಎಂಬ ಸಿಪಿಐ ಆರೋಪ ಸತ್ಯಕ್ಕೆ ದೂರವಾದ ವಿಚಾರ. ಜನತಾದಳ(ಎಸ್) ಮತ್ತು ಸಿಪಿಐ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗದಿರುವುದು ಒಟ್ಟು ಚಳುವಳಿಗೆ ಧಕ್ಕೆ ತರುವ ವಿಚಾರವೇ ಆಗಿದೆ. ಆದರೆ ಈ ವೈಫಲ್ಯಕ್ಕೆ ಸಿಪಿಐ(ಎಂ) ಕಾರಣವೆಂದು ಗೂಬೆ ಕೂರಿಸಲು ಯತ್ನಿಸುವುದರಲ್ಲಿ ಏನೂ ಹುರುಳಿಲ್ಲ. ಜಾಗತೀಕರಣ ಮತ್ತು ಕೋಮುವಾದದ ವಿರುದ್ಧದ ಹೋರಾಟವನ್ನು ಮುನ್ನಡೆಸುವುದರ ಪ್ರಾಮುಖ್ಯತೆ ದೃಷ್ಟಿಯಿಂದ ಜನತಾದಳ(ಎಸ್) ಮತ್ತು ಸಿಪಿಐ ಎರಡೂ ಪಕ್ಷಗಳು ಕೊಡು-ತೆಗೆದುಕೊಳ್ಳುವ ವಿಧಾನದ ಮೂಲಕ ಹೊಂದಾಣಿಕೆ ಮಾಡಿಕೊಳ್ಳಲು ಯತ್ನಿಸಿದ್ದರೆ ಹೊಂದಾಣಿಕೆ ಸಾಧ್ಯವಾಗುತ್ತಿತ್ತು ಎಂದು ಸಿಪಿಐ(ಎಂ) ಭಾವಿಸುತ್ತದೆ.

...ೀತ) ಬೆಂಬಲಿಸಿ

ಬಿಜೆಪಿ ಸೋಲಿಸಲು ಸಾಹಿತಿ, ಕಲಾವಿದರು ಪಣ

ರಾಜ್ಯದಲ್ಲಿ ಬಿಜೆಪಿಯನ್ನು ಸೋಲಿಸುವ ಮಹತ್ವದ ಹೊಣೆಗಾರಿಕೆಯನ್ನು ಹೊತ್ತು ಏಪ್ರಿಲ್-14 ರ ಅಂಬೇಡ್ಕರ್ ಜಯಂತಿಯಂದು "ಕೋಮುವಾದದ ವಿರುದ್ಧ ಸಾಹಿತಿ- ಕಲಾವಿದರು ಮತ್ತು ನಾಗರೀಕರ ವೇದಿಕೆ' ಬೆಂಗಳೂರಿನಲ್ಲಿ ಉದ್ಘಾಟನೆಗೊಂಡಿತು.

ಏಪ್ರಿಲ್-14 ರ ಸಂಜೆ 5 ಗಂಟೆಗೆ ಬೆಂಗಳೂರಿನ ದಕ್ಷಿಣ ಲೋಕಸಭಾ ಕ್ಷೇತ್ರದ ಬಸವನಗುಡಿ (ಅನಂತಕುಮಾರ್ ಆಯ್ಕೆಯಾಗಿದ್ದ) ಯಿಂದ ಅಂದು ನೂರಾರು, ಕಲಾವಿದರು, ಪತ್ರಕರ್ತರು ಬರಹಗಾರರು, ವಿವಿಧ ಸಂಘಟನೆಗಳ ಮುಖಂಡರುಗಳು 'ಬಿಜೆಪಿ ಸೋಲಿಸಿ' ಅಭಿಯಾನದ 'ಪಾದಯಾತ್ರೆಯಲ್ಲಿ' ಪಾಲ್ಗೊಂಡರು. ನಂತರ ಕೋಹಿನೂರ್ ಮೈದಾನದಲ್ಲಿ ಸಭೆ ನಡೆದು "ಜಾತಿ ಬಿಡಿ ಮತ ಬಿಡಿ. ಮಾನವೀಯತೆಗೆ ಜೀವಕೊಡಿ, ಬಿಜೆಪಿ- ಸೋಲಿಸಿ" ಎನ್ನುವ ಘೋಷಣೆಯನ್ನು ನೀಡಿತು.

ಪಾದಯಾತ್ರೆ ಹಾಗೂ ಉದ್ಘಾಟನಾ ಸಮಾರಂಭದಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತ ಸಾಹಿತಿ ಡಾ.ಯು.ಆರ್.ಅನಂತಮೂರ್ತಿ, ಡಾ.ಚಂದ್ರಶೇಖರ್ ಕಂಬಾರ್, ನಿವೃತ್ತ ನ್ಯಾಯ ಮೂರ್ತಿಗಳಾದ ಹೆಚ್.ಜಿ.ಬಾಲಕೃಷ್ಣ, ಕೋ ಚನ್ನಬಸಪ್ಪ, ಡಾ.ಜಿ.ರಾಮೃಷ್ಣ, ಡಾ.ವಿಜಯ, ಡಾ.ಎನ್.ಗಾಯತ್ರಿ, ಶಾಸಕರಾದ ಡಾ.ಎಲ್.ಹನುಮಂತಯ್ಯ, ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಪ್ರೊ.ಜಿ.ಕೆ.ಗೋವಿಂದರಾವ್, ಡಾ. ಕೆ. ಮರುಳಸಿದ್ಧಪ್ಪ, ಗೌರಿ ಲಂಕೇಶ್, ಶೂದ್ರ ಶ್ರೀನಿವಾಸ್, ಆರ್.ಜಿ.ಹಳ್ಳಿ ನಾಗರಾಜ್, ಪತ್ರಕರ್ತರಾದ ಇಂದುಧರ ಹೊನ್ನಾಪುರ, ಪ್ರತಿಭಾ ನಂದಕುಮಾರ್, ಸಮುದಾಯದ ಶಶಿಧರ್ ಸೆಬಾಸ್ಟಿನ್‌ದೇವರಾಜ್, ರವೀಂದ್ರ, ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್.ವಿಮಲಾ, ಡಿವೈಎಫ್ಐ ನ ರಾಜ್ಯ ಕಾರ್ಯದರ್ಶಿ ಕೆ.ಮಹಾಂತೇಶ್, ಉಪಾಧ್ಯಕ್ಷರಾದ ಲಕ್ಷ್ಮಣ್‌ಕುಮಾರ್, ಧನರಾಜ್ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ, ಸೇರಿದಂತೆ ನೂರಾರು ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಆಶಯ ಭಾಷಣ ಮಾಡಿದ ಡಾ. ಯು.ಆರ್.ಅನಂತಮೂರ್ತಿಯವರು 'ಕರ್ನಾಟಕ ಮೊದಲಿನಿಂದಲೂ ಸೌಹಾರ್ದತೆಗೆ ಹೆಸರಾಗಿದೆ. ಇಲ್ಲಿ ಸಾವಿರಾರು ವರ್ಷಗಳ ಹಿಂದೆಯೇ ಬಂದು ಹೋದ ಆದಿಕವಿ 'ಮನುಜ ಕುಲಂ ತಾನೊಂದೆ ವಲಂ' ಎಂದ ಪಂಪ ನಮ್ಮೊಂದಿಗಿದ್ದಾರೆ. ಈಗ ಇಂತಹ ನೆಲದಲ್ಲಿ ಬಿಜೆಪಿ ಸಂಘಪರಿವಾರದ ದುಷ್ಟಶಕ್ತಿಗಳು ನೆಲೆಯೂರಲು ಪ್ರಯತ್ನಿಸುತ್ತಿದೆ. ಇದು ಕರ್ನಾಟಕದ ಧರ್ಮ ಮತ್ತು ಸಂಸ್ಕೃತಿಗೆ ಅಪಾಯಕಾರಿಯಾಗಿದೆ. ಕರ್ನಾಟಕವನ್ನು ಅಯೋಧ್ಯೆ ಮಾಡಹೊರಟಿರುವ ಬಿಜೆಪಿ ಅಧ್ಯಕ್ಷ ಅನಂತಕುಮಾರ್‌ನ್ನು ಸೋಲಿಸಬೇಕು. ಭ್ರಷ್ಟರನ್ನು ಜೈಲಿಗೆ ಅಟ್ಟಬಹುದು. ಆದರೆ ಮನಸ್ಸು ಭ್ರಷ್ಟಗೊಳಿಸ ಹೊರಟವರನ್ನು ಏನು ಮಾಡುವುದು? ಎಂದು ಪ್ರಶ್ನಿಸಿದ ಅವರು 'ಬಿಜೆಪಿ'ಯನ್ನು ಸೋಲಿಸುವುದು ನಮ್ಮ ಆದ್ಯತೆ ಎಂದರು.



ನ್ಯಾಯಮೂರ್ತಿ ಹೆಚ್.ಜಿ.ಬಾಲಕೃಷ್ಣ ಮಾತನಾಡಿ ಸಮಾಜದಲ್ಲಿ ಸ್ಥಾನ ಇಲ್ಲದವರು ರಾಜಕೀಯಕ್ಕೆ ಇಳಿದಿದ್ದಾರೆ. ಸಮಾಜವನ್ನು ಜಾತಿ ಹೆಸರಲ್ಲಿ ಒಡೆದ ಪುರೋಹಿತಶಾಹಿ ಮತ್ತೆ ಅಧಿಕಾರ ಹಿಡಿಯಲು ಹವಣಿಕೆಯಲ್ಲಿದೆ. ದೇಶದ ಹಿಂದುಳಿಯುವಿಕೆಗೆ ಇದೇ ಕಾರಣ.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ.ಚಂದ್ರಶೇಖರ ಕಂಬಾರ್ ಮಾತನಾಡುತ್ತಾ, ಸಾಹಿತಿಗಳು ಮತ ಚಲಾಯಿಸುವುದಿಲ್ಲ ಎನ್ನುವ ಆರೋಪವಿತ್ತು. ಈಗ ನಾವು ನಮ್ಮ ಧ್ಯೇಯಕ್ಕೆ ಬದ್ಧವಾಗಿದ್ದೇವೆ. ಹಿಂದೆ ದಯವೇ ಧರ್ಮದ ಮೂಲವಯ್ಯಾ ಎನ್ನುತ್ತಿದ್ದರು. ಈಗ ಅದು ಭಯವೇ ಧರ್ಮದ ಮೂಲವಾಗಿದೆ. ಈಗಂತೂ ದೇಶ ಪ್ರಕಾಶಿಸುತ್ತಿಲ್ಲ. ಇನ್ನಾದರೂ ಪ್ರಕಾಶಿಸಲಿ ಎಂದರು.

ಕೋ.ಚನ್ನಬಸಪ್ಪ, ಕೆ.ಎಸ್.ವಿಮಲಾ ಮಾತನಾಡಿದರು. ವೇದಿಕೆಯಲ್ಲಿ ಡಾ.ಜಿ.ಆರ್. ಡಾ. ವಿಜಯಮ್ಮ ಡಾ.ಎಲ್.ಹನುಮಂತಯ್ಯ ಮೊದಲಾದವರಿದ್ದರು.

ಧ್ವನಿಸುರುಳಿ : ಇದೇ ಸಂದರ್ಭದಲ್ಲಿ ದೇವನೂರು ಮಹಾದೇವ, ಪ್ರೊ.ಬರಗೂರು ರಾಮಚಂದ್ರಪ್ಪ, ಡಾ.ಎಲ್.ಹನುಮಂತಯ್ಯ, ಡಾ.ವಿಜಯ, ಡಾ.ಕೆ.ಮರುಳಸಿದ್ದಪ್ಪ, ಕೆ.ಎಸ್.ವಿಮಲ, ಡಾ.ಚಂದ್ರಶೇಖರ್ ಕಂಬಾರ, ಡಾ.ಯು.ಆರ್. ಅನಂತಮೂರ್ತಿ ಮುಂತಾದ ಚಿಂತಕರ ಚಿಂತನೆಯ ಧ್ವನಿಸುರುಳಿ "ನಿನ್ನ ಬಾಂದಳದಂತೆ ನನ್ನ ಮನವಿರಲಿ" ಎಂಬ ಧ್ವನಿಸುರುಳಿಯನ್ನು ನಿವೃತ್ತ ನ್ಯಾಯಮೂರ್ತಿ ಹೆಚ್.ಜಿ.ಬಾಲಕೃಷ್ಣ ಬಿಡುಗಡೆಗೊಳಿಸಿದರು.

ಇದಲ್ಲದೆ ರಾಜ್ಯದಲ್ಲಿ ಮೊದಲನೆ ಹಂತವಾಗಿ ಏಪ್ರಿಲ್ - 14 ರಿಂದ 18 ರವರೆಗೆ ಹಾಗೂ ಎರಡನೆ ಹಂತದಲ್ಲಿ ಏಪ್ರಿಲ್ 19 ರಿಂದ 24 ರವರೆಗೆ ಬೆಂಗಳೂರು, ತುಮಕೂರು, ಕೋಲಾರ, ಮಡಿಕೇರಿ, ಮೈಸೂರು, ಮಂಗಳೂರು, ಉಡುಪಿ, ಶಿವಮೊಗ್ಗ, ಕಾರವಾರ, ಚಿಕ್ಕಮಗಳೂರು, ಗುಲ್ಬರ್ಗಾ, ಧಾರವಾಡ ಮೊದಲಾದ ಕಡೆಗಳಲ್ಲಿ ವಿವಿಧ ಗಣ್ಯರ, ಸಾಹಿತಿಗಳ ಭಾಷಣಗಳನ್ನು ಮತ್ತು ಕಿರುಚಿತ್ರ ಪ್ರದರ್ಶನಗಳನ್ನು ಸಂಘಟಿಸಲು ನಿರ್ಧರಿಸಲಾಗಿದೆ.

ವರದಿ : **ಕೆ.ಮಹಾಂತೇಶ್**

ವೇದಿಕೆಯ ಪ್ರಣಾಳಿಕೆ

ದೇಶದ ಚುನಾವಣೆ ನಮ್ಮ ಕಣ್ಣೆದುರಿದೆ ಈ ಸಂದರ್ಭದಲ್ಲಿ ಮತದಾರರ ಹೊಣೆಗಾರಿ ಕುರಿತು ಚಿಂತಿಸಲು 'ಸಾಹಿತಿ, ಕಲಾವಿದರ ಮತ್ತು ನಾಗರಿಕರ ವೇದಿಕೆ' ಅಸ್ತಿತ್ವಕ್ಕೆ ಬಂದಿದೆ

ಕೋಮುವಾದವನ್ನು ಪ್ರತಿಪಾದಿಸುವ ಭಾರತೀಯ ಜನತಾಪಕ್ಷ, ಈ ಚಾರಿಯ ಚುನಾವಣೆಯಲ್ಲಿ, ಈ ನೆಲದಲ್ಲಿ ಬಲವಾಗಿ ನೆ ಊರದಂತೆ ನೋಡಿಕೊಳ್ಳುವುದು ನಮ ಕರ್ತವ್ಯ. ಭಾರತ ವಿಭಜನೆಯಾದದ್ದು ಕೋಮು ವಾದದಿಂದಲೇ. ಈ ನೆಲದಲ್ಲಿ ಹಿಂದೂ- ಮುಸ್ಲಿಮರ ರಕ್ತ ಹರಿದಿದ್ದು ಕೋಮುವಾದ ದಿಂದಲೇ. ಈಚೆಗೆ ಗುಜರಾತ್‌ನಲ್ಲಿ ನಡೆದ ಕೋಮುಗಲಭೆಯ ಅಟ್ಟಹಾಸ ನಮ್ಮೆಲ್ಲರನ್ನು ತಲೆತಗ್ಗಿಸುವಂತೆ ಮಾಡಿದೆ. ಇವೊತ್ತಿಗೂ ಪ್ರಸ್ತುತವಾಗಿ ಉಳಿದಿರುವುದು ಗಾಂಧೀಜಿ ನೆಹರೂ ಮತ್ತು ಠಾಗೋರ್‌ರ ರಾಷ್ಟ್ರೀಯ ಕಲ್ಪನೆ. ಈ ಕಲ್ಪನೆಯಲ್ಲಿ ಭಾರತವೊಂದು ದೊಡ್ಡ ನಾಗರಿಕತೆ. ಇಲ್ಲಿ ಎಲ್ಲ ಮತಗಳಿಗೂ, ಎಲ್ಲ ಸಂಸ್ಕೃತಿಗಳಿಗೂ, ಎಲ್ಲಾ ವಿಚಾರಗಳಿಗೂ ಸಮಾನ ಅವಕಾಶ, ಸಮಾನ ಗೌರವ ಇರತಕ್ಕದ್ದು. ಯುರೋಪಿನಂತೆ ಏಕ ಸಂಸ್ಕೃತಿಯಿಲ್ಲ. ಈಗಾಗಲೇ ಮಧ್ಯಪ್ರದೇಶದಲ್ಲಿ ಅಧಿಕಾರ ವಹಿಸಿಕೊಂಡಿರುವ ಬಿಜೆಪಿ ತನ್ನ ಅಲ್ಪಮತೀಯತೆಯನ್ನು ಪ್ರದರ್ಶಿಸಲು ಆರಂಭಿಸಿದೆ. ಹೀಗಾದರೆ ಭಾರತ ನುಚ್ಚುನೂರಾಗುತ್ತದೆ. ಇದನ್ನು ತಪ್ಪಿಸಲು ನಾವು ಔದಾರ್ಯ, ಪ್ರೀತಿ ಹಾಗೂ ಸಹನೆಯ ಆಧಾರದ ಮೇಲೆ ರಾಷ್ಟ್ರ ನಿರ್ಮಾಣ ಮಾಡಬೇಕು. ಸದ್ಯದಲ್ಲಿ ಜನತೆ ಬಯಸುವುದು ಆಹಾರ, ಉದ್ಯೋಗ, ಶಿಕ್ಷಣ ಮತ್ತು ಆರೋಗ್ಯ ಗ್ರಾಮಾಂತರ ಪ್ರದೇಶದಲ್ಲಿ ನೀರು, ರಸ್ತೆ ಮತ್ತು ವಿದ್ಯುಚ್ಛಕ್ತಿ. ಇವುಗಳ ಕುರಿತ ಮಾತನಾಡುವವರಿಗೆ ನಮ್ಮ ಬೆಂಬಲವಿರಬೇಕು. ಜಾಗತೀಕರಣದ ಫಲವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತನಿಗೆ ಧರ್ಮ ಕೋಮು ಇವುಗಳಿಂದ ಎಳ್ಳಷ್ಟೂ ಪ್ರಯೋಜನವಿಲ್ಲ. ಈ ಪ್ರಾಥಮಿಕ ಸತ್ಯ ಅರ್ಥವಾದ ಅಭ್ಯರ್ಥಿಗಳಿಗೆ ನಾವು ನಮ್ಮ ಸಂಪೂರ್ಣ ಬೆಂಬಲ ನೀಡಬೇಕು.

ಆದ್ದರಿಂದ ಮತದಾರರು ಜಾತ್ಯಾತೀತ ನೀತಿಗೆ ಬದ್ಧರಾದವರನ್ನು ಹಾಗೂ ಜನಹಿತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಆಶ್ವಾಸನೆ ನೀಡುವಂಥವರನ್ನು ಮಾತ್ರ ಈ ಚುನಾವಣೆಯಲ್ಲಿ ಆರಿಸಬೇಕೆಂದು ಕರ್ನಾಟಕದ ಸಾಹಿತಿ, ಕಲಾವಿದರು ಮತ್ತು ನಾಗರಿಕರಾದ ನಾವು ವಿನಂತಿಸುತ್ತೇವೆ.

ಸಿಪಿಐ(ಎಂ) ಅಭ್ಯರ್ಥಿಗಳನ್ನು ಏಕೆ ಗೆಲ್ಲಿಸಬೇಕು ?

ಪುಟ 3 ರಿಂದ

ಮಹಿಳೆಯರು : ಮಹಿಳೆಯರ ಮೇಲೆ ಧಾಳಿ ದಬ್ಬಾಳಿಕೆ ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಮಹಿಳೆಯರ ಹಕ್ಕುಗಳಿಗಾಗಿ ಸಿಪಿಐ(ಎಂ) ಹೋರಾಡುತ್ತದೆ. ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು ಮೀಸಲಾತಿ, ಕೌಟುಂಬಿಕ ಹಿಂಸೆ ಮಸೂದೆಗೆ ಮಹಿಳಾ ಸಂಘಟನೆಗಳು ಮಂಡಿಸಿರುವ ತಿದ್ದುಪಡಿಗಳಿಗೆ ಬೆಂಬಲ, ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ, ಗೃಹ ಆಧಾರಿತ ಕಾರ್ಮಿಕರು, ಮನೆಗೆಲಸದ ಕಾರ್ಮಿಕರೂ ಸೇರಿದಂತೆ ಅಸಂಘಟಿತ ವಲಯದ ಕಾರ್ಮಿಕರ ಹಿತರಕ್ಷಣೆಗೆ ಕಾನೂನು ರಚನೆ, ಸ್ವಸಹಾಯ ಗುಂಪುಗಳಿಗೆ ಹೆಚ್ಚಿನ ಆರ್ಥಿಕ ನೆರವು, ಹೆಣ್ಣು ಭ್ರೂಣ ಹತ್ಯೆ ವಿರುದ್ಧ ಕಠಿಣ ಕ್ರಮ, ವರದಕ್ಷಿಣೆ ಪದ್ಧತಿಯ ನಿರ್ಮೂಲನೆ, ಮದುವೆಗಳ ಕಡ್ಡಾಯ ನೊಂದಣಿ, ಅಶ್ಲೀಲ ಜಾಹೀರಾತುಗಳಿಗೆ ತಡೆ ಮೊದಲಾದ ಮಹಿಳೆಯರ ಹಕ್ಕೋತ್ತಾಯಗಳನ್ನು ಸಿಪಿಐ(ಎಂ) ಬೆಂಬಲಿಸುತ್ತದೆ.

ಮಕ್ಕಳು : ಬಾಲಕಾರ್ಮಿಕ ಪದ್ಧತಿ ನಿಷೇಧ, ಮಕ್ಕಳ ಹಕ್ಕುಗಳಿಗೆ ರಕ್ಷಣೆ, ಮಕ್ಕಳ ದುರ್ಬಳಕೆ ವಿರುದ್ಧ ಕಾನೂನು, 6 ವರ್ಷದವರೆಗಿನ ಎಲ್ಲಾ ಮಕ್ಕಳಿಗೂ ಅಂಗನವಾಡಿಗಳಲ್ಲಿ ದಾಖಲು ಮಾಡುವ ವ್ಯವಸ್ಥೆ ಮೊದಲಾದ ಮಕ್ಕಳ ಹಕ್ಕುಗಳಿಗಾಗಿ ಸಿಪಿಐ(ಎಂ) ಬದ್ಧವಾಗಿದೆ.

ದಲಿತರು: ಅಸ್ಪೃಷ್ಯತೆ ಮತ್ತು ದಲಿತರ ಮೇಲೆ ದೌರ್ಜನ್ಯ ನಡೆಸುವವರ ವಿರುದ್ಧ ಕಠಿಣ ಕ್ರಮ, ಮೀಸಲಾತಿ ಕೋಟಾ ಭರ್ತಿ ಮಾಡಲು ಕ್ರಮ, ಖಾಸಗೀಕರಣಗೊಂಡ ಘಟಕಗಳಲ್ಲಿ ಮೀಸಲಾತಿ ಮುಂದುವರೆಸುವುದು, ಇತರ ಹಿಂದುಳಿದ ಜಾತಿಗಳ ಮೀಸಲಾತಿಗೆ ರಕ್ಷಣೆ ಮತ್ತು ದಲಿತ ಕ್ರಿಶ್ಚಿಯನ್ನರಿಗೂ ಮೀಸಲಾತಿ ವಿಸ್ತರಿಸಲು ಸಿಪಿಐ(ಎಂ) ಹೋರಾಡುತ್ತದೆ.

ಆದಿವಾಸಿಗಳ ಭೂಮಿಯ ಹಕ್ಕಿನ ರಕ್ಷಣೆ, ಅರಣ್ಯ ಮತ್ತು ಅರಣ್ಯ ಉತ್ಪನ್ನಗಳ ಮೇಲೆ ಅವರ ಹಕ್ಕುಗಳಿಗೆ ರಕ್ಷಣೆ, ಬುಡಕಟ್ಟು ಜನರೇ ಅಧಿಕ ಸಂಖ್ಯೆಯಲ್ಲಿ ವಾಸವಿರುವ ಪ್ರದೇಶಳಿಗೆ ಪ್ರಾದೇಶಿಕ ಸ್ವಾಯತ್ತತೆ ನೀಡಲು ಸಿಪಿಐ(ಎಂ) ಒತ್ತಾಯಿಸುತ್ತದೆ.

ಅಲ್ಪಸಂಖ್ಯಾತರು : ಮುಸ್ಲಿಂ ಮತ್ತು ಇತರ ಧಾರ್ಮಿಕ ಅಲ್ಪಸಂಖ್ಯಾತರ ಎಲ್ಲಾ ನ್ಯಾಯಬದ್ಧ ಹಕ್ಕುಗಳ ರಕ್ಷಣೆ, ತಾರತಮ್ಯ ತೊಡೆದುಹಾಕಲು ಶಾಸನಾತ್ಮಕ ಕ್ರಮ, ಶಿಕ್ಷಣದ ಸೌಲಭ್ಯ ವಿಸ್ತರಣೆಗೆ ವಿಶೇಷ ಯೋಜನೆ, ಉದ್ಯೋಗದಲ್ಲಿ ಸಮಾನ ಅವಕಾಶ ನೀಡಿಕೆ, ಉರ್ದು ಭಾಷೆಗೆ ಪ್ರೋತ್ಸಾಹ ಇತ್ಯಾದಿ ಹಕ್ಕುಗಳಿಗಾಗಿ ಸಿಪಿಐ(ಎಂ) ಹೋರಾಡುತ್ತದೆ.

ಅಂಗವಿಕಲರು ಮತ್ತು ವೃದ್ಧರು : ಅಂಗವಿಕಲರು ಇತರ ನಾಗರಿಕರೊಂದಿಗೆ ಸಮಾನ ಗೌರವದಿಂದ ಬಾಳಲು ಇರುವ ಹಕ್ಕುಗಳಿಗೆ ರಕ್ಷಣೆ, ವೃದ್ಧರಿಗೆ ಸರ್ಕಾರಿ ವೃದ್ಧಾಶ್ರಮಗಳ ಹಾಗೂ ಹಗಲು ಪಾಲಿಕಾ ಕೇಂದ್ರಗಳ ಸ್ಥಾಪನೆ, ನಿವೃತ್ತಿ ಹೊಂದಿದವರಿಗೆ ಬೆಲೆ ಸೂಚ್ಯಾಂಕಕ್ಕೆ ಲಗತ್ತಿಸಿದ ನಿವೃತ್ತಿ ವೇತನ ನೀಡಿಕೆ, ಮಾಜಿ ಸೈನಿಕರ ಹಕ್ಕುಗಳ ರಕ್ಷಣೆಗಾಗಿ ಸಿಪಿಐ(ಎಂ) ಒತ್ತಾಯಿಸುತ್ತದೆ.

ಸಾರ್ವಜನಿಕ ವಿತರಣಾ ವ್ಯವಸ್ಥೆ : ಆಹಾರದ ಸುಭದ್ರತೆ ಸರ್ಕಾರದ ಅತ್ಯಂತ ಪ್ರಮುಖ ಜವಾಬ್ದಾರಿಯಾಗಿರಬೇಕು ಎಂದು ಸಿಪಿಐ(ಎಂ) ಪ್ರತಿಪಾದಿಸುತ್ತದೆ. ಸಾರ್ವಜನಿಕ ವಿತರಣಾ (ರೇಷನ್) ವ್ಯವಸ್ತೆಯನ್ನು ಸಾರ್ವತ್ರಿಕಗೊಳಿಸಬೇಕು, ಅಲ್ಲಿಯವರೆಗೆ ಎಲ್ಲಾ ಬಡವರಿಗೆ ಅಂತ್ಯೋದಯ ಯೋಜನೆಯನ್ನು ವಿಸ್ತರಿಸಬೇಕು, ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಡಿಯಲ್ಲಿ ಎಲ್ಲಾ ಜೀವನಾವಶ್ಯಕ ವಸ್ತುಗಳನ್ನು ವಿತರಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ಶಿಕ್ಷಣ : 14 ವರ್ಷದ ವರೆಗಿನ ಮಕ್ಕಳ ಶಿಕ್ಷಣವನ್ನು ಮೂಲಭೂತ ಹಕ್ಕೆಂದು ಘೋಷಿ ಜಾರಿಗೊಳಿಸಬೇಕು. ಉಚಿತ ಮತ್ತು ಕಡ್ಡಾಯ ಶಿಕ್ಷಣ ಜಾರಿಯಾಗುವಂತೆ ಮಾಡಲು ಉಚಿ ಮಧ್ಯಾಹ್ನ ಊಟ, ಪಠ್ಯಪುಸ್ತಕ, ಸಮವಸ್ತ್ರ ಪೂರೈ ಮಾಡಬೇಕು, ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗ ಭರ್ತಿ ಮತ್ತು ಅವರ ವೇತನಗಳನ್ನು ಏರಿಸಬೇಕು ಪ್ರಾಥಮಿಕ ಶಾಲೆಗಳಿಗೆ ಮೂಲಭೂ ಸೌಕರ್ಯಗಳು, ಖಾಸಗಿ ಶಿಕ್ಷಣ ಸಂಸ್ಥೆಗಳ ಮೇ ರಾಜ್ಯ ಸರ್ಕಾರಗಳ ನಿಯಂತ್ರಣ, ಪಠ್ಯಕ್ರಮ ಮ ಪಠ್ಯಪುಸ್ತಕಗಳಲ್ಲಿ ಜಾತ್ಯತೀತತೆ ಮತ್ತು ವೈಜ್ಞಾನಿ ಮನೋಭಾವದ ಬೋಧನೆ, ಕೇಂದ್ರ ಬಜೆಟ್‌ನ ಶೇಕಡ 10ನ್ನು ಶಿಕ್ಷಣಕ್ಕೆ ಮೀಸಲಿಡುವುದು, ಉನ್ನ ಶಿಕ್ಷಣ ವ್ಯವಸ್ಥೆಯನ್ನು ಪ್ರಜಾಪ್ರಭುತ್ವೀಕರ ಗೊಳಿಸಬೇಕು ಮತ್ತು ವೃತ್ತಿ ಶಿಕ್ಷಣವನ್ನು ಅಭಿವೃ ಪಡಿಸಬೇಕು, ಮೊದಲಾದವು ಗಳಿಗಾ ಸಿಪಿಐ(ಎಂ) ಹೋರಾಡುತ್ತದೆ.

ಆರೋಗ್ಯ : ಸಾರ್ವಜನಿಕ ಆರೋ ಅವ್ಯವಸ್ಥೆಗೊಂಡಿದ್ದು ಆರೋಗ್ಯ ಸೇವೆ



ಕಟುಕ ಹೃದಯಿ ವಾಜಪೇಯಿ

ನಾಲ್ಕು ಕಾಸಿನ ಸೀರೆಗಳನ್ನು ಬಿಸಾಡಿ ಓಟುಗಳನ್ನು ಕಿತ್ತುಕೊಳ್ಳಲು ವಾಜಪೇಯಿ ಬಂಟರು ಹೂಡಿದ ತಂತ್ರ 22 ಅಮಾಯಕರ ಅಮೂಲ್ಯ ಜೀವಗಳನ್ನು ಬಲಿತೆಗೆದುಕೊಂಡಿದೆ. ಇದು ಯಾರೂ ಹೊಣೆಗಾರರಲ್ಲದ ಸಾಮಾನ್ಯ ದುರ್ಘಟನೆ, ಸತ್ತವರ ಸಂಬಂಧಿಕರಿಗೆ ಪರಿಹಾರ ಹಣ ನೀಡಿ ಮುಗಿಸಿಬಿಡುವುದನ್ನು ಬಿಟ್ಟು ಬೇರೇನೂ ಮಾಡಲು ಸಾಧ್ಯವಿಲ್ಲ ಎನ್ನುತ್ತಾರೆ ಪ್ರಧಾನಿ ವಾಜಪೇಯಿ. ನೀವೇನನ್ನುತ್ತೀರಿ?



'ಲಾಲ್‌ಜಿ ಟಂಡನ್ ತನ್ನ ಹುಟ್ಟುಹಬ್ಬದ ಸಂದರ್ಭದಲ್ಲಿ ಮಹಿಳೆಯರಿಗೆ ಸೀರೆ ಹಂಚಿರುವುದು ತಪ್ಪು ಎಂದು ನಾನು ಭಾವಿಸಲಾರೆ' ಎಂದು ತಮ್ಮ ಮತಕ್ಷೇತ್ರವಾದ ಲಖನೌದಲ್ಲಿ ಮಹಿಳೆಯರಿಗೆ ಸೀರೆ ಹಂಚಿರುವುದನ್ನು ಅಟಲ್ ಬಿಹಾರಿ ವಾಜಪೇಯಿ ಸಮರ್ಥಿಸಿಕೊಂಡಿದ್ದಾರೆ. 21 ಮಹಿಳೆಯರ ಮತ್ತು ಒಂದು ಮಗುವಿನ ಜೀವವನ್ನು ಬಲಿತೆಗೆದುಕೊಂಡ ಈ ಘಟನೆಯಿಂದ ವಾಜಪೇಯಿ ಸ್ವಲ್ಪವೂ ವಿಚಲಿತರಾಗಿಲ್ಲ. ಈ ಘಟನೆಯಿಂದ ತಮ್ಮ ವರ್ಚಸ್ಸಿಗೆ ಏನೂ ಧಕ್ಕೆ ಉಂಟಾಗುವುದಿಲ್ಲ ಎಂದು ಹೇಳಿದ್ದಾರೆ. ಮಹಿಳೆಯರು ಕಾಲ್ತುಳಿತಕ್ಕೆ ಸಿಕ್ಕಿ ಸಾವನ್ನಪ್ಪಿರುವುದು ದುರದೃಷ್ಟಕರ ಎಂದಷ್ಟೇ ಬಣ್ಣಿಸಿದ ಅವರು ಯಥಾ ಪ್ರಕಾರ ತಮ್ಮ ಚುನಾವಣಾ ಪ್ರಚಾರ ಕಾರ್ಯದಲ್ಲಿ ಉತ್ಸಾಹದಿಂದಲೇ ಭಾಗವಹಿಸಿದ್ದಾರೆ.

ಏಪ್ರಿಲ್ 12 ರಂದು ಬಿಜೆಪಿಯ ಹಿರಿಯ ನಾಯಕ ಹಾಗೂ ವಾಜಪೇಯಿ ಅವರ ಚುನಾವಣಾ ಪ್ರಚಾರದ ಉಸ್ತುವಾರಿ ವಹಿಸಿಕೊಂಡಿರುವ ಲಾಲ್‌ಜಿ ಟಂಡನ್ ಅವರು ತಮ್ಮ 70 ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಮಹಿಳೆಯರಿಗೆ ಸೀರೆ ವಿತರಣೆಯ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. 15 ಸಾವಿರಕ್ಕೂ ಹೆಚ್ಚು ಮಹಿಳೆಯರು ಮತ್ತು ಮಕ್ಕಳು ಸೇರಿದ್ದರು. ಸೀರೆ ವಿತರಿಸುತ್ತಿದ್ದವರು ಸೀರೆಗಳನ್ನು ಮಹಿಳೆಯರ ನಡುವೆ ಎಸೆದಾಗ ನೂಕುನುಗ್ಗಲು ಉಂಟಾಗಿ ಈ ದುರಂತ ಸಂಭವಿಸಿತು ಎನ್ನಲಾಗಿದೆ.

ಘಟನೆ ಗಂಭೀರತೆಯನ್ನು ಕೂಡಲೇ ಅರ್ಥ ಮಾಡಿಕೊಂಡ ಬಿಜೆಪಿ ನಾಯಕತ್ವ ಅಂದಿನ ಸಮಾರಂಭ ತಮ್ಮ ಕಾರ್ಯಕ್ರಮವೇ ಆಗಿರಲಿಲ್ಲ ಎಂದು ಹೇಳಿ ಕೈತೊಳೆದುಕೊಳ್ಳುವ ಪ್ರಯತ್ನ ಮಾಡಿತು. ಬಿಜೆಪಿ ವಕ್ತಾರ ಮುಕ್ತಾರ್ ಅಬ್ಬಾಸ್ ನಕ್ವಿ ಆ ಸಮಾರಂಭಕ್ಕೂ ನಮಗೂ ಏನೂ ಸಂಬಂಧವಿಲ್ಲ ಎಂದು ಹೇಳಿದ್ದಾರೆ. ಬಿಜೆಪಿ ರಾಷ್ಟ್ರೀಯ ಘಟಕದ ಅಧ್ಯಕ್ಷ ವೆಂಕಯ್ಯ ನಾಯ್ಡು' ಆದೊಂದು ಖಾಸಗೀ ಸಮಾರಂಭ. ಅದನ್ನು ರಾಜಕೀಯಗೊಳಿಸುವುದು ಸಲ್ಲ' ಎಂದಿದ್ದಾರೆ. ಸಂಘಟಕರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೇ ಎಂದು ಕೇಳಲಾದ ಪ್ರಶ್ನೆಗೆ ಅದರ ಅಗತ್ಯವಿಲ್ಲ' ಎಂದು ನಾಯ್ಡು ಉತ್ತರಿಸಿದ್ದಾರೆ. 'ಸೀರೆ ವಿತರಣೆ ಚುನಾವಣೆ ನೀತಿ ಸಂಹಿತೆಯ ಉಲ್ಲಂಘನೆಯಲ್ಲವೆ? ಎಂದು ಎಲ್.ಕೆ.ಅಡ್ವಾಣಿಯವರಿಗೆ ಕೇಳಲಾದ ಪ್ರಶ್ನೆಗೆ 'ನಾಮಪತ್ರ ಸಲ್ಲಿಕೆಯ ಪ್ರಕ್ರಿಯೆಯೇ ಇನ್ನೂ ಆರಂಭವಾಗಿಲ್ಲ. ನೀತಿ ಸಂಹಿತೆಯ ಉಲ್ಲಂಘನೆ ಹೇಗಾಗುತ್ತದೆ' ಎಂದಿದ್ದಾರೆ. ಈ ಘಟನೆಯಿಂದಾಗಿ ಬಿಜೆಪಿಯನ್ನು ಬೆತ್ತಲೆ ಮಾಡಿ ನಡುಬೀದಿಯಲ್ಲಿ ನಿಲ್ಲಿಸಿದಂತಾಗಿದ್ದರೂ ಬಿಜೆಪಿಯ ನಾಯಕರು ಇಡೀ ಪ್ರಕರಣವನ್ನೇ ಮುಚ್ಚಿಹಾಕಲು ಪ್ರಯತ್ನಿಸುತ್ತಿದ್ದಾರೆ. ಇದೇ ಘಟನೆ ಯಾವುದಾದರೂ ವಿರೋಧ ಪಕ್ಷದವರಿಂದ ನಡೆದಿದ್ದರೆ ಬಿಜೆಪಿಯವರು ಇಡೀ ದೇಶದಲ್ಲಿ ಅಲ್ಲೋಲಕಲ್ಲೋಲ ಮಾಡುತ್ತಿದ್ದರು. ಬಿಜೆಪಿಯ ಮಹಿಳಾ ನಾಯಕಿಯರಾದ ಸುಷ್ಮಾ ಸ್ವರಾಜ್, ಉಮಾಭಾರತಿ, ವಸುಂಧರರಾಜೇ ಸಿಂಧಿಯಾ ಮೊದಲಾದವರು ಬಾಯಿಗೆ ಬೀಗ ಹಾಕಿಕೊಂಡು ಕುಳಿತಿದ್ದಾರೆ!

ಉಗ್ರ ಶಿಕ್ಷೆಗೆ ಪ್ರತಿಪಕ್ಷ ಆಗ್ರಹ:

'ಪ್ರಧಾನ ಮಂತ್ರಿ ವಾಜಪೇಯಿ ಅವರ ಕ್ಷೇತ್ರದಲ್ಲಿ ಇಂತಹ ಘಟನೆ ನಡೆದಿದೆ. ಬಿಜೆಪಿ ಮುಖಂಡ ಲಾಲ್‌ಜಿ ಟಂಡನ್ ಅವರ ಹುಟ್ಟುಹಬ್ಬದ ಸಡಗರಕ್ಕೆ ಅಮಾಯಕ ಮಹಿಳೆಯರು ತಮ್ಮ ಅಮೂಲ್ಯವಾದ ಪ್ರಾಣ ಕಳೆದುಕೊಂಡಿದ್ದಾರೆ. ಈ ಕಾರ್ಯಕ್ರಮವೇ ನಾಚಿಕೆ ಗೇಡಿನದು. ಚುನಾವಣಾ ನೀತಿ ಸಂಹಿತೆಯನ್ನು ರಾಜಾರೋಷವಾಗಿ ಉಲ್ಲಂಘಿಸಲಾಗಿದೆ. ಸಮಾರಂಭ ಸಂಘಟಿಸಿದ ಲಾಲ್‌ಜಿ ಟಂಡನ್‌ಗೆ ಉಗ್ರ ಶಿಕ್ಷೆಯಾಗಬೇಕು ಎಂದು ಕಾಂಗ್ರೆಸ್, ಆರ್‌ಜೆಡಿ, ಸಿಪಿಐ(ಎಂ) ನೇತೃತ್ವದ ನಿಯೋಗ ಚುನಾವಣಾ ಆಯೋಗವನ್ನು ಭೇಟಿ ಮಾಡಿ ಒತ್ತಾಯಿಸಿದೆ.

ಮಹಿಳಾ ಸಂಘಟನೆಗಳು ಘಟನೆಯ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿವೆ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಲಖನೌ ವಿಧಾನಸೌಧದ ಎದುರು ಪ್ರತಿಭಟನೆ ಏರ್ಪಡಿಸಿ ಮಹಿಳೆಯರ ಸಾವಿಗೆ ಕಾರಣನಾದ ಲಾಲ್‌ಜಿ ಟಂಡನ್‌ನ ಬಂಧನವೂ ಸೇರಿದಂತೆ ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿದ ಬಿಜೆಪಿ ವಿರುದ್ಧ ಕ್ರಮ ಜರುಗಿಸುವಂತೆ ಚುನಾವಣಾ ಆಯೋಗವನ್ನು ಒತ್ತಾಯಿಸಿತು. ಹುಟ್ಟುಹಬ್ಬದ ನೆಪದಲ್ಲಿ ಸೀರೆಯನ್ನು ಭಕ್ಷೀಸಾಗಿ ನೀಡುವುದು ಬಿಜೆಪಿಗೆ ಮಹಿಳೆಯರ ಬಗ್ಗೆ ಇರುವ ಅಗೌರವದ ದ್ಯೋತಕವಾಗಿದೆ. ಮಹಿಳೆಯರನ್ನು ಎರಡನೇ ದರ್ಜೆ ಪ್ರಜೆಯಾಗಿ ನಡೆಸಿಕೊಂಡ ಕ್ರಮ ಇದಾಗಿದೆ ಎಂದು ಹೇಳಿರುವ ಎಐಡಿಡಬ್ಲುಎ ಉಚಿತ ಸೀರೆಯೊಂದಕ್ಕೆ ಮುಗಿಬೀಳುವಂತಹ ದಟ್ಟ ದಾರಿದ್ರ್ಯ ವಾಜಪೇಯಿ ಕ್ಷೇತ್ರದಲ್ಲೇ ಇರುವಾಗ 'ಭಾರತ ಪ್ರಕಾಶಿಸುತ್ತದೆ' ಎಂಬ ಬಿಜೆಪಿಯ ಪ್ರಚಾರದ ಹಿಂದಿರುವ ಕ್ರೂರ ಕಪಟತನ ಬಯಲಾಗಿದೆ ಎಂದಿದೆ.



ಚುನಾವಣಾ ಆಯೋಗದ ಕ್ರಮ: ಕಾಲ್ತುಳಿತ ದುರಂತಕ್ಕೆ ಕಾರಣವಾದ ಸೀರೆ ವಿತರಣೆ ಮಾದರಿ ನೀತಿ ಸಂಹಿತೆಯ ಉಲ್ಲಂಘನೆಯೆಂದು ಮೇಲ್ನೋಟಕ್ಕೆ ಕಂಡು ಬಂದಿದೆಯೆಂದು ಚುನಾವಣಾ ಆಯೋಗ ಅಭಿಪ್ರಾಯಪಟ್ಟಿದೆ. ಲಾಲ್‌ಜಿ ಟಂಡನ್ ವಿರುದ್ಧ ಲಂಚದ ಪ್ರಕರಣ ದಾಖಲಿಸುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ಆದೇಶ ನೀಡಿರುವ ಆಯೋಗ ಬಿಜೆಪಿ ಕೇಂದ್ರ ನಾಯಕತ್ವಕ್ಕೆ ವಿವರಣೆ ಕೇಳಿ ನೋಟಿಸ್ ಜಾರಿ ಮಾಡಿದೆ. ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯ ವರ್ಗಾವಣೆಗೂ ಆಯೋಗ ಆದೇಶಿಸಿದೆ. ಘಟನೆಯ ಕುರಿತು ಉತ್ತರ ಪ್ರದೇಶ ಮುಖ್ಯ ಕಾರ್ಯದರ್ಶಿ ಹಾಗೂ ಮುಖ್ಯ ಚುನಾವಣಾಧಿಕಾರಿಯವರಿಂದ ವರದಿಗಳನ್ನು ಪಡೆದು ಚುನಾವಣಾ ಆಯೋಗ ಈ ಕ್ರಮ ಕೈಗೊಂಡಿದೆ. ಘಟನೆಯಿಂದ ನೀತಿ ಸಂಹಿತ ಉಲ್ಲಂಘನೆಯಾಗಿಲ್ಲ ಎಂದು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಬಿಜೆಪಿ ಪಾಲಿಗೆ ದೊಡ್ಡ ಹಿನ್ನಡೆಯೊಂದು ಉಂಟಾಗಿದೆ.

ಚುನಾವಣೆಗಳಲ್ಲಿ ಗೆಲ್ಲಲು ಬಿಜೆಪಿ ಅನುಸರಿಸುತ್ತಿರುವ ಕುತಂತ್ರಗಳು ಒಂದೊಂದಾಗಿ ಬಯಲಿಗೆ ಬರುತ್ತಿವೆ. ಚುನಾವಣೆ ಘೋಷಣೆಯಾದ ನಂತರ 15 ಸಾವಿರದಷ್ಟು ಮಹಿಳೆಯರನ್ನು ಒಂದು ಕಡೆ ಸೇರಿಸಿ, ಅವರಿಗೆ ಸೀರೆಗಳನ್ನು ವಿತರಣೆ ಮಾಡುವ ಕಾರ್ಯಕ್ರಮದ ಹಿಂದಿರುವ ಉದ್ದೇಶ ಮಹಿಳಾ ಮತದಾರರಿಗೆ ಆಮಿಷ ಒಡ್ಡುವುದಲ್ಲದೆ ಬೇರೇನೂ ಅಲ್ಲ. ಬಡತನವನ್ನು ನಿವಾರಿಸಲು ನೈಜ ಕ್ರಮಗಳನ್ನು ಅನುಸರಿಸದವರು ಜನರ ಬಡತನವನ್ನೇ ಬಂಡವಾಳ ಮಾಡಿಕೊಂಡು ಅಧಿಕಾರಕ್ಕೆ ಬರುವುದನ್ನು ಬಿಜೆಪಿ ಚೆನ್ನಾಗಿ ಕರಗತ ಮಾಡಿಕೊಂಡಿದೆ ಎಂಬುದು ಸಾಬೀತಾಗಿದೆ.


ಅಟಲ್ ಬಿಹಾರಿ ವಾಜಪೇಯಿ ಬಗ್ಗೆ ದೇಶದ ಒಂದು ವಿಭಾಗದ ಜನರ ನಡುವೆ ಭಾರೀ ಭ್ರಮೆಗಳಿವೆ. ಅವರ ವ್ಯಕ್ತಿತ್ವ ಹಾಗೂ ನಾಯಕತ್ವದ ಗುಣಗಳನ್ನು ಭೂತಕನ್ನಡಿಯೊಳಗಿಟ್ಟು ಪ್ರಚಾರ ಮಾಡಲಾಗುತ್ತಿದೆ. ಅವರನ್ನು ದೇಶದ ಸ್ವಾತಂತ್ರ್ಯ ಹೋರಾಟಗಾರರ ಪಂಕ್ತಿಗೆ ಸೇರಿಸುವ ಪ್ರಯತ್ನವೂ ನಡೆದಿದೆ. ಅವರೊಬ್ಬ ಕವಿಯೆಂದೂ ವರ್ಣಿಸಲ್ಪಡುತ್ತಾರೆ. ಆದರೆ ಲಖನೌ ಘಟನೆಯ ಕುರಿತು ಅವರು ತಾಳಿದ ನಿಲುವು ಅವರು ಕವಿ ಹೃದಯಿ ಅಲ್ಲ; ಅವರು ಕಟುಕ ಹೃದಯಿ ಎಂದು ಸಾಬೀತುಪಡಿಸಿದೆ. ಲಾಲ್ ಬಹಾದ್ದೂರ್ ಶಾಸ್ತ್ರಿ ಅವರು ರೈಲ್ವೇ ಮಂತ್ರಿಯಾಗಿದ್ದಾಗ ನಡೆದ ಒಂದು ರೈಲ್ವೆ ಅಪಘಾತದಲ್ಲಿ ಜನ ಪ್ರಾಣ ಕಳೆದುಕೊಂಡಾಗ ಅವರು ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿದ್ದರು! ಲಾಲ್ ಬಹಾದ್ದೂರ್ ಶಾಸ್ತ್ರಿ ಎಲ್ಲಿ? ಅಟಲ್ ಬಿಹಾರಿ ವಾಜಪೇಯಿ ಎಲ್ಲಿ?

ಖಾಸಗೀಕರಣ ಪ್ರವೃತ್ತಿ ಹೆಚ್ಚುತ್ತಿದೆ. ಒಟ್ಟು ಆಂತರಿಕ ಉತ್ಪನ್ನ (ಜಿಡಿಪಿ)ದ ಶೇ.5 ರಷ್ಟನ್ನು ಸರ್ಕಾರ ಸಾರ್ವಜನಿಕ ಆರೋಗ್ಯಕ್ಕಾಗಿ ವೆಚ್ಚ ಮಾಡಬೇಕು, ಎಲ್ಲಾ ಮೂಲಭೂತ ಸೇವೆಗಳನ್ನು ಒದಗಿಸುವಂತೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಜ್ಜುಗೊಳಿಸಬೇಕು, ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಸೇವೆಯನ್ನು ಜನರ ಮನೆಬಾಗಿಲಿಗೆ ಕೊಂಡೊಯ್ಯಲು ವ್ಯವಸ್ಥೆಯಾಗಬೇಕು, ಎಲ್ಲಾ ಅಗತ್ಯ ಔಷಧಿಗಳು ಸಾಮಾನ್ಯ ಜನರು ಕೊಂಡುಕೊಳ್ಳಲು ಸಾಧ್ಯವಾಗುವಂತಹ ದರಗಳಲ್ಲಿ ಲಭ್ಯವಾಗಬೇಕು ಎಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ವಸತಿ : ವಸತಿ ಸೌಕರ್ಯ ಒಂದು ಮೂಲಭೂತ ಹಕ್ಕೆಂದು ಪರಿಗಣಿಸಲ್ಪಡಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ. ಸ್ವಂತ ಮನೆಗಳಿಲ್ಲದ ಎಲ್ಲಾ ಕುಟುಂಬಗಳಿಗೂ ವಸತಿ ಸೌಕರ್ಯ ಕಲ್ಪಿಸುವುದು ಸರ್ಕಾರದ ಒಂದು ಪ್ರಮುಖ ಆದ್ಯತೆಯಾಗಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ನಗರ ಪ್ರದೇಶದ ಬಡವರಿಗೆ ವಸತಿ ಯೋಜನೆಯನ್ನು ರೂಪಿಸಬೇಕು. ಅರಣ್ಯ ಪ್ರದೇಶಗಳಲ್ಲಾಗಲಿ, ನಗರಗಳ ಕೊಳಚೆ ಪ್ರದೇಶಗಳಲ್ಲಾಗಲಿ ಮನೆಗಳನ್ನು ಕಟ್ಟಿಕೊಂಡು ವಾಸಿಸುವವರಿಗೆ ಸಮರ್ಪಕವಾದ ಬದಲಿ ವ್ಯವಸ್ಥೆ ಮಾಡದೆ ಒಕ್ಕಲೆಬ್ಬಿಸಬಾರದು.

ಉದ್ಯೋಗ : ಉದ್ಯೋಗದ ಹಕ್ಕು ಮೂಲಭೂತ ಹಕ್ಕಾಗಬೇಕೆಂದು ಸಿಪಿಐ(ಎಂ) ಪ್ರತಿಪಾದಿಸುತ್ತದೆ. ಸರ್ಕಾರಿ ಇಲಾಖೆಗಳಲ್ಲಿ ನೇಮಕಾತಿ ಮೇಲಿರುವ ನಿರ್ಬಂಧಗಳನ್ನು ಕಿತ್ತು ಹಾಕಬೇಕು. ಹುದ್ದೆಗಳನ್ನು ರದ್ದು ಮಾಡುವುದನ್ನು, ಒಟ್ಟು ಖಾಲಿ ಇರುವ ಹುದ್ದೆಗಳನ್ನು ತುಂಬಬೇಕು. ವಿದ್ಯಾವಂತ ನಿರುದ್ಯೋಗಿಗಳಿಗೆ, ಕುಶಲಕರ್ಮಿಗಳಿಗೆ, ಅಂಗವಿಕಲರಿಗೆ ಸ್ವಯಂ ಉದ್ಯೋಗ ಯೋಜನೆಗಳಿಗಾಗಿ ಅಗತ್ಯ ಆರ್ಥಿಕ ನೆರವು ಒದಗಿಸಬೇಕು. ಗ್ರಾಮೀಣ ಪ್ರದೇಶದಲ್ಲಿ ಕೂಲಿಗಾಗಿ ಕಾಳು ಯೋಜನೆಯನ್ನು ಖಾಯಂ ಜಾರಿಯಲ್ಲಿಡಬೇಕು.

ಮೇಲೆ ಪ್ರಸ್ತಾಪಿಸಿರುವ ಅಂಶಗಳಲ್ಲದೆ ಮಾಧ್ಯಮ ಮತ್ತು ಸಂಸ್ಕೃತಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ರಕ್ಷಣೆಗೆ ಸಂಬಂಧಿಸಿ ಸಿಪಿಐ(ಎಂ) ಸ್ಪಷ್ಟವಾದ ಪರ್ಯಾಯ ಧೋರಣೆಯನ್ನು ಹೊಂದಿದೆ. ಚುನಾವಣಾ ಸುಧಾರಣೆಗಳ ಭಾಗವಾಗಿ ಅಂಕಿತಪಟ್ಟಿ ವ್ಯವಸ್ಥೆಯೊಂದಿಗೆ ಅನುಪಾತೀಯ ಪ್ರಾತಿನಿಧ್ಯ ಪದ್ಧತಿಯನ್ನು ಸಿಪಿಐ(ಎಂ) ಪ್ರತಿಪಾದಿಸುತ್ತದೆ. ಅಪರಾಧಿ ಹಿನ್ನೆಲೆಯುಳ್ಳವರು ಚುನಾವಣೆಗಳಲ್ಲಿ ಸ್ಪರ್ಧಿಸುವುದನ್ನು ತಡೆಯಲು ಕ್ರಮ, ರಾಜಕೀಯ ಪಕ್ಷಗಳಿಗೆ ಬಂಡವಾಳಶಾಹಿಗಳು ಹಣ ನೀಡುವುದಕ್ಕೆ ತಡೆಗಾಗಿ ಸಿಪಿಐ(ಎಂ) ಒತ್ತಾಯಿಸುತ್ತದೆ. ನ್ಯಾಯಾಂಗ ಸುಧಾರಣೆಗಳ ಅಂಗವಾಗಿ ಜನಸಾಮಾನ್ಯರಿಗೆ ಕಡಿಮೇ ವೆಚ್ಚದಲ್ಲಿ ಶೀಘ್ರ ಪರಿಹಾರ ಒದಗಿಸುವ ವ್ಯವಸ್ಥೆಯಾಗಬೇಕು, ನ್ಯಾಯಾಂಗದ ಉತ್ತರದಾಯಿತ್ವವನ್ನು ಖಚಿತಪಡಿಸಬೇಕು. ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗಗಳ ಸ್ವತಂತ್ರ ಕಾರ್ಯಾಚರಣೆ ಹಾಗೂ ಸಮತೋಲನ ಕಾಪಾಡಬೇಕು ಎಂದು ಸಿಪಿಐ(ಎಂ) ಪ್ರತಿಪಾದಿಸುತ್ತದೆ. ಉನ್ನತ ಮಟ್ಟದಲ್ಲಿ ಭ್ರಷ್ಟಾಚಾರ ತಡೆಗಟ್ಟಲು ಸೂಕ್ತ ಸಾಂಸ್ಥಿಕ ವ್ಯವಸ್ಥೆ ರೂಪಿಸಬೇಕು, ಮೊಕದ್ದಮೆಗಳು ಕನಿಷ್ಠ 2 ವರ್ಷದ ಅವಧಿಯೊಳಗೆ ಇತ್ಯರ್ಥವಾಗಬೇಕು. ನಾಗರೀಕರ ಮಾಹಿತಿ ಪಡೆಯುವ ಹಕ್ಕಿನ ಕಾಯ್ದೆಯನ್ನು ಜಾರಿಮಾಡಬೇಕು. ಹೀಗೆ ಸಿಪಿಐ(ಎಂ) ಪರ್ಯಾಯ ನೀತಿ ಎಲ್ಲಾ ವಿಷಯಗಳನ್ನು ಒಳಗೊಂಡು ಸಮಗ್ರವೂ ಸಮರ್ಪಕವೂ ಆಗಿದೆ.




ವಿದೇಶಿ ಸಾಲ - ಬಿಜೆಪಿ ಹಸಿ ಹಸಿ ಸುಳ್ಳು ಪ್ರಚಾರ

ಒಂದು ಸುಳ್ಳನ್ನು ಪದೇ ಪದೇ ಹೇಳುತ್ತಿದ್ದರೆ ಅದು ಸತ್ಯವೆಂದು ಜನ ನಂಬುತ್ತಾರೆ ಎನ್ನುವ ಗೋಬೆಲ್ಸ್ ತತ್ವದಲ್ಲಿ ಪೂರ್ಣ ನಂಬಿಕೆ ಇಟ್ಟಿರುವ ಭಾರತೀಯ ಜನತಾಪಕ್ಷ ಸುಳ್ಳಿನ ಸಂತೆಯ ಮೇಲೆ ನಿಂತು ಚುನಾವಣೆ ಗೆಲ್ಲಬೇಕೆಂದು ಬಯಸುತ್ತಿದೆ. ಭಾರತ ಪ್ರಕಾಶಿಸುತ್ತಿದೆ. 'ಹಿತಾನುಭವವಾಗುತ್ತಿದೆ' ಮತ್ತಿತ್ಯಾದಿ ಸುಳ್ಳುಗಳನ್ನು ಮಾರಾಟ ಮಾಡಲು ಜಾಹಿರಾತಿನ ಮೂಲಕ 500 ಕೋಟಿ ರೂ.ಗಳಿಗಿಂತಲೂ ಹೆಚ್ಚು ಖರ್ಚು ಮಾಡಿದ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಭಾರತವನ್ನು ಸಾಲದಿಂದ ಋಣಮುಕ್ತಗೊಳಿಸಿದ್ದೇವೆ ಎಂಬ ಇನ್ನೊಂದು ಸುಳ್ಳನ್ನು ಹರಡುತ್ತಿದೆ.

ಇತ್ತೀಚೆಗೆ ಕುಂದಾಪುರದಲ್ಲಿ ಬಿಜೆಪಿಯ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಬಿಜೆಪಿಯ ರಾಜ್ಯ ಮುಖಂಡ ಡಿ.ಹೆಚ್.ಶಂಕರಮೂರ್ತಿಯವರು, 'ಬಿಜೆಪಿ ಸರಕಾರ ಎಲ್ಲಾ ಸಾಲವನ್ನು ತೀರಿಸಿ ಭಾರತವನ್ನು ಋಣಮುಕ್ತಗೊಳಿಸಿದೆ' ಎಂದು ಹೇಳಿದ್ದರು. ಇದನ್ನು ಅಲ್ಲಿಯ ಇತರೆ ಸ್ಥಳೀಯ ಮುಖಂಡರು, ಮಾಜಿ ಶಾಸಕರು ಅನುಮೋದಿಸಿ ಚಪ್ಪಾಳೆ ಗಿಟ್ಟಿಸಿಕೊಂಡಿದ್ದು ಮಾತ್ರವಲ್ಲದೆ, ಜನರ ನಡುವೆ ಪ್ರಚಾರ ಗೈಯುತ್ತಿದ್ದಾರೆ. ಗುಲ್ಬರ್ಗಾ ಜಿಲ್ಲೆ ಮತ್ತಿತರ ಕಡೆಗಳಲ್ಲಿ ಬಿಜೆಪಿ ಬಳಸುತ್ತಿರುವ ಚುನಾವಣಾ ಪ್ರಚಾರದ ಕ್ಯಾಸೆಟ್ಟಿನಲ್ಲಿ ಕೂಡಾ ಇದೇ ಸುಳ್ಳನ್ನು ಮತ್ತೆ ಮತ್ತೆ ಪ್ರಚಾರಿಸುತ್ತಿದ್ದಾರೆ.

16.04.04 ರಂದು ದೂರದರ್ಶನದಲ್ಲಿ ಬಿತ್ತರಿಸಲಾದ ವಿವಿಧ ರಾಜಕೀಯ ಪಕ್ಷಗಳ ಚರ್ಚಾಗೋಷ್ಟಿಯಲ್ಲಿಯೂ ಬಿಜೆಪಿ ಮುಖಂಡ ವಿ.ಎಸ್.ಆಚಾರ್ಯ ಮಾತನಾಡುತ್ತಾ 'ರಾಜ್ಯ ಕಾಂಗ್ರೆಸ್ ಸರಕಾರದ ಸಾಲ 1999 ರಲ್ಲಿ 15ಸಾವಿರ ಕೋಟಿ ರೂ.ಗಳಿದ್ದದ್ದು ಈಗ 31 ಸಾವಿರ ಕೋಟಿ ರೂ.ಗಳಿಗೆ ಏರಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಸಾಲ ತೀರಿಸುತ್ತಾ ಇರುವಾಗ ರಾಜ್ಯ ಸರಕಾರ ಸಾಲ ಹೆಚ್ಚು ಮಾಡುತ್ತಿದೆ' ಎಂದು ಹೇಳಿದರು. ಕರ್ನಾಟಕದ ಕಾಂಗ್ರೆಸ್ ಸರಕಾರ ವಿಪರೀತ ಸಾಲ ಮಾಡಿರುವುದು ನಿಜವಾದರೂ, ಕೇಂದ್ರ ಸರಕಾರ 'ಸಾಲ ತೀರಿಸುತ್ತಾ ಬಂದಿದೆ' ಎಂಬುದು ಶುದ್ಧ ಸುಳ್ಳು.



ಇದೇ ಏಪ್ರಿಲ್ 7 ರಂದು 'ಇಕಾನಮಿಕ್ ಟೈಮ್ಸ್' ಪತ್ರಿಕೆಯಲ್ಲಿ ಪ್ರಕಟವಾದ ವರದಿಯಲ್ಲಿ 31-12-2003 ರಂದು ಭಾರತದ ಒಟ್ಟು ವಿದೇಶಿ ಸಾಲ 1,12,105 ಮಿಲಿಯ ಡಾಲರು ಎಂದಿದೆ. ಇದನ್ನು ಒಂದು ಡಾಲರಿಗೆ ರೂ 47/- ರಂತೆ ಪರಿವರ್ತಿಸಿದಲ್ಲಿ 4,26,893.5 ಕೋಟಿ ರೂ ಆಗುತ್ತದೆ.

ಇದರಲ್ಲಿ ವಿದೇಶದಲ್ಲಿ ನೆಲೆಸಿರುವ ಭಾರತೀಯರು (NRL) ಜಮಾ ಮಾಡಿದ ಹಣವೂ ಸೇರಿರುತ್ತದೆ. ಈ ಹಣವೂ ಸಾಲದ ಹಣ ಇದ್ದಂತೆಯೇ ಏಕೆಂದರೆ, ಯಾವಾಗ ಬೇಕೆಂದರೂ ಅವರು ಆ ಹಣವನ್ನು ವಾಪಾಸು ಪಡೆದುಕೊಳ್ಳಬಹುದು. ಭಾರತ ಸರಕಾರವೇ ಮಂಡಿಸಿದ ಆರ್ಥಿಕ ಸಮೀಕ್ಷೆಯ ಪ್ರಕಾರ 31-03-2002 ರಂದು ವಿದೇಶಿ ಸಾಲವು (ವಿದೇಶದಲ್ಲಿ ನೆಲೆಸಿರುವ ಭಾರತೀಯ ಡಿಪಾಸಿಟುಗಳನ್ನು ಬಿಟ್ಟು) 1,94,324 ಕೋಟಿ ರೂ.ಗಳಿದ್ದು 30-09-2002 ರ ಹೊತ್ತಿಗೆ 1,99,817 ಕೋಟಿ ರೂ.ಗಳಿಗೆ ಏರಿದೆ. 1991 ರಲ್ಲಿ ಈ ಸಾಲ 1,61,000 ಕೋಟಿ ರೂ. ಇತ್ತು. ಹಾಗಾದರೆ ವಿದೇಶಿ ಸಾಲ ಹೆಚ್ಚಾಗಿದೆಯೋ ಅಥವಾ ಕಡಿಮೆಯಾಗಿದೆಯಾ ಎಂದು ಜನತೆ ಬಿಜೆಪಿ ಮುಖಂಡರನ್ನು ಪ್ರಶ್ನಿಸಬೇಕಾಗಿದೆ.

ಭಾರತ ಸರಕಾರವು ತೆಗೆದುಕೊಂಡ ಆಂತರಿಕ ಸಾಲವಂತೂ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ. ವಾಜಪೇಯಿ ಸರಕಾರವು ಅಧಿಕಾರಕ್ಕೆ ಬಂದ ನಂತರ ಈ ಸಾಲದ ಪರಿಮಾಣ ವರ್ಷದಿಂದ ವರ್ಷಕ್ಕೆ ತೀವ್ರಗತಿಯಲ್ಲಿ ಹೆಚ್ಚಿದೆ. ಮೇಲಿನ ಅಂಕಿಸಂಖ್ಯೆ ಅದನ್ನು ಪುಷ್ಟೀಕರಿಸುತ್ತದೆ.

1995-96ರಿಂದ 2003-04ರವರೆಗಿನ ಆಂತರಿಕ ಸಾಲದಲ್ಲಿ ಹೆಚ್ಚಳ (ಕೋಟಿ ರೂ.ಗಳಲ್ಲಿ)

1995-96	96-97	97-98	98-99	99-00	2000-01	01-02	02-03	03-04
307869	344476	388998	459696	714254	803698	913061	1037163	1158639

ಆಧಾರ : ಕೇಂದ್ರ ಸರಕಾರವು ಮಂಡಿಸಿದ ಬಜೆಟ್‌ನ ದಸ್ತಾವೇಜುಗಳು

ಬಿಜೆಪಿ ನೇತೃತ್ವದ ಕೇಂದ್ರ ಸರಕಾರವು ಅಧಿಕಾರಕ್ಕೆ ಬಂದ 1998-99 ರ ಆರ್ಥಿಕ ವರ್ಷದಲ್ಲಿ ಒಟ್ಟು ಆಂತರಿಕ ಸಾಲವು 459,696 ಕೋಟಿ ರೂ.ಗಳಿಂದ 2003-04ಕ್ಕೆ (ಅಂದಾಜು) 11,58,639 ರೂ.ಗಳಿಗೆ ಏರಿದೆ. ಒಟ್ಟು ಸಾಲದ ಮೇಲೆ ನೀಡುತ್ತಿರುವ ಬಡ್ಡಿಯು 1998-99 ರಲ್ಲಿ 77,249 ಕೋಟಿ ರೂ.ಗಳಿಂದ 2003-04 ಕ್ಕೆ 123,223 ಕೋಟಿ ರೂ.ಗಳಿಗೆ ಏರಿದೆ. ವಿದೇಶಿ ಸಾಲವೂ ಸೇರಿದರೆ ಈ ಮೊತ್ತವು 17 ಲಕ್ಷ ಕೋಟಿಗಳಿಗೆ ಏರುತ್ತದೆ. ಇದು ನಮ್ಮ ದೇಶದ ಒಟ್ಟು ಉತ್ಪನ್ನ (GDC) ದ ಶೇ.69 ರಷ್ಟು ಆಗುತ್ತದೆ. ಬಡ್ಡಿ ಪಾವತಿಯು 1.5 ಲಕ್ಷಕ್ಕೇರುತ್ತದೆ. ಇಷ್ಟೊಂದು ಸಾಲ ಮಾಡುತ್ತಿರುವ ಬಿಜೆಪಿ ನೇತೃತ್ವದ ಕೇಂದ್ರ ಸರಕಾರಕ್ಕೆ, ಇತರೆ ರಾಜ್ಯ ಸರಕಾರಗಳ ಮೇಲೆ ಆರೋಪ ಮಾಡುವ ನೈತಿಕ ಹಕ್ಕಿಲ್ಲ. ಲಾಭದಾಯಕ ಸಾರ್ವಜನಿಕ ಉದ್ದಿಮೆಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿದ ನಂತರವೂ ಸಾಲದ ಹೊರೆಯನ್ನು ಹೆಚ್ಚಿಸುತ್ತಿರುವ ಬಿಜೆಪಿ ನೇತೃತ್ವದ ಕೇಂದ್ರ ಸರಕಾರವನ್ನು ಬಯಲು ಗೊಳಿಸಬೇಕಿದೆ. ಎಲ್ಲಾ ಗೊತ್ತಿದ್ದೂ ಹಸಿ ಹಸಿ ಸುಳ್ಳಿನ ಪ್ರಚಾರವನ್ನೇ ಹರಿಬಿಡುತ್ತಿರುವ ಬಿಜೆಪಿ ಮತ್ತು ಅದರ ಮೈತ್ರಿಕೂಟವನ್ನು ಸೋಲಿಸಬೇಕಾಗಿದೆ. ಅದೊಂದೇ ಭಾರತವನ್ನು ಋಣಮುಕ್ತಗೊಳಿಸುವ ದಾರಿ.

● ಬಾಲಕೃಷ್ಣ ಶೆಟ್ಟಿ

ಉಳಿತಾಯ ಖಾತೆಯ ಬಡ್ಡಿದರ ಕಡಿತ!

ಉಳಿತಾಯ ಖಾತೆ ಬ್ಯಾಂಕುಗಳಲ್ಲಿ ತೆರೆಯಬಹುದಾದ ಸರಳವಾದ ಖಾತೆ. ಈ ಖಾತೆಗಳಲ್ಲಿನ ಠೇವಣಿಗಳಿಗೆ ಅತ್ಯಂತ ಕಡಿಮೆ ಬಡ್ಡಿದರ. ಬೇಕಾದಾಗ ಹಣ ಹಿಂತೆಗೆಯುವ ಸೌಲಭ್ಯವಿರುವುದರಿಂದ ಹಾಗೆಂದು ಹೇಳುತ್ತಾರೆ.

ದೇಶದ ಜನಸಾಮಾನ್ಯರು ಹೆಚ್ಚಾಗಿ ಬಳಸುವ ಖಾತೆ ಇದು. ಅವರಿಗೆ ಬ್ಯಾಂಕಿಂಗ್ ಸೌಲಭ್ಯ ನೀಡುವ ಖಾತೆ ಇದು. ಈ ಖಾತೆಯಲ್ಲಿನ ಹಣಕ್ಕೆ ಶೇ3.5 ದರದಲ್ಲಿ ಬಡ್ಡಿ ನೀಡಬೇಕೆಂದು ಭಾರತೀಯ ರಿಸರ್ವ್ ಬ್ಯಾಂಕ್ ವಿಧಿಸಿದೆ.

ಇದು ಹಿಂದೆ 4.5 ರಷ್ಟಿದ್ದದ್ದು ಉದಾರೀಕರಣದ ಪರಿಣಾಮವಾಗಿ ಶೇ 3.5 ಗೆ ಇಳಿದಿದೆ.

ಈಗ ಇದನ್ನು ಶೇ 3ಕ್ಕೆ ಇಳಿಸುವ ಮಾತುಗಳು ಚಾಲ್ತಿಗೆ ಬಂದುಬಿಟ್ಟಿವೆ. ಬ್ಯಾಂಕುಗಳ ಒಕ್ಕೂಟ ಈ ಕಡಿತಕ್ಕೆ ಶಿಫಾರಸ್ಸು ಮಾಡಿದೆ. ಸದ್ಯದಲ್ಲೆ ಈ ಕಡಿತ ಬರಬಹುದು. ತಮ್ಮ ಉಳಿತಾಯ ಖಾತೆಯ ಹಣದಿಂದ ಅಲ್ಪಸ್ವಲ್ಪ ಬಡ್ಡಿ ಪಡೆಯುವ ಜನಸಾಮಾನ್ಯರಿಗೆ ಖಂಡಿತವಾಗಿಯೂ ಇದು ಹೊಡೆತ ನೀಡುತ್ತದೆ.

ಬಡವರ ಹಣಕ್ಕೆ ಬೆಲೆಯಿಲ್ಲ? ಅಲ್ಲವೆ?

ಲಿವರ್ ಚಿಕಿತ್ಸೆಗಳು ಮತ್ತು ಮೌಢ್ಯ

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ



ಡಾ. ಪ್ರಕಾಶ್ ಸಿ.ರಾವ್



ಸತ್ಯಗಳು ಏನೇ ಇರಲಿ, ಕಾಮಾಲೆ ಎಂದಾಕ್ಷಣ ನಮ್ಮ ಜನರಲ್ಲಿ ಭೀತಿ ಉಂಟಾಗುತ್ತದೆ. ವೈಜ್ಞಾನಿಕ ಚಿಕಿತ್ಸೆಗೆ ಹಾಗೂ ಆಚರಣೆಗೆ, ಸಾಮಾನ್ಯವಾಗಿ ತಾತ್ವಿಕ ಆಧಾರವಿರುತ್ತದೆ. ಆದರೆ ಲಿವರ್ ಚಿಕಿತ್ಸೆಯ ಉಪಯೋಗದಲ್ಲಿ ಯಾವುದೇ ತಾತ್ವಿಕ ಆಧಾರ ಇಲ್ಲವೆಂಬುದು ಸೋಜಿಗವೆನಿಸುತ್ತದೆ. ಗಿಡಮೂಲಿಕೆಯ ಲಿವರ್ ಟಾನಿಕ್‌ಗಳಲ್ಲಿ 'ಫೈಲಾಂಥಸ್ ನರೂರಿ' ಎಂಬ ಘಟಕವಿರುತ್ತದೆ. ಅದು ವೈರಸ್‌ನ ಬೆಳವಣಿಗೆಯನ್ನು ಸ್ಥಗಿತಗೊಳಿಸುತ್ತದೆ. ಆದರೆ ಲಿವರ್ ಸೋಂಕಿನಿಂದ ಉಂಟಾದ ಕಾಮಾಲೆಯನ್ನು ಔಷಧಿಗಳಿಲ್ಲದೇ ಗುಣಪಡಿಸುವ ಸಾಧ್ಯತೆ ಇಲ್ಲವೆಂಬ ವಿಷಯ ತಪ್ಪು ಎಂದು ಗಮನಿಸಬೇಕಾಗಿದೆ.


ಜರ್ಮನಿಯಲ್ಲಿ ಹೃದಯ ರೋಗಗಳ ಬಗ್ಗೆ ಹಲವಾರು ನಂಬಿಕೆ ಭೀತಿ ಇದೆ. ಅದೇ ರೀತಿ ಭಾರತದಲ್ಲಿ ಲಿವರ್ ಬಗ್ಗೆ ಹಲವಾರು ತಪ್ಪು ನಂಬಿಕೆಗಳು ಹಾಗೂ ಭೀತಿ ಇದೆ. ಲಿವರ್ ಕೆಲಸ ಸ್ಥಗಿತಗೊಂಡು ಬಹಳ ವರ್ಷಗಳಿಂದಲೂ ಇದೆ. ಔಷಧಿ ಕಂಪೆನಿಗಳು ಈ ನಂಬಿಕೆಯನ್ನು ತಮ್ಮ ಬಂಡವಾಳ ಮಾಡಿಕೊಂಡು, ಲಾಭ ಹೆಚ್ಚಿಸಿಕೊಳ್ಳುತ್ತಿವೆ. ಮೊದಲು ಲಿವರ್ ಚುಚ್ಚುಮದ್ದುಗಳನ್ನು ಈ ಕಂಪೆನಿಗಳು ತಯಾರಿಸುತ್ತಿದ್ದವು. ಈಗ ಅದನ್ನು ಅನಗತ್ಯ ಹಾಗೂ ಅಪಾಯಕಾರಿಯೆಂದು ತಿಳಿದು ಬಂದಿದೆ. ಆದ್ದರಿಂದ ಆ ಔಷಧಿಗಳ ತಯಾರಿಕೆ ನಿಂತಿದೆ. ಆದರೆ ಈಗ ಲಿವರ್ ನಾರವುಳ್ಳ ಟಾನಿಕ್‌ಗಳು ತಯಾರಾಗುತ್ತಿವೆ. ಮೊದಲಿನ ನಂಬಿಕೆ ಮುಂದುವರೆದಿದೆ.


ಲಿವರ್ ರೋಗದಿಂದ ಬಿಳುಪು, ಚರ್ಮರೋಗಗಳು, ಕೂದಲು ಉದುರುವುದು, ಮಕ್ಕಳ ಬೆಳವಣಿಗೆ ಕುಂಠಿತವಾಗುವುದು, ಹೊಟ್ಟೆ ಊದಿಕೊಳ್ಳುವುದು, ನಿಶ್ಶಕ್ತಿ, ಅಜೀರ್ಣತೆ, ಕರುಳಿನ ತೊಂದರೆಗಳು ಉಂಟಾಗುತ್ತದೆ ಎಂದು ಜನರಲ್ಲದೇ ಕೆಲವು ವೈದ್ಯರೂ ನಂಬುತ್ತಾರೆ. ಇದಕ್ಕೆ ವೈಜ್ಞಾನಿಕ ಆಧಾರವಿಲ್ಲ.

ಆಧುನಿಕ ವೈದ್ಯ ಶಾಸ್ತ್ರದ ಆಧಾರದ ಮೇಲೆ ಹೇಳುವುದಾದರೆ ವೈರಸ್‌ನಿಂದ ಉಂಟಾಗುವ ಹೆಚ್ಚಿನ ರೋಗಗಳು ತಂತಾನೆ ವಾಸಿಯಾಗುತ್ತವೆ. ಯಾವ ಔಷಧಿಯೂ ಕಾಮಾಲೆಗೆ ಕಾರಣವಾದ ರೋಗವನ್ನು ಕೂಡಲೇ ಗುಣಪಡಿಸುವುದಾಗಲೀ, ಗುಣಪಡಿಸಲಾಗದ ಲಿವರ್ ರೋಗಗಳನ್ನು (ಸಿರೋಸಿಸ್) ಸಂಪೂರ್ಣ ಗುಣಪಡಿಸುವುದಾಗಲೀ ಸಾಧ್ಯವಿಲ್ಲ. ಹೆಪಟೈಟಿಸ್ ಬಿ ರೋಗದಲ್ಲಿ ಕಾಮಾಲೆ ಇಳಿಮುಖವಾದರೂ ವೈರಸ್ ದೇಹದಲ್ಲಿರಲು ಸಾಧ್ಯ ಹಾಗೂ ರೋಗ ವಾಸಿಯಾಗಿದೆಯೆಂದು ನಂಬಕೂಡದು. ವೈರಸ್ ಲಿವರ್ ರೋಗವಾದಾಗ, ಲಿವರ್ ಕೋಶಗಳು ಪುನಃ ಚೇತರಿಸಿಕೊಳ್ಳುವ ಸಾಧ್ಯತೆಯುಂಟು. ಲಿವರ್ ಕೋಶಗಳು ಚೇತರಿಸಿಕೊಳ್ಳದೇ ಇದ್ದಲ್ಲಿ, ಅದನ್ನು ಲಿವರ್ ನಿಷ್ಕ್ರಿಯತೆ (liver failure) ಎನ್ನುವರು. ಕೆಲವು ಬಾರಿ ರೋಗದಿಂದ ಸಾವೂ ಉಂಟಾಗಬಹುದು. ಆದರೆ ಅದು ವಿರಳ. ಎಲ್ಲ ತರಹದ ಕಾಮಾಲೆ ಅಪಾಯಕರವೆಂಬ ನಂಬಿಕೆ ತಪ್ಪು. ಕಳೆದ ಎರಡು ದಶಕಗಳಲ್ಲಿ ನಡೆದ ಸಂಶೋಧನೆಗಳಿಂದ ತಿಳಿದು ಬಂದ ವಿಷಯವೆಂದರೆ ಅನೇಕ ಗಿಡಮೂಲಿಕೆ ಔಷಧಿಗಳೂ ಅಪಾಯವನ್ನುಂಟುಮಾಡಲು ಸಾಧ್ಯ. ವಿಶ್ವ ಆರೋಗ್ಯ ಸಂಸ್ಥೆ ಲಿವರ್ ಚಿಕಿತ್ಸೆಯ ಬಗ್ಗೆ ಹೀಗೆ ಹೇಳುತ್ತದೆ "ಲಿವರ್ ಚಿಕಿತ್ಸೆಗಳು ಕೆಲವು ಬಾರಿ ಸಂಕೀರ್ಣ ಹಾಗೂ ದೋಶಯುಕ್ತ ಘಟಕಗಳಿಂದ ತಯಾರಾಗಿದ್ದು ಆ ಘಟಕಗಳ ಬಗ್ಗೆ ವೈಜ್ಞಾನಿಕ ಮಾಹಿತಿ ಇರುವುದಿಲ್ಲ. ಈ ಔಷಧಿಗಳು ಅನೇಕ ಘಟಕಗಳಿಂದ ಕೂಡಿರುವುದರಿಂದ ಚಿಕಿತ್ಸೆಯ ವೈಜ್ಞಾನಿಕ ವಿಶ್ಲೇಷಣೆ ಸಾಧ್ಯವಾಗುವುದಿಲ್ಲ. ಈ ಔಷಧಿಗಳನ್ನು ದೀರ್ಘ ಸಮಯದಿಂದ ಉಪಯೋಗಿಸಲಾಗುತ್ತಿದೆ, ಹಾಗೂ ಯಾವ ತೊಂದರೆಗಳಿಲ್ಲ ಎಂಬುದು ಈ ಔಷಧಿಗಳ ಉಪಯೋಗಕ್ಕೆ ವೈಜ್ಞಾನಿಕ ಆಧಾರವಿದೆ ಹಾಗೂ ಸುರಕ್ಷಿತ ಎಂದು ಹೇಳಲಾಗುವುದಿಲ್ಲ". ಹಲವಾರು ಕಂಪೆನಿಗಳು ಲಿವರ್ ಟಾನಿಕ್‌ಗಳನ್ನು ಮಾರುತ್ತಿವೆ. ಜನರು ಹಾಗೂ ವೈದ್ಯರು ಈ ಟಾನಿಕ್‌ಗಳನ್ನು ಯಾವ ಆಧಾರವಿಲ್ಲದೆಯೂ ಉಪಯೋಗಿಸುತ್ತಿದ್ದಾರೆ.

ಲಿವರ್ ಕಾಯಿಲೆ ಬಗ್ಗೆ ಈ ಅವೈಜ್ಞಾನಿಕ ನಿಲುವು ಅಪಾಯ ಉಂಟುಮಾಡಬಹುದಾಗಿದೆ ಹಾಗೂ ಚಿಕಿತ್ಸೆ ದುಬಾರಿಯಾಗುವುದು ಖಂಡಿತ.

ಗಿಡ ಮೂಲಿಕೆ ಆಧಾರಿತ ಲಿವರ್ ಟಾನಿಕ್‌ಗಳು : ಲಿವ್ 52, ಲಿವ್ ಫಿಟ್, ಹೆಪಟೋಗಾರ್ಡ್ ಇತ್ಯಾದಿ.





ಬಿಜೆಪಿ ತನ್ನ ಐದು ವರ್ಷಗಳ ದುರಾಡಳಿತದಲ್ಲಿ ಶಿಕ್ಷಣದ ಬಗ್ಗೆ ತೋರಿಸಬೇಕಾದ ಪ್ರಾಥಮಿಕ ಜವಾಬ್ದಾರಿಯನ್ನು ನಿರ್ವಹಿಸಿಲ್ಲ. ಸ್ಕೂಲು ವ್ಯವಸ್ಥೆಯ ವಿನಾಶ, ಶಿಕ್ಷಣದ ವ್ಯಾಪಾರೀಕರಣ, ಉಚ್ಚ ಶಿಕ್ಷಣದ ಖಾಸಗೀಕರಣ, ಚರಿತ್ರೆ ಮತ್ತು ಸಂಶೋಧನೆಯ ಕೇಸರೀಕರಣ - ಇವು ಶಿಕ್ಷಣ ಕ್ಷೇತ್ರವನ್ನು ವಿನಾಶದತ್ತ ಒಯ್ದಿದೆ. ಶಿಕ್ಷಣವನ್ನು ಉಳ್ಳವರ ಸರಕಾಗಿಸುವಲ್ಲಿ ವಿಶ್ವ ಬ್ಯಾಂಕ್ ಆಣತಿಯನ್ನು ಶಿರಸಾವಹಿಸಿ ಜಾರಿ ಮಾಡುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ ಸಕಾರಾತ್ಮಕ ಬದಲಾವಣೆ ಬೇಕಾದರೆ ಈ ಸರ್ಕಾರದ ನೀತಿಗಳನ್ನು ಆಮೂಲಾಗ್ರ ಬದಲಾಯಿಸುವ ಹೊಸ ಸರ್ಕಾರ ಬೇಕು. ಶಿಕ್ಷಣವನ್ನು 'ಕಡ್ಡಾಯ' ಮಾಡಿ ತಂದ ಕಾನೂನು, ಸ್ಕೂಲು ವ್ಯವಸ್ಥೆಯನ್ನು ಅಣಕ ಮಾಡುವಂಥದು.

ಬಿಜೆಪಿ ಸರ್ಕಾರದ ನೀತಿಗಳು ಶಿಕ್ಷಣ ಕ್ಷೇತ್ರದ ಮೇಲೆ ತೀವ್ರ ಧಾಳಿ ಎಸಗುವಂಥದು. ವಿಶ್ವಬ್ಯಾಂಕ್ ಆಣತಿಯಂತೆ ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣಕ್ಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ಖಾಸಗಿ ಶಿಕ್ಷಣದ ವೆಚ್ಚ ಎಲ್ಲಾ ಹಂತಗಳಲ್ಲಿ ಏರುತ್ತಿದ್ದು ಕೆಲವು ಉಳ್ಳವರು ಕೊಳ್ಳಬಹುದಾದ ಸರಕಾಗಿದೆ. ಚರಿತ್ರೆ ಕಲಿಸುವ ವಿಧಾನವನ್ನು ಕೋಮುವಾದಿ ಅಜೆಂಡಾಕ್ಕೆ ಬೇಕಾದ ಹಾಗೆ ಬದಲಾಯಿಸುವ ಹುನ್ನಾರ ನಡೆಸಿದೆ.

ಸ್ಕೂಲು ವ್ಯವಸ್ಥೆಯನ್ನು ಕಳಚಿ ಹಾಕುವುದರತ್ತ

ಖಾಸಗೀಕರಣದ ನೀತಿಗಳ ದಾಳಿಯಿಂದ, ಅಲಕ್ಷದಿಂದ ಈಗಾಗಲೇ ಶಿಥಿಲವಾಗಿರುವ ಸ್ಕೂಲು ವ್ಯವಸ್ಥೆಯನ್ನು ಬಿಜೆಪಿ ಸರ್ಕಾರದ ನೀತಿಗಳು ಇನ್ನಷ್ಟು ಪೂರ್ತಿ ಕಳಚಿ ಹಾಕುವುದರತ್ತ ನಡೆದಿದೆ. 2001ರ ಹೊತ್ತಿಗೆ ಪ್ರಾಥಮಿಕ ಹಂತದಲ್ಲಿ ಶೇಕಡ 41ರಷ್ಟು ಮಕ್ಕಳು ಸ್ಕೂಲು ಬಿಡುತ್ತಿದ್ದಾರೆ. ಮಾಧ್ಯಮಿಕ ಶೇಕಡಾ 54 ರಷ್ಟಾಗಿದೆ. ಆರು ಕೋಟಿ ಮಕ್ಕಳು ಸ್ಕೂಲಿನಿಂದ ಹೊರಗುಳಿದಿದ್ದಾರೆ. ಅದರಲ್ಲಿ ಮೂರುವರೆ ಕೋಟಿ ಹೆಣ್ಣು ಮಕ್ಕಳು. ಐದನೇ ಅಖಿಲ ಭಾರತ ಶಿಕ್ಷಣ ಸರ್ವೇ, ಸ್ಕೂಲು ವ್ಯವಸ್ಥೆಯ ದಯನೀಯ ಸ್ಥಿತಿಗೆ ಹಿಡಿದ ಕನ್ನಡಿ.

ಶೇಕಡಾ 42 ಸ್ಕೂಲುಗಳಲ್ಲಿ ಒಂದೇ ರೂಮು ಇದೆ. ಅರ್ಧದಷ್ಟು ಸ್ಕೂಲುಗಳಿಗೆ ಪಕ್ಕಾ ಕಟ್ಟಡವೇ ಇಲ್ಲ. ಅರ್ಧದಷ್ಟು ಸ್ಕೂಲುಗಳಲ್ಲಿ ಮಾತ್ರ ಬೋರ್ಡು ಇದೆ.

ಅರ್ಧಕ್ಕಿಂತ ಹೆಚ್ಚು ಸ್ಕೂಲುಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ.

ಶೇಕಡಾ 84ರಷ್ಟು ಸ್ಕೂಲುಗಳಲ್ಲಿ ಮೂತ್ರಾಲಯಗಳಿಲ್ಲ.

ಶೇಕಡಾ 60ರಷ್ಟು ಸ್ಕೂಲುಗಳಲ್ಲಿ ಒಂದು ಅಥವಾ ಎರಡು ಶಿಕ್ಷಕರುಗಳು ಇದ್ದಾರೆ.

ಶೇಕಡಾ 15 ರಷ್ಟು ಸ್ಕೂಲುಗಳಲ್ಲಿ ನಾಲ್ಕಕ್ಕಿಂತ ಹೆಚ್ಚು ಶಿಕ್ಷಕರು ಇದ್ದಾರೆ.

ಇಂತಹ ದಯನೀಯ ಸ್ಥಿತಿಯಲ್ಲಿರುವ ಸ್ಕೂಲು ವ್ಯವಸ್ಥೆಯನ್ನು ವೇಗವಾಗಿ ಉತ್ತಮಪಡಿಸುವ ಕ್ರಮಕೈಗೊಳ್ಳುವ ಬದಲು ಇಡೀ ವ್ಯವಸ್ಥೆಯನ್ನು ಅಣಕಿಸುವ 'ಕಸರತ್ತು'ಗಳಲ್ಲಿ ಬಿಜೆಪಿ ಸರ್ಕಾರ ತೊಡಗಿತ್ತು. ಸ್ಕೂಲು ವ್ಯವಸ್ಥೆ ಬಲಪಡಿಸಲು ಸಂಪನ್ಮೂಲಗಳನ್ನು ಒದಗಿಸುವ ಬದಲು, ಹೊಸ ಕಾನೂನು ತಂದಿದೆ. ಈ ಕಾನೂನು ಕಡ್ಡಾಯ ಶಿಕ್ಷಣ ವ್ಯವಸ್ಥೆ ಜಾರಿಗೆ ತರಲು ನೆರವಾಗುವ ಬದಲು, 'ಶಿಕ್ಷಣ'ದ ಪರಿಕಲ್ಪನೆಯನ್ನು ಸೀಮಿತಗೊಳಿಸಿದೆ.

6ರಿಂದ 14ರ ವಯಸ್ಸಿನ ಮಕ್ಕಳು ಮಾತ್ರ 'ಸ್ಕೂಲು ಹೋಗುವ ವಯಸ್ಸಿನವರು', ಅವರಿಗೆ ಮಾತ್ರ ಕಡ್ಡಾಯ ಉಚಿತ ಶಿಕ್ಷಣ ಎನ್ನುತ್ತದೆ ಈ ಕಾನೂನು. 14 ವರ್ಷಕ್ಕಿಂತ ಹೆಚ್ಚಾಗಿರುವ, ಆದರೆ ಯಾವತ್ತೂ ಸ್ಕೂಲಿಗೆ ಹೋದ ಮಕ್ಕಳು ಈ ಕಾನೂನು ಪ್ರಕಾರ ಉಚಿತ ಶಿಕ್ಷಣದಿಂದ ವಂಚಿತರಾಗುತ್ತಾರೆ. ಹಿಂದೆ ಯಾವುದೇ ರೀತಿಯ ಅಂಗವಿಕಲತೆ ಇರುವ ಮಕ್ಕಳಿಗೆ 18 ವರ್ಷದವರೆಗೆ ಉಚಿತ ಶಿಕ್ಷಣವಿರಬೇಕೆಂಬ ಕಾನೂನು ಇತ್ತು. ಸ್ಕೂಲು ಮತ್ತು ಸ್ಕೂಲೇತರ(ಅಥವಾ ಅನೌಪಚಾರಿಕ) ಎರಡು ಈ ಕಾನೂನು ಪ್ರಕಾರ ಶಿಕ್ಷಣವೇ. ಆದರೆ ಎಲ್ಲಾ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಕೊಡಲು ಸ್ಕೂಲು ವ್ಯವಸ್ಥೆಯನ್ನು ಹೆಚ್ಚು ಸಂಪನ್ಮೂಲಗೊಳಿಸುವ ಬಲಪಡಿಸುವ ಬದಲು, ಸ್ಕೂಲೇತರ ಅನೌಪಚಾರಿಕ ಶಿಕ್ಷಣವನ್ನು ಅದೇ ಮಟ್ಟದಲ್ಲಿ ನೋಡುವ ಮೂಲಕ ಎರಡು ರೀತಿಯ ಶಿಕ್ಷಣ ವ್ಯವಸ್ಥೆ ಜಾರಿಗೆ ತಂದಿದೆ. ದೊಡ್ಡ ಸಂಖ್ಯೆಯ ಬಡವರ ಮಕ್ಕಳಿಗೆ ಯಾವುದೇ ಸವಲತ್ತು ಇಲ್ಲದ ಸ್ಕೂಲೇತರ ಅನೌಪಚಾರಿಕ ಶಿಕ್ಷಣ ಎಂದು ಹೇಳಿ ತನ್ನ ಪ್ರಾಥಮಿಕ ಜವಾಬ್ದಾರಿಯಿಂದ ನುಣುಚಿಕೊಂಡಿದೆ. ಈ ಕಾನೂನು ಪ್ರಕಾರ ಶಿಕ್ಷಣ ಕೊಡಿಸದ ಪಾಲಕರನ್ನು ಜೈಲಿಗೆ ಹಾಕಬಹುದು. ಆದರೆ ಸ್ಕೂಲುಗಳಲ್ಲಿ ಪ್ರಾಥಮಿಕ ಸವಲತ್ತು ಇರುವಂತೆ ನೋಡಿಕೊಳ್ಳದ ಅಧಿಕಾರಿಗಳಿಗೆ ಯಾವುದೇ ಶಿಕ್ಷೆ ಇಲ್ಲ. ಈ ಕಾನೂನಿನ ಪರಿಣಾಮಕಾರಿ ಜಾರಿ ಏನಾದರೂ ಆದರೆ, ಹೆಚ್ಚು ಮಕ್ಕಳು ಸ್ಕೂಲುಗಳಲ್ಲಿ ಇರುವ ಬದಲು ಹೆಚ್ಚು ಪಾಲಕರು ಜೈಲಿನಲ್ಲಿರುತ್ತಾರೆ! ಇದು ಒಬ್ಬ 'ಎಲ್ಲರಿಗಾಗಿ ಶಿಕ್ಷಣ' ಆಂದೋಲನದಲ್ಲಿರುವ ಹಿಂದು ಕಾರ್ಯಕರ್ತನ ಟಿಪ್ಪಣಿ. ಸಾಲದಂತೆ ಕೆಲಸ ಮಾಡುತ್ತಿರುವ ಮಕ್ಕಳಿಗೆ ಅನೌಪಚಾರಿಕ ಶಿಕ್ಷನ ವಿಧಿಸುವ ಮೂಲಕ, ಬಾಲ ಕಾರ್ಮಿಕ ವ್ಯವಸ್ಥೆಯನ್ನು ಕಾನೂನು ಬದ್ಧಗೊಳಿಸಿದೆ!

ಸರ್ಕಾರದ 'ಸರ್ವ ಶಿಕ್ಷಣ ಅಭಿಯಾನ'ಕ್ಕೆ ಹಿಂದಿನ ಎಲ್ಲಾ ಶಿಕ್ಷಣ ಸೌಲಭ್ಯ ಯೋಜನೆಗಳನ್ನು ಸೇರಿಸಲಾಗಿದೆ. ಈ 'ಅಭಿಯಾನ'ಕ್ಕೆ ಒದಗಿಸಿರುವ ಸಂಪನ್ಮೂಲಗಳು 2002ಕ್ಕಿಂತ 2003ರಲ್ಲಿ ಕಡಿಮೆ ಆಗಿದೆ. ಇದೇ ವಿಪರ್ಯಾಸ. ಒಂದು ಕಡೆ ಈ ಸರ್ಕಾರ ಕಡ್ಡಾಯ ಶಿಕ್ಷಣಕ್ಕೆ ಕಾನೂನು ಮಾಡುತ್ತದೆ, ಶಿಕ್ಷಣಕ್ಕೆ ಇನ್ನಷ್ಟು ಸೀಮಿತ ಅರ್ಥ ಕೊಡುತ್ತದೆ. ಆದರೆ ಆ ಸೀಮಿತ ಅರ್ಥದ ಶಿಕ್ಷಣಕ್ಕೆ ಬೇಕಾದ ಸಂಪನ್ಮೂಲಗಳಲ್ಲಿ ಕಡಿತ ಮಾಡುತ್ತದೆ. ಸ್ವಾಭಾವಿಕವಾಗಿಯೇ ಸ್ಕೂಲುಗಳಲ್ಲಿ ಇರುವ ಮಕ್ಕಳನ್ನು ಉಳಿಸಿಕೊಳ್ಳುವ, ಎಲ್ಲಾ ಮಕ್ಕಳೂ ಸ್ಕೂಲಿಗೆ ಬರುವಂತೆ ಮಾಡುವುದರಲ್ಲಿ 'ಅಭಿಯಾನ' ಸೋತಿದೆ. ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲು ಪ್ರತಿ ವರ್ಷ13,700 ಕೋಟಿ ರೂ. ಬೇಕು ಅಂತ ಬಿಜೆಪಿ ಸರ್ಕಾರವೇ ನೇಮಿಸಿದ ವಾಪಾನ್ ಮುಜುಂದಾರ್ ಸಮಿತಿ ಶಿಫಾರಸು ಮಾಡಿತ್ತು. ಆದರೆ ಆ ಶಿಫಾರಸನ್ನು ಬಿಜೆಪಿ ಸರ್ಕಾರ ನಿರ್ಲಕ್ಷ್ಯ ಮಾಡಿದೆ. ಇಷ್ಟು ಸಾಲದೆಂಬಂತೆ, ಉಚಿತ ಶಿಕ್ಷಣಕ್ಕೆ ಒಳಗಾಗಬೇಕಾದರೆ ಜನನ ಸರ್ಟಿಫಿಕೇಟ್ ಮತ್ತು ಬಡತನದ ರೇಖೆಯ ಕೆಳಗಿದ್ದಾರೆ ಎಂಬ ಬಗ್ಗೆ ಸರ್ಟಿಫಿಕೇಟು ಕೊಡಬೇಕು ಎಂಬ ಹೊಸ ನಿಯಮಗಳನ್ನು ಜಾರಿಗೆ ತಂದಿದೆ. ಒಟ್ಟಾರೆಯಾಗಿ ಶಿಕ್ಷಣ ಕ್ಷೇತ್ರದಲ್ಲಿ ಬಿಜೆಪಿ ಸರ್ಕಾರದ ನೀತಿ ಬಡವರಿಗೆ ಶಿಕ್ಷಣ ನಿರಾಕರಿಸಿರುವುದು, ಸಾರ್ವತ್ರಿಕ ಶಿಕ್ಷಣದ ಪರಿಕಲ್ಪನೆಯನ್ನೇ ನಾಶ ಮಾಡುವುದು ಆಗಿದೆ.

ಉಚ್ಚ ಶಿಕ್ಷಣದ ಖಾಸಗೀಕರಣ

ಏಪ್ರಿಲ್ 2000ದಲ್ಲಿ ಸರ್ಕಾರದ ಕೋರಿಕೆಯಂತೆ ಉಚ್ಚ ಶಿಕ್ಷಣಕ್ಕೆ ನೇಮಿಸಿದ ಅಂಬಾನಿ-ಬಿರ್ಲಾ ಸಮಿತಿ ತನ್ನ ವರದಿ ಸಲ್ಲಿಸಿತು. ಕಲೆ ಬಿಟ್ಟು ಇತರ ಎಲ್ಲಾ ಕೋರ್ಸುಗಳಲ್ಲಿ ಶಿಕ್ಷಣದ ವೆಚ್ಚವನ್ನು ವಿದ್ಯಾರ್ಥಿಗಳಿಂದಲೇ ಸಂಗ್ರಹಿಸಬೇಕು. ಸಾರ್ವಜನಿಕ ನಿಧಿಯ ನೆರವಿನ ಉಚ್ಚ ಶಿಕ್ಷಣ ವ್ಯವಸ್ಥೆ ಕಿತ್ತು ಹಾಕಬೇಕು. ಉಚ್ಚ ಶಿಕ್ಷಣ ಖಾಸಗಿ ಬಂಡವಾಳ ಹೂಡಿಕೆ ಮೇಲೆ ಆಧಾರಿತವಾಗಿರಬೇಕು. ಕೊಡುವ ಕೋರ್ಸುಗಳಿಂದ, ಶಿಕ್ಷಣದ ಬೆಲೆ ಎರಡನ್ನೂ ಮಾರುಕಟ್ಟೆ ನಿರ್ಧರಿಸಬೇಕು. ಕಾಲೇಜು-ವಿಶ್ವವಿದ್ಯಾಲಯ, ಉಚ್ಚಶಿಕ್ಷಣ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಕಿತ್ತುಹಾಕಬೇಕೆಂಬುದು ಅಂಬಾನಿ-ಬಿರ್ಲಾ ವರದಿಯ ಸಾರಾಂಶ.


ಈ ವರದಿಯ ಮತ್ತು ಶಿಕ್ಷಣದಲ್ಲಿ ವಿಶ್ವಬ್ಯಾಂಕ್ ಶರತ್ತುಗಳನ್ನು ಒಳಗೊಂಡಿರುವ ವಿಶ್ವವಿದ್ಯಾಲಯಗಳಿಗೆ ಒಂದು ಮಾದರಿ ಕಾನೂನನ್ನು ಬಿಜೆಪಿ ಸರ್ಕಾರ ತಂದಿದೆ. ಈ ಮಾದರಿ ಕಾನೂನು ಪ್ರಕಾರ ವಿಶ್ವವಿದ್ಯಾಲಯಗಳು ತಮ್ಮ ಖರ್ಚನ್ನು ತಾವೇ ಭರಿಸಬೇಕು. ಫೀ ಮೂಲಕ ಅಥವಾ ಖಾಸಗಿ ಬಂಡವಾಳ ಆಕರ್ಷಿಸುವ ಮೂಲಕ ಅವನ್ನು ಭರಿಸಲು ಅವರಿಗೆ ಪೂರ್ತಿ ಸ್ವಾತಂತ್ರ ಇರುತ್ತದೆ. ಶಿಕ್ಷಣ ಸರಕಿನಂತೆ ಮಾರುಕಟ್ಟೆಗೆ ಒಳಗಾಗುವ ಸೇವೆ ಎಂಬ WTO ಮತ್ತು GATS ನಿಯಮಗಳನ್ನು ಇದರಲ್ಲಿ ಅಳವಡಿಸಲಾಗಿದೆ. ಇದರಿಂದ ಖಾಸಗಿ ಮಾತ್ರವಲ್ಲ, ವಿದೇಶ ಬಂಡವಾಳ ಸಹ ಶಿಕ್ಷಣ ಕ್ಷೇತ್ರದಲ್ಲಿ ಬರಬಹುದು. ಈ ಮಾದರಿ ಕಾನೂನು ಬರುವ ಮೊದಲೇ ಈಗ ಇರುವ ಉಚ್ಚ ಶಿಕ್ಷಣ ಸಂಸ್ಥೆಗಳ ಅನುದಾನ ಕಡಿತ ಮಾಡಿದೆ. ಅವುಗಳ ವೆಚ್ಚದ ನಿಗದಿತ ಭಾಗ ಶುಲ್ಕದಿಂದಲೇ ಬರಬೇಕು ಎಂಬ ನಿಯಮವನ್ನು ಮೇ 2000ದಲ್ಲೇ ಮಾಡಿದೆ. ಈಗಾಗಲೇ ಶಿಕ್ಷಣ ಶುಲ್ಕ ಏರಿದೆ. ಸತತವಾಗಿ ಏರುತ್ತಿದೆ. ಅದರ ಪರಿಣಾಮವೂ ಕಾಣಲಾರಂಭಿಸಿದೆ. ಬಿಜೆಪಿ ಸರ್ಕಾರ ಆಡಳಿತ ಅವಧಿಯಲ್ಲಿ ಉಚ್ಚ ಶಿಕ್ಷಣದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳ ಶೇಕಡಾ 6.1ರಿಂದ ಶೇಕಡಾ 4.3ಕ್ಕೆ ಇಳಿದಿದೆ.

ಬಿಜೆಪಿ ಆಡಳಿತದಲ್ಲಿ ಸರ್ಕಾರ ಅನುದಾನಿತ ಉಚ್ಚ ಶಿಕ್ಷಣ ಸಂಸ್ಥೆ ಒಂದೂ ಸ್ಥಾಪಿತವಾಗಿಲ್ಲ. ಈಗಾಗಲೇ ಇರುವ ಉಚ್ಚ ಶಿಕ್ಷಣ ಸಂಸ್ಥೆ ಸೊರಗಲು ಆರಂಭವಾಗಿದೆ. ಶಿಕ್ಷಣ ಮಂತ್ರಿ ಜೋಷಿಯವರ ಐಐಎಂ ಶುಲ್ಕದ ಬಗ್ಗೆ ನಡೆಸುತ್ತಿರುವ ಗದ್ದಲ 'ಬರಿಯ' ನಾಟಕ. ಈ ಅವಧಿಯಲ್ಲಿ ನಾಯಿ ಕೊಡೆಗಳಂತೆ ಬೆಳೆದಿರುವುದೂ ಮೂರು ಸಾವಿರ ಬರಿ ಲಾಭದ ಮೇಲೆ ಕಣ್ಣಿಟ್ಟಿರುವ ಬಡ ಶಿಕ್ಷಣದ ಖಾಸಗಿ ಸಂಸ್ಥೆಗಳು. 17ರಿಂದ 23 ವಯಸ್ಸಿನ ಯುವಕ/ಯುವತಿಯರಲ್ಲಿ ಎಷ್ಟು ಪ್ರಮಾಣ ವಿಶ್ವ ವಿದ್ಯಾಲಯದಲ್ಲಿ ಶಿಕ್ಷಣದಲ್ಲಿ ತೊಡಗಿದ್ದಾರೆ ಎಂಬುದು ದೇಶದ ಭವಿಷ್ಯದ ಬೆಳವಣಿಗೆಯ ಸೂಚಕ. ಇಂಡಿಯಾದ ಬಗ್ಗೆ ಈ ಸೂಚಕ ಶೇ.6.4ರಲ್ಲಿ ಸ್ಥಗಿತವಾಗಿದೆ. ಇದು ವಿಶ್ವದ ವಿಕಾಸಶೀಲ ದೇಶಗಳ ಸರಾಸರಿ(ಶೇ.9.7)ಗಿಂತ ಬಹಳ ಹಿಂದಿದೆ. ಈ ಸೂಚಕ ದಕ್ಷಿಣ ಕೊರಿಯಾ(ಶೇ.52), ಥೈಲಾಂಡ್ (ಶೇ.20.1), ಮೆಕ್ಸಿಕೊ (ಶೇ.14.3), ಸ್ವಿಟ್‌ಜರ್‌ಲ್ಯಾಂಡ್ (ಶೇ.31.8), ಜರ್ಮನಿ(ಶೇ.42.7), ಬ್ರಿಟನ್ (ಶೇ.48.3), ಆಸ್ಟ್ರೇಲಿಯಾ (ಶೇ.58.2), ನ್ಯೂಝಿಲ್ಯಾಂಡ್ (ಶೇ.71.7), ಅಮೆರಿಕ(ಶೇ.81.1), ಮತ್ತು ಕೆನಡಾ(ಶೇ.100), ಈ ದೇಶಗಳಿಗಿಂತ ಬಹಳ ಹಿಂದೆ.

ಅದರಲ್ಲೂ ಜ್ಞಾನ ಆಧಾರಿತ ಕೈಗಾರಿಕಾ ಕ್ರಾಂತಿಯಲ್ಲಿ ನಂಬರ್ 1 ಬಯಸುವ ದೇಶಕ್ಕೆ ಖಂಡಿತ ಸರಿಯಾದ ಸ್ಥಿತಿ ಅಲ್ಲ.


ಶಿಕ್ಷಣದ ಕೇಸರೀಕರಣ ಬಿಜೆಪಿ ಸರ್ಕಾರ ಏಕನಾಮಿಸ್ಟಿನಿಂದ ಮಾಡಿದ ಒಂದೇ ಕೆಲಸ ಈ ಐದು ವರ್ಷಗಳಲ್ಲಿ, ಯು.ಜಿ.ಸಿ., ICHR ICSSR, IIAS, ASI, NCERT ಮುಂತಾದ ಉಚ್ಚ ಸಂಶೋಧನಾ ಸಂಸ್ಥೆಗಳಲ್ಲಿ ಸಂಘ ಪರಿವಾರದ ಅದರಲ್ಲೂ ಆರೆಸ್ಸೆಸ್ ಸದಸ್ಯರನ್ನು ಪ್ರಮುಖ ಆಯಕಟ್ಟಿನ ಜಾಗಗಳಲ್ಲಿ ತೋರಿಸಿದ್ದು. ಈ ಸಂಸ್ಥೆಗಳ ಸ್ವಾಯತ್ತತೆ ನಿರ್ನಾಮ ಮಾಡಿದ್ದು. ಚರಿತ್ರೆಯ ಪಠ್ಯ ಪುಸ್ತಕಗಳನ್ನು ಆರೆಸ್ಸೆಸ್ ಕೋಮುವಾದಿ ದೃಷ್ಟಿಕೋನಕ್ಕೆ ಅನುಗುಣವಾಗಿ ಬದಲಾಯಿಸಲಾಗಿದೆ. ಇದು ಶಾಶ್ವತ ಕೋಮುವಾದಿ ವೈಮನಸ್ಯಕ್ಕೆ ಬೇಕಾದ ತಳಹದಿ ತಯಾರು ಮಾಡುತ್ತದೆ. ಒಂದು ಕಡೆ ಕೋಮು ಸಾಮರಸ್ಯದ ನಾಶ, ಇನ್ನೊಂದು ಕಡೆ ಬಡವರು-ದಲಿತರನ್ನು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಿ ಸಾಮಾಜಿಕ ಪ್ರಗತಿ ಚಲನಶೀಲತೆ ವಿನಾಶದತ್ತ ಬಿಜೆಪಿ ಶಿಕ್ಷಣ ನೀತಿ ನಡೆದಿದೆ. ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸದೆ ಈ ದೇಶಕ್ಕೆ ಭವಿಷ್ಯವಿಲ್ಲ!.





ಅಡ್ವಾಣಿಜೀ ! ಸೂಪರ್‌ಪವರ್ ಆಗುವುದು ಎಂದರೆ

ಅಮೆರಿಕದ ಪೊಲೀಸು ಪ್ಯಾದೆ ಆಗುವುದೆ?



- ಅಫಘಾನಿಸ್ತಾನದ ಮೇಲಿನ ದಾಳಿಗೆ ಸಹಮತ
- ಇರಾಕ್ ಮೇಲೆ ಯುದ್ಧ ಖಂಡಿಸಲು ಹಿಂಜರಿಕೆ
- ಇರಾಕ್‌ಗೆ ಸೈನ್ಯ ಕಳಿಸಲು ತವಕ
- ಅಮೆರಿಕದ ಸೈನ್ಯದ ಜತೆ ಜಂಟಿ ಕವಾಯತು
- ಕುಖ್ಯಾತ CIA/FBI ಗಳಿಗೆ ಮೂಗು ತೂರಿಸಲು ಅವಕಾಶ

ಸ್ವತಂತ್ರ ವಿದೇಶ ನೀತಿ ಬೇಕು

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(M